

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 24 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 69 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಕೊಡಗು, ಹಾಸನ, ಮಂಡ್ಯದ ಕೆಲವೆಡೆ

ಭೂ ಕಂಪನ


- ಗ್ರಾಮೀಣ ಪ್ರದೇಶದ ಜನರಲ್ಲಿ ಭಾರೀ ಆತಂಕ
- ಭಯಬೇಡ: ಜನರಿಗೆ ಅಧಿಕಾರಿಗಳ ಅಭಯ

ಮೈಸೂರು, ಜೂ.23– ಕೊಡಗು, ಹಾಸನ ಮತ್ತು ಮಂಡ್ಯ ಜಿಲ್ಲೆಯ ಕೆಲವೆಡೆ ಗುರುವಾರ ಮುಂಜಾನೆ ಲಘು ಭೂಕಂಪನ ಸಂಭವಿಸಿದ್ದು, ಜನರಲ್ಲಿ ಆತಂಕ ಸೃಷ್ಟಿ ಮಾಡಿದೆ. ಅದರಲ್ಲೂ ಈ ಹಿಂದಿನ ಕಹಿ ಘಟನೆಗಳಿಂದಾಗಿ ಕೊಡಗಿನ ಜನತೆ ಬೆಚ್ಚಿ ಬಿದ್ದಿದ್ದಾರೆ.

ಗುರುವಾರ ಮುಂಜಾನೆ 4.37ರಲ್ಲಿ ರಿಕ್ಟರ್ ಮಾಪಕದಲ್ಲಿ ಭೂ ಕಂಪನದ ತೀವ್ರತೆ 3.4ರಷ್ಟು ದಾಖಲಾಗಿದೆ ಎಂದು ಬೆಂಗಳೂರಿನಲ್ಲಿರುವ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ಅಧಿಕೃತವಾಗಿ ತಿಳಿಸಿದೆ. ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕು ನಾಗರನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಮಲುಗನಹಳ್ಳಿ ಮಾಪನ ಕೇಂದ್ರದಿಂದ 0.8 ಕಿಮೀ ಅಂತರದಲ್ಲಿ ಭೂಕಂಪನದ ಕೇಂದ್ರ ಬಿಂದುವಿದ್ದು, ಇದರ ಪ್ರಭಾವವು ಅಲ್ಲಿಂದ ನೈರುತ್ಯ ದಿಕ್ಕಿನಲ್ಲಿ 2.3ಕಿಮೀ ಅಂತರದಲ್ಲಿರುವ ಕ್ಯಾತನಹಳ್ಳಿ ಗ್ರಾಪಂ ವ್ಯಾಪ್ತಿಯ ಹಿಂಡನಹಳ್ಳಿ, ಬಡ ಕ್ಯಾತನಹಳ್ಳಿ, ಉತ್ತರ ಈಶಾನ್ಯ ದಿಕ್ಕಿನಲ್ಲಿ 3.6 ಕಿಮೀ ವ್ಯಾಪ್ತಿಯ ಹಳ್ಳಿ ಮೈಸೂರು ಹೋಬಳಿಯಲ್ಲಿ ತೀವ್ರತೆ ವ್ಯಾಪಿಸಿದೆ.

ಹಾಸನ ಜಿಲ್ಲೆ ಭೂಕಂಪನ ವಲಯ 2ಕ್ಕೆ ಒಳಪಟ್ಟಿದ್ದು, ಈ ವಲಯದಲ್ಲಿ ಭೂಕಂಪನದ ಕೇಂದ್ರ ಬಿಂದುವಾಗಿರುವುದರಿಂದ ಹಾನಿಯ ಸಾಧ್ಯತೆ ಕಡಿಮೆ. ಈ ಕಂಪನ ಮಧ್ಯಮ ಮತ್ತು ವಿನಾಶಕಾರಿಯಲ್ಲದ ಕಾರಣ ಭಯಪಡುವ ಅಗತ್ಯವಿಲ್ಲ ಎಂದು ಕೆಎಸ್‌ಎನ್‌ಡಿಎಂಸಿ ನಿರ್ದೇಶಕರು ತಿಳಿಸಿದ್ದಾರೆ.

ಗುರುವಾರ ಬೆಳಗಿನಜಾವ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕು ರೇಂಜರ್ ಬ್ಲಾಕ್, ಅಮ್ಮಳ್ಳಿ ಗ್ರಾಮ, ನೇಗಳೆ ಗ್ರಾಮ, ಮಡಿಕೇರಿ ತಾಲೂಕಿನ ದೇವಸ್ತೂರು, ಮಡಿಕೇರಿ ನಗರ ಪ್ರದೇಶದಲ್ಲಿ ಸುಮಾರು 20 ಸೆಕೆಂಡ್‌ಗಳ ಕಾಲ ಭೂ ಕಂಪನವಾಗಿದ್ದು, ಕೆಲವು ಮನೆಗಳಲ್ಲಿ ಪಾತ್ರೆ ಹಾಗೂ ಕಿಟಕಿ ಗಾಜುಗಳು ಅದುರಿದ ಅನುಭವವಾಗಿದೆ.



ಕೊಡಗಲ್ಲೂ ಕಂಪನ: ಹಾಸನ ಜಿಲ್ಲೆ ಭೂಕಂಪನ ವಲಯ 2ಕ್ಕೆ ಒಳಪಟ್ಟಿದ್ದು, ಕೊಡಗು ಜಿಲ್ಲೆ ವಲಯ 3ಕ್ಕೆ ಒಳಪಡುತ್ತದೆ ಎಂದು ಕೊಡಗು ಜಿಲ್ಲೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಪ್ರಕಟಣೆ ತಿಳಿಸಿದೆ. ಭೂ ಕಂಪನದ ಕೇಂದ್ರ ಬಿಂದುವಿನಿಂದ ಸೋಮವಾರಪೇಟೆ 46 ಕಿಮೀ (ವಾಯು ಮಾರ್ಗ) ಹಾಗೂ ಮಡಿಕೇರಿ 56 ಕಿಮೀ(ವಾಯು ಮಾರ್ಗ) ದೂರವಿರುವುದರಿಂದ ಸಣ್ಣ ಪ್ರಮಾಣದ ಕಂಪನವಾಗಿದೆ. ಈ ಘಟನೆಯಿಂದ ಜನರು ಭಯಪಡುವ ಅಗತ್ಯವಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಇದೀಗ ಮಳೆಗಾಲದಲ್ಲೇ ಭೂಕಂಪನವಾಗಿರುವ ಹಿನ್ನೆಲೆಯಲ್ಲಿ 2018–19ರಲ್ಲಿ ಪ್ರಕೃತಿ ವಿಕೋಪ ಘಟಿಸಿದ್ದ ಗ್ರಾಮಗಳಲ್ಲಿ ಆತಂಕ ಮನೆ ಮಾಡಿದೆ. ಈ ಹಿಂದೆ ಭಾರೀ ಮಳೆ ಹಾಗೂ ಭೂ ಕುಸಿತದಿಂದ ಬೆಟ್ಟ ಶ್ರೇಣಿಗಳೇ ಕೊಚ್ಚಿ ಹೋಗಿದ್ದವು. ಅದನ್ನು ನೆನಪಿಸಿಕೊಂಡು ಜನರು ಭಯಭೀತರಾಗಿದ್ದಾರೆ. ಅಂದು ಭೂಕುಸಿತ ಕುರಿತು ಅಧ್ಯಯನ ನಡೆಸಿದ್ದ ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ ಭೂಗರ್ಭ ವಿಜ್ಞಾನಿಗಳ ತಂಡ ಲಘು ಭೂಕಂಪನಕ್ಕೂ ಭೂ ಕುಸಿತಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿತ್ತು. ಹೀಗಾಗಿ ಇಂದು ಘಟಿಸಿರುವ ಲಘು ಭೂಕಂಪದ ಬಗ್ಗೆ ಭಯಪಡಬೇಕಾದ ಅವಶ್ಯಕತೆ ಇಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೋಮವಾರಪೇಟೆ ಪ್ರಕರಣದ ರೇಂಜರ್ಸ್ ಬ್ಲಾಕ್‌ನಲ್ಲಿ 2004–05ರಲ್ಲಿ ಮಳೆಗಾಲದ ವೇಳೆ ಭೂಮಿಯೊಳಗಿನಿಂದ ಶಬ್ದ ಬರುತ್ತಿತ್ತು. ಆ ಸಮಯದಲ್ಲಿ ಪ್ರಾಕೃತಿಕ ವಿಕೋಪ ಕೇಂದ್ರದ ತಜ್ಞರು ಪುಣೆಯಿಂದ ಆಗಮಿಸಿ ಅಧ್ಯಯನ ನಡೆಸಿ ಇದು ಭೂಕಂಪವಲ್ಲ. ಭೂಮಿ ಆಳದಲ್ಲಿನ ಬಂಡೆಗಳು ನೀರಿನ ರಭಸಕ್ಕೆ ಒಂದಕ್ಕೊಂದು ಡಿಕ್ಕಿ ಹೊಡೆದಾಗ ಬರುವ ಶಬ್ದ ಎಂದು ವರದಿ ನೀಡಿದ್ದರು. ಆದರೂ ರೇಂಜರ್ಸ್ ಬ್ಲಾಕ್‌ನಲ್ಲಿ ಸಿಸ್ಮೋಗ್ರಾಫ್ ಯಂತ್ರವನ್ನು ಅಳವಡಿಸಲಾಗಿತ್ತು. ಈ ಯಂತ್ರದಿಂದ ಅಧ್ಯಯನಕ್ಕೆ ಹೆಚ್ಚು ಅನುಕೂಲವಾಗಿತ್ತು. ಭೂ ಕಂಪನದ ತೀವ್ರತೆಯನ್ನು ಅರಿಯಲು ಈ ಯಂತ್ರ ಸಹಕಾರಿಯಾಗಿತ್ತು. ಆದರೆ ಅಧಿಕಾರಿಗಳು ಕೆಲ ವರ್ಷದ ಹಿಂದೆ ಸಿಸ್ಮೋಗ್ರಾಫ್ ಯಂತ್ರವನ್ನು ತೆರವುಗೊಳಿಸಿದ್ದಾರೆ ಎಂದು ಹೇಳುತ್ತಿರುವ ರೇಂಜರ್ಸ್ ಬ್ಲಾಕ್ ನಿವಾಸಿಗಳು ಮತ್ತೆ ಈ ಯಂತ್ರವನ್ನು ಅಳವಡಿಸಬೇಕು ಎಂದು ಒತ್ತಾಯಿಸಿದ್ದಾರೆ. ಹಾರಂಗಿ ಜಲಾಶಯದಲ್ಲಿ ಅಳವಡಿಸಿರುವ ಸಿಸ್ಮೋಗ್ರಾಫ್ ಯಂತ್ರದಲ್ಲೂ ಕೂಡ ಇಂದಿನ ಭೂಕಂಪನ ಬಗ್ಗೆ ದಾಖಲಾಗಿದೆ.

ಕಿಕ್ಕೇರಿ, ಕೆ.ಆರ್.ಪೇಟೆಯಲ್ಲೂ ಕಂಪಿಸಿದ ಅನುಭವ: ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಕಿಕ್ಕೇರಿ ಸುತ್ತಮುತ್ತಲಿನ ಮಾದಾಪುರ, ಚಿನ್ನೇನಹಳ್ಳಿ, ಮಾದಾಪುರ ಕೊಪ್ಪಲು, ಗೊಂದಿಹಳ್ಳಿ, ಗಾಣದಹಳ್ಳಿ ಪ್ರದೇಶದಲ್ಲಿ ಭೂಕಂಪದ ಅನುಭವವಾಗಿದೆ. ಕೆ.ಆರ್.ಪೇಟೆ ನಗರದ ಕೆಲ ಪ್ರದೇಶಗಳಲ್ಲಿ ಕೂಡ ಭೂಕಂಪನದ ಅನುಭವವಾಗಿದೆ ಎಂದು ಸಾರ್ವಜನಿಕರು ತಿಳಿಸಿದ್ದಾರೆ.

ಮೈಸೂರು ಮೇಯರ್: ಜೂನ್ ಅಂತ್ಯಕ್ಕೆ ಮೀಸಲಾತಿ ಪ್ರಕಟ ಸಾಧ್ಯತೆ

ಮೈಸೂರು, ಜೂ. 23 (ಆರ್‌ಕೆ)– ವಿಧಾನಪರಿಷತ್ ಚುನಾವಣೆ, ಪ್ರಧಾನಮಂತ್ರಿಗಳ ರಾಜ್ಯ ಪ್ರವಾಸದ ಹಿನ್ನೆಲೆಯಲ್ಲಿ ವಿಳಂಬವಾಗಿರುವ ಮೈಸೂರು ಮೇಯರ್, ಉಪಮೇಯರ್ ಚುನಾವಣೆಗೆ ಜೂನ್ ಅಂತ್ಯಕ್ಕೆ ಮೀಸಲಾತಿ ಪ್ರಕಟವಾಗುವ ಸಾಧ್ಯತೆ ಇದೆ.



ಸುನಂದಾ ಪಾಲನೇತ್ರ ಅವರ ಮೇಯರ್ ಅಧಿಕಾರಾವಧಿ 2022ರ ಫೆಬ್ರವರಿ 23ರಂದೇ ಅಂತ್ಯಗೊಂಡಿದೆಯಾದರೂ, ಸರ್ಕಾರ ಮೀಸಲಾತಿ ಪ್ರಕಟಿಸುವುದು ವಿಳಂಬವಾಗಿರುವುದರಿಂದ ಹಾಗೂ ವಿಧಾನಪರಿಷತ್ ಚುನಾವಣೆ ನೀತಿ ಸಂಹಿತೆ ಅಡ್ಡಿಯಾದ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನ ಅವಧಿಯ ಮೇಯರ್ ಚುನಾವಣೆ ಸಾಧ್ಯವಾಗಿಲ್ಲ.

ಇದರಿಂದ ಸುನಂದಾ ಪಾಲನೇತ್ರ ಅವರೇ ಪ್ರಭಾರ ಮೇಯರ್ ಆಗಿ ಮುಂದುವರಿದಿದ್ದಾರೆ. ಇದೀಗ ವಿಧಾನಪರಿಷತ್ ಚುನಾವಣೆ ಮುಕ್ತಾಯಗೊಂಡಿರುವುದರಿಂದ ಮೀಸಲಾತಿ ನಿಗದಿ ಪ್ರಕ್ರಿಯೆಗೆ ಚಾಲನೆ ನೀಡಿದ್ದು, ಜೂನ್ ಅಂತ್ಯಕ್ಕೆ ಮೀಸಲಾತಿ ಪ್ರಕಟಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಪರಿಶಿಷ್ಟ ಪಂಗಡ (ಎಸ್‌ಟಿ) ಅಥವಾ ಸಾಮಾನ್ಯ ವರ್ಗಕ್ಕೆ ಈ ಬಾರಿ ಮೈಸೂರು ಮೇಯರ್ ಸ್ಥಾನ ಮೀಸಲಾಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಮೀಸಲಾತಿ ನಿಗದಿಗೆ ಬಿಜೆಪಿ, ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳಿಂದ ಒತ್ತಡ ಜಾಸ್ತಿಯಾಗಿದ್ದು, ಮೇಯರ್ ಚುನಾವಣೆ ಸಂಬಂಧ ಕುತೂಹಲ ಕೆರಳಿಸಿದೆ. ▶ 8ನೇ ಪುಟಕ್ಕೆ

ಅಘಾಡಿ ಆಫರ್; ಬಿಜೆಪಿ ಮೌನ, ದಡ ಸೇರದ 'ಮಹಾ' ಬಂಡಾಯ

ಮುಂಬೈ, ಜೂ. 23– ಮಹಾ ವಿಕಾಸ್ ಅಘಾಡಿ ಮೈತ್ರಿಕೂಟದ ಸರ್ಕಾರ ಉಳಿಸಿಕೊಳ್ಳಲು ಶಿವಸೇನೆ, ಕಾಂಗ್ರೆಸ್ ಹಾಗೂ ಎನ್‌ಸಿಪಿ ನಾಯಕರು ಹರಸಾಹಸಪಡುತ್ತಿರುವ ವೇಳೆಯೇ ಇಂದು ಮತ್ತೆ ಮೂವರು ಶಿವಸೇನಾ ಶಾಸಕರು ಬಂಡಾಯ ನಾಯಕ ಏಕನಾಥ್ ಶಿಂಧೆ ಜೊತೆ ಸೇರಿಕೊಂಡಿದ್ದಾರೆ. ಇದರಿಂದಾಗಿ ಬಂಡಾಯ ಶಾಸಕರ ಬಲ ವೃದ್ಧಿಗೊಳ್ಳುತ್ತಿದೆ. ಶಿವಸೇನೆಯ 40 ಶಾಸಕರು ಮಾತ್ರವಲ್ಲದೇ 8 ಮಂದಿ ಪಕ್ಷೇತರರು ಕೂಡ ಗುವಾಹಟಿಗೆ ತೆರಳಿದ್ದಾರೆ.

ಶತಾಯಗತಾಯ ಅಘಾಡಿ ಮೈತ್ರಿಕೂಟದ ಸರ್ಕಾರವನ್ನು ಉಳಿಸಿಕೊಳ್ಳಲೇಬೇಕು. ಯಾವುದೇ ಕಾರಣಕ್ಕೂ ಎನ್‌ಡಿಎ ಮೈತ್ರಿಕೂಟದ ಸರ್ಕಾರ ರಚನೆಗೆ ಅವಕಾಶ ನೀಡಬಾರದು ಎಂಬ ನಿಟ್ಟಿನಲ್ಲಿ ಶಿವಸೇನೆ ಬಂಡಾಯ ನಾಯಕ ಏಕನಾಥ್ ಶಿಂಧೆ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡುವುದಾಗಿ ತಿಳಿಸಲಾಗಿದೆ. ಆದರೆ ಅವರು ಈ ಪ್ರಸ್ತಾವನೆಯನ್ನು ಸಾರಾಸಗಟಾಗಿ ತಿರಸ್ಕರಿಸಿದ್ದು, ನನಗೆ ಪಕ್ಷದ ಹಿತ ಮುಖ್ಯವಾಗಿದ್ದು, ಹಿಂದುತ್ವ ತತ್ವಗಳಲ್ಲಿ ರಾಜೀ ಮಾಡಿಕೊಳ್ಳಲಿರುವುದಾಗಿ ಹೇಳುವ ಮೂಲಕ ಬಿಜೆಪಿ ಜೊತೆ ಸೇರಿ ಸರ್ಕಾರ ರಚಿಸುವ ಇಂಗಿತವನ್ನು ಪರೋಕ್ಷವಾಗಿ ವ್ಯಕ್ತಪಡಿಸಿದ್ದಾರೆ. ಮಹಾರಾಷ್ಟ್ರ ಬಿಕ್ಕಟ್ಟಿನ ಬಗ್ಗೆ ಬಿಜೆಪಿ ಈವರೆಗೂ ಮೌನ ▶ 8ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿ 10 ಸ್ಥಾನ ಗೆಲ್ಲಲೇಬೇಕು...

ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರಿಗೆ ಸಿದ್ದರಾಮಯ್ಯ ಟಾಸ್ಕ್



ಮೈಸೂರು, ಜೂ.23(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಲು ಪಕ್ಷದ ಕಾರ್ಯಕರ್ತರು ಸಜ್ಜಾಗಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕರೂ ಆದ ಮಾಜಿ ಸಿಎಂ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

ಜಿ.ಟಿ.ದೇವೇಗೌಡರ ಮುಂದಿನ ರಾಜಕೀಯ ನಡೆ ಕುರಿತು ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಅವರು ಇನ್ನೂ ಜೆಡಿಎಸ್ ಶಾಸಕರು. ಈ ಬಗ್ಗೆ ನೀವು ಅವರನ್ನೇ ಕೇಳಿ ಎಂದರು.

ಮೈಸೂರು ತಾಲೂಕಿನ ವರಕೋಡು ಗೇಟ್ ಬಳಿ ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿ ಹಮ್ಮಿಕೊಂಡಿದ್ದ ನವ ಸಂಕಲ್ಪ ಚಿಂತನಾ ಶಿಬಿರ ▶ 8ನೇ ಪುಟಕ್ಕೆ

ಮೋದಿ ಭೇಟಿಯಿಂದ ಮೈಸೂರಿನ ಕೆಲ ರಸ್ತೆಗಳು ಅಭಿವೃದ್ಧಿಗೊಂಡವು!

ಮೈಸೂರು: ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿದ್ದರಿಂದ ಕೇವಲ ರಸ್ತೆಗಳು ಅಭಿವೃದ್ಧಿಗೊಂಡಿದ್ದು ಬಿಟ್ಟರೆ, ಬೇರೇನೂ ಲಾಭವಾಗಿಲ್ಲ ಎಂದು ಸಿದ್ದರಾಮಯ್ಯ ವ್ಯಂಗ್ಯವಾಡಿದರು.

ಮೋದಿ ಭೇಟಿಯಿಂದ ಮೈಸೂರಿನ ಕೆಲ ರಸ್ತೆಗಳನ್ನು ಅಭಿವೃದ್ಧಿ ಮಾಡಿದ್ದಾರೆ. ಇಲ್ಲವಾದರೆ ಮಾಡುತ್ತಿರಲಿಲ್ಲ. ರಾಜ್ಯಕ್ಕೆ ಪ್ರಧಾನಿ ಆಗಮಿಸಿದರೂ ರಾಜ್ಯ ಸರ್ಕಾರ ಯಾವುದೇ ಮನವಿಯನ್ನು ಪ್ರಧಾನಿಗೆ ನೀಡಿಲ್ಲ. ಮೋದಿ ರಾಜ್ಯಕ್ಕೆ ಯಾವುದೇ ಕೆಲಸ ಕಾರ್ಯಗಳನ್ನು ಮಾಡಿಕೊಡುವುದಿಲ್ಲ ಎಂದು ಗೊತ್ತಿದ್ದೇ ಅವರಿಗೆ ಮನವಿ ನೀಡಲಿಲ್ಲ ಎಂದು ಕಿಡಿಕಾರಿದರು. ▶ 8ನೇ ಪುಟಕ್ಕೆ

ಶ್ರೀರಾಂಪುರದಲ್ಲಿ ಹಾಡಹಗಲೇ ಮಹಿಳೆ ಕಟ್ಟಿ ಹಾಕಿ

ನಗದು, ಚಿನ್ನಾಭರಣ ಕಳವು

ಕೆಲವೇ ಗಂಟೆಗಳಲ್ಲಿ ಮೈಸೂರಿನ ಓರ್ವ ಬೆಂಗಳೂರಿನ ಮೂವರು ಖದೀಮರ ಸೆರೆ

ಮೈಸೂರು,ಜೂ.23(ಆರ್‌ಕೆ)–ತಂಗಿಯನ್ನು ಸಂಗೀತ ತರಗತಿಗೆ ಸೇರಿಸಬೇಕೆಂದು ನೆಪ ಮಾಡಿಕೊಂಡು ಬಂದು, ಮಹಿಳೆಯನ್ನು ಕಟ್ಟಿಹಾಕಿ ಹಾಡಹಗಲೇ ಚಿನ್ನ, ಬೆಳ್ಳಿ ಆಭರಣ ಮತ್ತು ನಗದು ದೋಚಿದ್ದ ನಾಲ್ವರು ಖದೀಮರನ್ನು ಕುವೆಂಪುನಗರ ಠಾಣೆ ಪೊಲೀಸರು ಕೆಲವೇ ಗಂಟೆಗಳಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕುವೆಂಪುನಗರ ಪೊಲೀಸರ ಮಿಂಚಿನ ಕಾರ್ಯಾಚರಣೆ

ಮೈಸೂರಿನ ಶ್ರೇಯಸ್(22) ಬೆಂಗಳೂರಿನ ಪ್ರವೀಣ್‌ಕುಮಾರ್(32), ಅವಿನಾಶ್(30) ಹಾಗೂ ರವಿನಂದನ್(30) ಬಂಧಿತ ಖದೀಮರಾಗಿದ್ದು, ಅವರಿಂದ 4,000 ರೂ. ನಗದು, 70,000 ರೂ. ಮೌಲ್ಯದ 15 ಗ್ರಾಂ ಚಿನ್ನಾ ಭರಣ ಮತ್ತು 200 ಗ್ರಾಂ ಬೆಳ್ಳಿ ಪದಾರ್ಥಗಳನ್ನು ವಶಪಡಿಸಿಕೊಂಡಿದ್ದಾರೆ.

ಜೂನ್ 21ರಂದು ಮಧ್ಯಾಹ್ನ 12.30 ಗಂಟೆ ವೇಳೆಗೆ ಮೈಸೂರಿನ ಶ್ರೀರಾಂಪುರದ ಬೆಮೆಲ್ ಲೇಔಟ್ 2ನೇ ಕ್ರಾಸ್‌ನಲ್ಲಿರುವ ಜಿ.ರವೀಂದ್ರ ಅವರ ಮನೆಗೆ ಇಬ್ಬರು ಬಂದು ಬಾಗಿಲು ತಟ್ಟಿದ್ದಾರೆ. ಸಂಗೀತ ತರಗತಿ ನಡೆಸುತ್ತಿದ್ದ ರವೀಂದ್ರ ಅವರು, ಮನೆಯಲ್ಲಿರಲಿಲ್ಲ. ಹಾಗಾಗಿ ಅವರ ಪತ್ನಿ ಕೆ. ರಂಜನಿ ಅವರು ಬಾಗಿಲು ತೆರೆದಾಗ ಯುವಕರಿಬ್ಬರಲ್ಲಿ ಓರ್ವ, ತನ್ನ ತಂಗಿಯನ್ನು ಸಂಗೀತಕ್ಕೆ ಸೇರಿಸಬೇಕೆಂದು ಹೇಳಿದ್ದಾನೆ. ಆಗ ಗೃಹಿಣಿ ಒಳಗೆ ಕರೆದಿದ್ದಾರೆ.

ಕುಳಿತುಕೊಂಡ ನಂತರ ಕುಡಿಯಲು ನೀರು ಕೇಳಿದ ಖದೀಮರು, ಒಳಗೆ ಹೋಗಿ ನೀರು ತರುವಷ್ಟರಲ್ಲಿ ಬಾಗಿಲು ಬಂದ್ ಮಾಡಿ, ರಂಜನಿಯವರ ಕೈಗಳನ್ನು ಬಟ್ಟೆಯಿಂದ ಕಟ್ಟಿ ಕುತ್ತಿಗೆ ಬಳಿ ಚಾಕು ಇಟ್ಟು ಬೆದರಿಸಿ, ಚಿನ್ನದ ಸರ, ಬೆಳ್ಳಿ ಆಭರಣಗಳು ಹಾಗೂ 4,000 ರೂ. ನಗದು ದೋಚಿ ಹೊರಗೆ ನಿಂತಿದ್ದ ಮತ್ತಿಬ್ಬರೊಂದಿಗೆ ಪರಾರಿಯಾಗಿದ್ದಾರೆ. ಘಟನೆಯಿಂದ ಗಾಬರಿಯಾಗಿದ್ದ ರಂಜನಿ ಅವರು, ಮನೆಗೆ ಬಂದ ರವೀಂದ್ರ ಅವರಿಗೆ ವಿಷಯ ತಿಳಿಸಿದ ತಕ್ಷಣ ಸಂಜೆ ▶ 8ನೇ ಪುಟಕ್ಕೆ

ಬಹುಮತವಿದ್ದರೂ ಇನ್ನು ಮುಂದೆ ಉಳಿಗಾಲವಿಲ್ಲ

ಬೆಂಗಳೂರು, ಜೂ.23 (ಕೆಎಂಶಿ) –ಮುಂದಿನ ದಿನಗಳಲ್ಲಿ ಸ್ಪಷ್ಟ ಬಹುಮತ ಬಂದ ಸರ್ಕಾರವೂ ಉಳಿಯೋದು ಅನುಮಾನ ಎಂದು ಮಾಜಿ ಸಿಎಂ ಕುಮಾರಸ್ವಾಮಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಪೂರ್ಣ ಬಹುಮತ ಪಡೆದ ಸರ್ಕಾರದ ಅವಧಿ ಮುಗಿಸೋಕು ಬಿಡೋದಿಲ್ಲ ಅನ್ನಿಸುತ್ತೆ ಎಂದರು. ಬಿಜೆಪಿಗೆ ಅಧಿಕಾರ ದಾಹ ಹೆಚ್ಚಾಗಿದೆ. ಬೇರೆಯವರು ಅಧಿಕಾರದಲ್ಲಿ ಇರೋದನ್ನು ಬಿಜೆಪಿಗೆ ಸಹಿಸೋಕೆ ಆಗ್ತಿಲ್ಲ. ಮಹಾರಾಷ್ಟ್ರ ಮೇಲ್ನೋಟಕ್ಕೆ ಉದ್ಧವ್ ಶಾಸಕರ ವಿಶ್ವಾಸ ಗಳಿಸಿಲ್ಲ ಅಂತಿದ್ದಾರೆ. ಆದರೆ ಅದರ ಹಿಂದೆ ಇರೋದು ಬಿಜೆಪಿಯೇ. ಕರ್ನಾಟಕದಲ್ಲಿ ನನಗೂ ಇದರ ಅನುಭವ ಆಗಿದೆ. ನನ್ನ ಮೇಲು ಶಾಸಕರನ್ನು ವಿಶ್ವಾಸಕ್ಕೆ ತಗೊಂಡಿಲ್ಲ ಎಂದು ಆರೋಪ ಮಾಡಿದ್ದರು. ನಾನು ಕಾಂಗ್ರೆಸ್ ಶಾಸಕರ ಕ್ಷೇತ್ರದ ಅಭಿವೃದ್ಧಿಗೆ 19 ಸಾವಿರ ಕೋಟಿ ಕೊಟ್ಟೆ, ಮಹಾರಾಷ್ಟ್ರದ ಬಿಜೆಪಿ ನಡವಳಿಕೆ ಸಂವಿಧಾನ ರಚನೆಗೆ ಮಾಡಿದ ಅಪಚಾರ ಎಂದರು.

ಆರ್.ಟಿ. ನಗರಕ್ಕೆ ವಿದ್ಯುತ್ ಕಲ್ಪಿಸಲು ಮುಡಾದಿಂದ 23 ಕೋಟಿ ಬಿಡುಗಡೆ



ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವುದು. ಆಯುಕ್ತ ದಿನೇಶ್‌ಕುಮಾರ್ ಚಿತ್ರದಲ್ಲಿದ್ದಾರೆ.

- ನಿವೇಶನಗಳ ಖಾತಾ ನೋಂದಣಿ, ವರ್ಗಾವಣೆ, ಪೌತಿ ಖಾತೆ ವರ್ಗಾವಣೆ, ಕ್ರಯದ ಮೂಲಕ ಖಾತಾ ವರ್ಗಾವಣೆ, ಕ್ರಯಪತ್ರ ನೋಂದಣಿ ಆದೇಶ ನೀಡುವ ಅಧಿಕಾರವನ್ನು ಕಾರ್ಯದರ್ಶಿ ಬದಲಿಗೆ ಆಯಾ ವಲಯಗಳ ವಿಶೇಷ ತಹಸೀಲ್ದಾರರಿಗೆ ವಹಿಸಲು ನಿರ್ಧರಿಸಿದೆ.
- 73.25 ಕಿ.ಮೀ. ಪೆರಿಫೆರಲ್ ರಿಂಗ್ ರಸ್ತೆಯನ್ನು 1971 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಲು ವಿಸ್ತೃತ ಯೋಜನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ಧರಿಸಿದ್ದು, ಕೇಂದ್ರ ಸರ್ಕಾರದ ಭಾರತ ಮಾಲಾ ಫೇಸ್–2 ಯೋಜನೆಯಲ್ಲಿ ಸೇರಿಸಲು ಪ್ರಯತ್ನಿಸಲಾಗುತ್ತಿದೆ.

ಮೈಸೂರು, ಜೂ.23(ಆರ್‌ಕೆ)–ಮೈಸೂರಿನ ಆರ್‌ಟಿ ನಗರಕ್ಕೆ ಸಮರ್ಪಕ ವಿದ್ಯುತ್ ಸಂಪರ್ಕ ಕಲ್ಪಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನಿರ್ಧರಿಸಿದೆ.

ಮುಡಾ ಕಚೇರಿ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ರಾಜೀವ್, ಕೆಲ ಕಾರಣಗಳಿಂದಾಗಿ ರವೀಂದ್ರನಾಥ ಠಾಗೂರ್ ನಗರಕ್ಕೆ ವಿದ್ಯುತ್ ಸೌಲಭ್ಯ ಕಲ್ಪಿಸಿರಲಿಲ್ಲ. ಪರಿಣಾಮ ನಿವೇಶನ ಹಂಚಿಕೆಯಾದವರು ಮನೆ ನಿರ್ಮಿಸಲು ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು ಅತೀ ಹೆಚ್ಚು ಶುಲ್ಕ ಪಾವತಿಸುವಂತಾಗಿತ್ತು. ಅವರ ಸಮಸ್ಯೆ ಅರಿತು ಇದೀಗ ಪ್ರಾಧಿಕಾರವು 66/11 ಕೆ.ವಿ. ಸಾಮರ್ಥ್ಯದ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ 23 ಕೋಟಿ ರೂ. ಅನುದಾನ ಬಿಡುಗಡೆ ಮಾಡಲು ಬುಧವಾರ ನಡೆದ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ನೀಡಲಾಯಿತು ಎಂದರು.

ಕಬಿನಿಯಿಂದ ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಬಿದರಗೂಡು ಯೋಜನೆಗೆ 150 ಕೋಟಿ ರೂ. ವೆಚ್ಚವನ್ನು ಮುಡಾದಿಂದಲೇ ಭರಿಸಿ ಅನುದಾನವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ. ಇದರಿಂದ ಪಾಲಿಕೆ, ಮುಡಾ ಹಾಗೂ ಇತರ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಬಡಾವಣೆಗಳಿಗೆ 180 ಎಂಎಲ್‌ಡಿ ನೀರು ಪೂರೈಸಬಹುದಾಗಿದೆ ಎಂದರು.

ಮುಂದಿನ 50 ವರ್ಷಗಳವರೆಗೆ ಬಿದರಗೂಡು ಯೋಜನೆಯಿಂದಾಗಿ ಕುಡಿಯುವ ನೀರನ್ನು ಪೂರೈಸಬಹುದಾಗಿದೆ. ಜಾಕ್‌ವೆಲ್‌ನಿಂದ 180 ಎಂಎಲ್‌ಡಿ ನೀರು ಸರಬರಾಜು ಮಾಡಲು ಪೈಪ್‌ಲೈನ್ ಅಳವಡಿಸಲಾಗಿದೆಯಾದರೂ, ಪ್ರಸ್ತುತ 60 ಎಂಎಲ್‌ಡಿ ನೀರನ್ನು ಮಾತ್ರ ಪೂರೈಸಲಾಗುತ್ತಿದೆ. 180 ಎಂಎಲ್‌ಡಿ ಸಾಮರ್ಥ್ಯಕ್ಕೆ ಉನ್ನತೀಕರಿಸಲು ಅಗತ್ಯವಿದ್ದ 150 ಕೋಟಿ ರೂ. ಅನುದಾನವನ್ನು ಭರಿಸಲು ಪ್ರಾಧಿಕಾರ ನಿರ್ಧರಿಸಿತು ಎಂದು ರಾಜೀವ್ ತಿಳಿಸಿದರು.

ಅನುಮೋದಿತ ನಕ್ಷೆಯಂತೆ ನಿರ್ಮಿಸಿರುವ ಮನೆಗಳಿಗೆ 7 ದಿನದೊಳಗಾಗಿ ಸಿಆರ್ ನೀಡುವುದು, ನಕ್ಷೆ ಉಲ್ಲಂಘನೆಯಾಗಿರುವ ಕಟ್ಟಡಗಳಿಗೆ ವಾಸಯೋಗ್ಯ ದೃಢೀಕರಣ ಪತ್ರ ನೀಡಲು ನಿರ್ಧರಿಸಲಾಗಿದ್ದು, ಮನೆ ನಿರ್ಮಿಸಲು ನಿವೇಶನ ಮಂಜೂರಾತಿದಾರರಿಗೆ ಬ್ಯಾಂಕ್‌ನಿಂದ ಸಾಲ ಪಡೆಯಲು ನಿರಾಕ್ಷೇಪಣಾ ಪತ್ರ ನೀಡಲೂ ಮುಡಾ ಸಭೆಯು ನಿರ್ಧರಿಸಿದೆ ಎಂದರು. ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ಕಾರ್ಯದರ್ಶಿ ವೆಂಕಟರಾಜು, ಸದಸ್ಯರಾದ ಲಕ್ಷ್ಮೀದೇವಿ, ಲಿಂಗಣ್ಣ, ನವೀನ್‌ಕುಮಾರ್, ಮಾದೇಶ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೂವರು ಸಾಧಕರಿಗೆ ಕೆಂಪೇಗೌಡರ ಗೌರವಾರ್ಥ ಅಂತರರಾಷ್ಟ್ರೀಯ ಪ್ರಶಸ್ತಿ

- ತಲಾ ಐದು ಲಕ್ಷ ನಗದು ಪುರಸ್ಕಾರ
- ಕೆಂಪೇಗೌಡ ಕೋಟೆ, ಸ್ಮಾರಕ ಸಂರಕ್ಷಣೆ



ಬೆಂಗಳೂರು,ಜೂ.23 (ಕೆಎಂಶಿ)–ನಾಡಪ್ರಭು ಕೆಂಪೇಗೌಡರ ಗೌರವಾರ್ಥ ಈ ವರ್ಷದಿಂದ ಮೂವರು ಸಾಧಕರಿಗೆ ತಲಾ 5 ಲಕ್ಷ ರೂ. ನಗದುಸಹಿತ ಅಂತಾರಾಷ್ಟ್ರೀಯ ಪ್ರಶಸ್ತಿ ಕೊಡಲಾಗುವುದು ಎಂದು ಸಚಿವ ಡಾ.ಅಶ್ವತ್ಥ ನಾರಾಯಣ ಹೇಳಿದ್ದಾರೆ. ಕೆಂಪೇಗೌಡರ 513ನೇ ಜಯಂತಿಯಲ್ಲಿ ಮಾತನಾಡಿದ ಅವರು, 'ಕೆಂಪೇಗೌಡರು ಕಟ್ಟಿಸಿರುವ ಐತಿಹಾಸಿಕ ಕೋಟೆಯನ್ನು ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಿ, ಸಂರಕ್ಷಿಸಲಾಗುವುದು' ಎಂದು ಭರವಸೆ ನೀಡಿದರು. ಕೆಂಪೇಗೌಡರ ವೀರಸಮಾಧಿ ಇರುವ ಕೆಂಪಾಪುರ ಗ್ರಾಮದಲ್ಲಿ ಪರಂಪರೆಯ ಸಂರಕ್ಷಣೆಯನ್ನು ಸರಕಾರ ಮಾಡುತ್ತಿದೆ. ಜತೆಗೆ, ನಾಡಪ್ರಭುವಿಗೆ ಸೇರಿದ ಸಾವನದುರ್ಗ, ಹುಲಿಯೂರುದುರ್ಗ ಮುಂತಾದ ಸ್ಥಳಗಳನ್ನು ಕೂಡ ಆಕರ್ಷಕವಾಗಿ ಅಭಿವೃದ್ಧಿ ಮಾಡಲಾಗುವುದು. ಜತೆಗೆ, ಇದೇ 27ರಂದು ಕೆಂಪೇಗೌಡರ ಜಯಂತಿಯನ್ನು ವಿಧಾನಸೌಧದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುವುದು. ಕೆಂಪೇಗೌಡರಿಗೆ ಸೂಕ್ತ ಗೌರವ ನೀಡುವ ಉದ್ದೇಶದಿಂದ ಬೆಂಗಳೂರು ವಿಮಾನ ನಿಲ್ದಾಣದಲ್ಲಿ 108 ಅಡಿ ಎತ್ತರದ ಬೃಹತ್ ಪ್ರತಿಮೆ ಸ್ಥಾಪಿಸಲಾಗುತ್ತಿದೆ ಎಂದರು.

ಸಾರ್ವಜನಿಕ ಸ್ಥಳಗಳಲ್ಲಿ ನಿಂದನೆ ಮಾಡಿದರೆ ಮಾತ್ರ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಅನ್ವಯ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ನಿಂದನೆ ಮಾಡಿದರೆ ಮಾತ್ರ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಅನ್ವಯವಾಗುತ್ತದೆ ಎಂದು ಕರ್ನಾಟಕ ಹೈಕೋರ್ಟ್ ಹೇಳಿದೆ. ಕಟ್ಟಡದ ನೆಲಮಹಡಿ ಸಾರ್ವಜನಿಕ ವೀಕ್ಷಣೆಯ ಸ್ಥಳವಲ್ಲ. ಹಾಗಾಗಿ ಅಲ್ಲಿಂದ ಬಯ್ಯುವುದು ಅಥವಾ ನಿಂದನೆ ಮಾಡಿದರೆ ಅದು ಪರಿಶಿಷ್ಟ ಜಾತಿ, ಪಂಗಡದ ಮೇಲಿನ ದೌರ್ಜನ್ಯ ತಡೆ ಕಾಯ್ದೆ ವ್ಯಾಪ್ತಿಗೆ ಅನ್ವಯವಾಗುವುದಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ. ▶ 8ನೇ ಪುಟಕ್ಕೆ

ಪ್ರಧಾನಿ ಮೋದಿ ಭೇಟಿ ವೇಳೆ ಚಾಮುಂಡಿಬೆಟ್ಟದಲ್ಲಿ ಅಳವಡಿಸಿದ್ದ ವಿದ್ಯುತ್ ಕಂಬಗಳಿಗೆ ಕಾಂಕ್ರಿಟ್ ಸುಭದ್ರತೆ

ಪಿಡಬ್ಲ್ಯೂಡಿ, ಸೆಸ್ಕ್ ಅಧಿಕಾರಿಗಳ ಸ್ಪಷ್ಟನೆ

ಮೈಸೂರು, ಜೂ. 23(ಆರ್‌ಕೆ)– ಪ್ರಧಾನಮಂತ್ರಿಗಳ ಆಗಮನದ ಹಿನ್ನೆಲೆಯಲ್ಲಿ ಅಳವಡಿಸಿರುವ ಚಾಮುಂಡಿಬೆಟ್ಟದ ಮುಖ್ಯರಸ್ತೆಯ ವಿದ್ಯುತ್ ಕಂಬಗಳಿಗೆ ಸಿಮೆಂಟ್ ಕಾಂಕ್ರಿಟ್‌ನಿಂದ ಸುಭದ್ರಗೊಳಿಸಲಾಗುವುದು ಎಂದು ಲೋಕೋಪಯೋಗಿ ಇಲಾಖೆ ಹಾಗೂ ಸೆಸ್ಕ್ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.



'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಲೋಕೋಪಯೋಗಿ ಇಲಾಖೆ ಅಸಿಸ್ಟೆಂಟ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಚಿಕ್ಕಣ್ಣ, ಪ್ರಧಾನಮಂತ್ರಿಗಳ ಭೇಟಿಯ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟ ರಸ್ತೆಯುದ್ದಕ್ಕೂ ವಿದ್ಯುತ್ ಕಂಬ ನೆಟ್ಟು, ದೀಪ ಅಳವಡಿಸಲಾಗಿತ್ತು. ಕೇವಲ ಬಂಡೆ ಸಿಕ್ಕಿದ ಕಾರಣ ರಸ್ತೆ ಬದಿಯಲ್ಲೇ ಅಳವಡಿಸಲಾಗಿದೆ. ಅದು ತಾತ್ಕಾಲಿಕ ಸೌಲಭ್ಯವಾಗಿದ್ದು, ಮೆಟ್ಟಿಲ್ಲೂ ಕ್ರಮಬದ್ಧ ಹಾಗೂ ವ್ಯವಸ್ಥಿತ ರೀತಿ ಕಂಬಗಳನ್ನು ಅಳವಡಿಸಿ ಸಿಮೆಂಟ್ ಕಾಂಕ್ರಿಟ್‌ನಿಂದ ಭದ್ರಪಡಿಸಲಾಗುವುದು ಎಂದರು.

ಸೂಪರಿಂಟೆಂಡಿಂಗ್ ಇಂಜಿನಿಯರ್ ಗಣೇಶ್ ಬೋವಿ ಮಾತನಾಡಿ, ವಿದ್ಯುತ್ ಕಂಬಗಳನ್ನು ಮತ್ತೊಮ್ಮೆ ಕ್ರಮಬದ್ಧವಾಗಿ ಅಳವಡಿಸಿ, ಭದ್ರಪಡಿಸುವ ಕಾಮಗಾರಿಯನ್ನು ಒಂದೆರಡು ದಿನಗಳಲ್ಲಿ ಆರಂಭಿಸುತ್ತೇವೆ ಎಂದರು.

ಸೆಸ್ಕ್‌ನ ಚಾಮುಂಡಿಪುರಂ ಉಪವಿಭಾಗದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀಧರ್ ಪ್ರತಿಕ್ರಿಯಿಸಿದ್ದು, ಲೋಕೋಪಯೋಗಿ ಇಲಾಖೆಯವರು ಲೈಟ್ ಕಂಬ ಅಳವಡಿಸಿದ್ದು, ನಾವು ಮೇಲ್ವಿಚಾರಣೆ ಮಾಡಿದ್ದೇವೆ, ಮತ್ತೊಮ್ಮೆ ಕಂಬಗಳನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಿ ಅವುಗಳನ್ನು ಸುರಕ್ಷಿತವಾಗಿರಲು ಕಾಂಕ್ರಿಟ್ ಹಾಕಿ ಭದ್ರಪಡಿಸಬೇಕು. ಇದಕ್ಕೆ ನಾವು ಅವರಿಗೆ ಸಹಕಾರ ನೀಡುತ್ತೇವೆ ಎಂದರು. ತರಾತುರಿಯಲ್ಲಿ ವಿದ್ಯುತ್ ಕಂಬ ಅಳವಡಿಸಿ, ತಾತ್ಕಾಲಿಕವಾಗಿ ದೀಪಗಳನ್ನು ಅಳವಡಿಸಿದ್ದು, ಅದನ್ನು ಕ್ರಮಬದ್ಧಗೊಳಿಸುವ ಕೆಲಸ ಆರಂಭಿಸಲು ಅಧಿಕಾರಿಗಳು ತಯಾರಿ ನಡೆಸುತ್ತಿದ್ದಾರೆ. ಶೀಘ್ರ ಕ್ರಮ ವಹಿಸದಿದ್ದರೆ, ಅವುಗಳು ಉರುಳಿ ಅಪಾಯ ಸಂಭವಿಸುವ ಸಾಧ್ಯತೆ ಇದೆ.



ಸುತ್ತೂರು ಶ್ರೀಮಠದಲ್ಲಿ ಜರುಗಿದ 106ನೇ ಮಾಸಿಕ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ಹನ್ನೆರಡು ಜೋಡಿಗಳು ದಂಪತಿಗಳಾದರು. ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿ ಎಸ್.ಪಿ. ಉದಯಶಂಕರ್, ಕಾನ್ಯ ಶಿವಮೂರ್ತಿ, ಸಂಸ್ಥೆಗಳ ಮುಖ್ಯಸ್ಥರು ಹಾಗೂ ಇತರರು ಚಿತ್ರದಲ್ಲಿದ್ದಾರೆ.

ವಿಶ್ವ ಕರಾಟೆ ದಿನ: ನಾಡಿದ್ದು ವಿಶೇಷ ಕಾರ್ಯಕ್ರಮ

ಮೈಸೂರು,ಜೂ.23(ಆರ್‌ಕೆಬಿ)–ವಿಶ್ವ ಕರಾಟೆ ದಿನದ ಅಂಗವಾಗಿ ಜೂ.26ರಂದು ಬೆಳಗ್ಗೆ 6.30ಕ್ಕೆ ಮೈಸೂರಿನ ಮಹಾರಾಜ ಕಾಲೇಜು ಕ್ರಿಕೆಟ್ ಮೈದಾನದಲ್ಲಿ 'ಸ್ವಯಂ ರಕ್ಷಣೆಗಾಗಿ ಕರಾಟೆ' ಎಂಬ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮೈಸೂರು ಕರಾಟೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸೋಸಲೆ ಸಿದ್ದರಾಜು ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕ್ರಮದಲ್ಲಿ ವಿವಿಧ ಕರಾಟೆ ಸಂಸ್ಥೆಗಳು, ಸಾವಿರಕ್ಕೂ ಹೆಚ್ಚು ಕರಾಟೆ ಪಟುಗಳು ಭಾಗವಹಿಸಲಿದ್ದಾರೆ. ಕರಾಟೆ ಪಟ್ಟುಗಳನ್ನು ಪ್ರದರ್ಶಿಸಲಿದ್ದಾರೆ ಎಂದರು. ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಘದ ಗೌರವಾಧ್ಯಕ್ಷ ಅರುಣ್ ಮಾಚಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್, ಉಪ ಪೊಲೀಸ್ ವರಿಷ್ಠಾಧಿಕಾರಿ ಆರ್.ಶಿವಕುಮಾರ್ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಪದಾಧಿಕಾರಿಗಳಾದ ಶಿವದಾಸ್, ಸುನಿಲ್‌ಕುಮಾರ್, ಮಹದೇವಸ್ವಾಮಿ ಉಪಸ್ಥಿತರಿದ್ದರು.

ಕಲಾವಿದರಿಗೆ ತಾರತಮ್ಯ: ತನಿಖೆಗೆ ಒತ್ತಾಯ

ಮೈಸೂರು, ಜೂ.23(ಆರ್‌ಕೆಬಿ)– ಮೈಸೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಅನೇಕ ಅಕ್ರಮ ನಡೆದಿದ್ದು, ಇದರ ಬಗ್ಗೆ ತನಿಖೆ ನಡೆಸುವಂತೆ ಮೈಸೂರು ದನಿ ಸಂಘಟನೆಯ ಸಂಸ್ಥಾಪಕ ಅರವಿಂದ ಶರ್ಮ ಒತ್ತಾಯಿಸಿದ್ದಾರೆ.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ಬದಲು ನಗರದ ಕೆಲವೇ ತಂಡಗಳಿಗೆ ನಿಯಮ ಮೀರಿ ಪದೇಪದೆ ಕಾರ್ಯಕ್ರಮಕ್ಕೆ ಅವಕಾಶ ನೀಡಲಾಗಿದೆ ಎಂದು ದೂರಿದರು.

ಪೌರಾಣಿಕ ನಾಟಕ ಪ್ರದರ್ಶನಕ್ಕೆ ಇಲಾಖೆಯಿಂದ 30 ಸಾವಿರ ರೂ. ಪ್ರೋತ್ಸಾಹಧನ ನೀಡಲು ಅವಕಾಶವಿದ್ದರೂ, ಗ್ರಾಮೀಣ ತಂಡಗಳಿಗೆ ಕೇವಲ 10 ಸಾವಿರ ನೀಡಿ, ನಗರದ ತಂಡಗಳಿಗೆ 30 ಸಾವಿರ ನೀಡುವ ಮೂಲಕ ತಾರತಮ್ಯ ಎಸಗಲಾಗಿದೆ ಎಂದು ಆರೋಪಿಸಿದರು. ಕನ್ನಡ ಜಾಗೃತಿ ಸಮಿತಿ ಸಂಯೋಜಕರಾಗಿದ್ದ ವೇಳೆ ಬೆರಳೆಣಿಕೆಯಷ್ಟು ಸಭೆಗಳನ್ನು ಮಾತ್ರ ಕರೆಯಲಾಗಿದೆ. ಪ್ರೋತ್ಸಾಹಧನ ಪಡೆದಿರುವ ಕಲಾವಿದರ ವಿಳಾಸ ಪಟ್ಟಿಯಲ್ಲಿಲ್ಲ. ಸಾಮಾಜಿಕ ನ್ಯಾಯ ಅನುಸರಿಸದೆ ಒಬ್ಬರೇ ಕಲಾವಿದರಿಗೆ ಹಲವು ಬಾರಿ ಕಾರ್ಯಕ್ರಮ ನೀಡಲಾಗಿದೆ. ಈ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಅವರು ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದರು.

ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರ ಜಿಲ್ಲಾ ಪ್ರವಾಸ

ಮೈಸೂರು, ಜೂ.23– ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ರವೀಂದ್ರ ಶೆಟ್ಟಿ, 24 ಹಾಗೂ 25ರಂದು ಮೈಸೂರು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದಾರೆ.



ಗುರುವಾರ ಮಧ್ಯಾಹ್ನ 2ರಿಂದ ಸಂಜೆ 4 ಗಂಟೆಯವರೆಗೆ ಮೈಸೂರು ಜಿಲ್ಲೆಯ ಕುಪ್ಪೆ ಹಾಗೂ ಶಾನುಭೋಗನಹಳ್ಳಿಯಲ್ಲಿರುವ ಅಲೆಮಾರಿ ಕುಟುಂಬಗಳನ್ನೂ ಭೇಟಿ ಮಾಡಿದ್ದರು. ಜೂ.24 ರಂದು ಬೆಳಿಗ್ಗೆ 7 ಗಂಟೆಗೆ ನಾಡದೇವತೆ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆಯುವರು. ಬೆಳಗ್ಗೆ 10 ಗಂಟೆಗೆ ಮೈಸೂರು ಜಿಲ್ಲಾ ನಿಗಮದ ಕಚೇರಿಗೆ ಭೇಟಿ ನೀಡುವರು ಹಾಗೂ ಪ್ರವಾಸಿ ಮಂದಿರದಲ್ಲಿ 10.30 ಗಂಟೆಗೆ ಪತ್ರಿಕಾಗೋಷ್ಠಿ ನಡೆಸುವರು. ಅಂದು ಬೆಳಗ್ಗೆ 11ರಿಂದ ಸಂಜೆ 5 ಗಂಟೆಯವರೆಗೆ ಜಿಲ್ಲೆಯ ವಿವಿಧ ತಾಲೂಕುಗಳ ಅಲೆಮಾರಿ ಕುಟುಂಬಗಳಿಗೆ ಭೇಟಿ ನೀಡುವರು. ಸಂಜೆ 5.30ಕ್ಕೆ ನಂಜನಗೂಡಿಗೆ ಭೇಟಿ ನೀಡಿ ಬೆಳಗ್ಗೆ 7.30ಕ್ಕೆ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದರ್ಶನ ಪಡೆಯುವರು. ಜೂ.25ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನಂಜನಗೂಡು ತಾಲೂಕಿನ ವಿವಿಧ ಗ್ರಾಮಗಳ ಅಲೆಮಾರಿ ಕುಟುಂಬಗಳಿಗೆ ಭೇಟಿ ನೀಡುವರು.

ನಂ.ಗೂಡಲ್ಲಿ ತೊಳಸಿ ಜುವೆಲ್ಸ್ ಶಾಖೆ

ತೊಳಸಿ ಜ್ಯೂಯಲ್ಸ್ THOLASI JEWELS Fine Jewellers Since Generations

ಮೈಸೂರು,ಜೂ.23–ದಕ್ಷಿಣಕಾಶಿ ನಂಜನಗೂಡಿನ ಎಂಜಿಎಸ್ ರಸ್ತೆಯಲ್ಲಿ ಜನಪ್ರಿಯ ತೊಳಸಿ ಜುವೆಲ್ಸ್ ಶಾಖೆ ಜೂ.26 ರಂದು ಉದ್ಘಾಟನೆಯಾಗಲಿದೆ. ನಂಬಿಕೆ, ಗುಣಮಟ್ಟ ಮತ್ತು ಕಲಾತ್ಮಕತೆ ಮೂಲಕ ಗ್ರಾಹಕರಿಗೆ ಹತ್ತಿರವಾಗಿರುವ ತೊಳಸಿ ಜುವೆಲ್ಸ್ ನಂಜನಗೂಡಿಗೆ ಹೆಜ್ಜೆ ಇಟ್ಟಿದ್ದು, ಗ್ರಾಹಕರಿಗೆ ಇನ್ನಷ್ಟು ಉತ್ತಮ ರೀತಿಯಲ್ಲಿ ಸೇವೆ ನೀಡುವುದಾಗಿ ಜುವೆಲ್ಸ್ ಮಾಲೀಕರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶೀಘ್ರದಲ್ಲೇ ನಮ್ಮ ಹುಡುಗರು ಬಿಡುಗಡೆ

ಮೈಸೂರು, ಜೂ.23(ಆರ್‌ಕೆಬಿ)– ತಾವು ನಾಯಕ ನಟರಾಗಿ ಅಭಿನಯಿಸಿರುವ 'ನಮ್ಮ ಹುಡುಗರು" ಚಿತ್ರ ಶೀಘ್ರದಲ್ಲೇ ರಾಜ್ಯಾದ್ಯಂತ ಬಿಡುಗಡೆ ಆಗಲಿದೆ ಎಂದು ನಟ ನಿರಂಜನ್ ಸುಧೀಂದ್ರ ತಿಳಿಸಿದರು. ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಚಿತ್ರವು ರಾಜ್ಯದ 100ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಚಿತ್ರದಲ್ಲಿ ಐದು ಹಾಡುಗಳಿವೆ. ಚಿತ್ರವು ಮಂಡ್ಯದ ಆಡು ಭಾಷೆಯ ಶೈಲಿಯಲ್ಲಿದೆ. ಅಲ್ಲಿನ ಕೆಲ ಹುಡುಗರ ತಂಡದ ಕಥೆಯನ್ನು ಆಧರಿಸಿರುವ ಚಿತ್ರದಲ್ಲಿ ಒಂದು ಸುಳ್ಳಿನಿಂದ ಹುಡುಗರ ಜೀವನದ ಮೇಲೆ ಆಗುವ ಪರಿಣಾಮಗಳ ಬಗ್ಗೆ ನಿರೂಪಿಸಲಾಗಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ನಾಯಕಿ ರಾಧ್ಯಾ, ನಿರ್ಮಾಪಕ ಕೆ.ಕೆ.ಅಶ್ರಫ್, ನಿರ್ದೇಶಕ ಎಚ್.ಬಿ.ಸಿದ್ದು ಉಪಸ್ಥಿತರಿದ್ದರು.

ಮಹಾರಾಜ ಕಾಲೇಜಿನಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ

ಸಂವಿಧಾನ ರಚಿಸಲು ಅಂಬೇಡ್ಕರ್‌ರ ಎರಡು ದಶಕದ ಸುದೀರ್ಘ ಶ್ರಮ

ಅಂಬೇಡ್ಕರ್‌ವಾದಿ ಡಾ.ರಘೋತ್ತಮ ಹೊ.ಬ ಅಭಿಮತ

ಮೈಸೂರು,ಜೂ.23(ಪಿಎಂ)–ಡಾ. ಬಿ.ಆರ್.ಅಂಬೇಡ್ಕರ್ ಅವರು 1929ರಲ್ಲೇ ಸಂವಿಧಾನ ರಚನೆ ಪ್ರಾರಂಭಿಸಿದ್ದರು. 20 ವರ್ಷಗಳ ತಮ್ಮ ಸುದೀರ್ಘ ಶ್ರಮದ ಮೂಲಕ ಸ್ವತಂತ್ರ ಭಾರತಕ್ಕೊಂದು ಸಂವಿಧಾನ ನೀಡಿ, ದೇಶ ಮುನ್ನಡೆಯಲು ಸೂಕ್ತ ದಿಕ್ಕು ತೋರಿಸಿದರು ಎಂದು ಅಂಬೇಡ್ಕರ್‌ವಾದಿ ಡಾ.ರಘೋತ್ತಮ ಹೊ.ಬ ಹೇಳಿದರು.

ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಕಾಲೇಜಿನ ಪಠ್ಯೇತರ ಚಟುವಟಿಕೆಗಳ ಸಮಿತಿ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ಜಯಂತಿಯಲ್ಲಿ ಅತಿಥಿಯಾಗಿ ಅವರು ಮಾತನಾಡಿದರು.

ಅಂಬೇಡ್ಕರ್ ಅವರ ಸಂವಿಧಾನಕ್ಕೂ ಮೊದಲು ದೇಶದಲ್ಲಿ ಶ್ರೇಣೀಕೃತ ವ್ಯವಸ್ಥೆ ಇತ್ತು. ಅಂಬೇಡ್ಕರ್ ಸಂವಿಧಾನದ ಮೂಲಕ ದೇಶಕ್ಕೊಂದು ಕಾನೂನು ಚೌಕಟ್ಟು ನೀಡಿ ಮುನ್ನಡೆಯುವಂತೆ ಮಾಡಿದರು. ತನ್ಮೂಲಕ ದೇಶಕ್ಕೆ ಮನುಸ್ಮೃತಿ ಕಾನೂನು ಅಗತ್ಯವಿಲ್ಲ ಎಂಬುದನ್ನು ತೋರಿಸಿಕೊಟ್ಟರು ಎಂದು ತಿಳಿಸಿದರು.



ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಹಮ್ಮಿಕೊಂಡಿದ್ದ ಡಾ.ಅಂಬೇಡ್ಕರ್ ಜಯಂತಿಯಲ್ಲಿ ಅಂಬೇಡ್ಕರ್ ಚಿತ್ರಪಟಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಭಾರತದ ಸುಮಾರು ಮೂರು ಸಾವಿರ ವರ್ಷಗಳ ಚರಿತ್ರೆಯಲ್ಲಿ 65 ವರ್ಷಗಳ ಅಂಬೇಡ್ಕರ್ ಅವರ ಜೀವಿತಾವಧಿಯು ಸಮಾನತೆಯ ಅಮೋಘ ಕ್ರಾಂತಿ. ಹಾಗಾಗಿ ಅವರ ಬದುಕು ಸಾಧಾರಣ ಜೀವನವಲ್ಲ. ಈ ಕ್ರಾಂತಿ ನಮ್ಮ ದೇಶದ ದಿಕ್ಕನ್ನೇ ಬದಲಿಸಿ, ಮುನ್ನಡೆಯುವಂತೆ ಮಾಡಿತು. ಇಂತಹ ಮಹತ್ವದ ಕ್ರಾಂತಿ ಈಡೇರಿಸಲು ಮೊದಲಿಗೆ ಅವರು ಶೈಕ್ಷಣಿಕ ತಳಹದಿ ಹಾಕಿದರು. ಆ ಮೂಲಕ ಶ್ರೇಷ್ಠ ಮಟ್ಟದ ಶೈಕ್ಷಣಿಕ ಸಾಧನೆ ಮಾಡಿದರು ಎಂದರು.

ಅಂಬೇಡ್ಕರ್ ಅವರ ಕಾಲದಲ್ಲಿ ಶೋಷಿತ ಹಾಗೂ ಶೂದ್ರ ಸಮುದಾಯಗಳಿಗೆ ಶಿಕ್ಷಣ ಹಕ್ಕು ಇರಲಿಲ್ಲ. ಕೇವಲ ಶೇ.1ರಷ್ಟಿದ್ದ ಮೇಲ್ವರ್ಗದವರು ಮಾತ್ರ ಶಿಕ್ಷಣ ಪಡೆಯುವ ಹಕ್ಕು ಹೊಂದಿದ್ದರು. ಇಂತಹ ವಾತಾವರಣದ ನಡುವೆಯೂ ಅಂಬೇಡ್ಕರ್ ಶ್ರೇಷ್ಠ ಮಟ್ಟದ ಶಿಕ್ಷಣ ಪಡೆದರು ಎಂದು ಹೇಳಿದರು.

ಶೋಷಿತ ಸಮುದಾಯಗಳು ಪ್ರಾಚೀನ ಭಾರತದಲ್ಲಿ 'ನಾಗ' ಎಂಬ ದೊಡ್ಡ ಜನಾಂಗಕ್ಕೆ ಸೇರಿದ್ದವು. ಆ ನಾಗ ಜನರು ಏಷ್ಯಾ ಖಂಡದ ಬಹುಭಾಗ ಆಳುತ್ತಿದ್ದರು. ಅಲ್ಲದೆ, ಅವರು ಬೌದ್ಧರಾಗಿದ್ದರು ಎಂದು ಅಂಬೇಡ್ಕರ್ ಅವರು ಸಂಶೋಧನೆ ಮೂಲಕ ವ್ಯಾಖ್ಯಾನಿಸಿದ್ದಾರೆ. ಈ ನಿಟ್ಟಿನಲ್ಲಿ ಬೌದ್ಧ ಧಮ್ಮ ಸ್ವೀಕರಿಸಿದ ಅವರು, ಸಮಾನತೆ ಕ್ರಾಂತಿಗೆ ಧಮ್ಮದ ರೂಪ ನೀಡಿದರು. ಅವರ ಬದುಕು ಹೆಜ್ಜೆ ಹೆಜ್ಜೆಗೂ ಹೋರಾಟವೇ ಆಗಿತ್ತು ಎಂದು ಸ್ಮರಿಸಿದರು.

ಮತ್ತೊಬ್ಬ ಅತಿಥಿ ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಡಾ.ರತಿರಾವ್ ಮಾತನಾಡಿ, ವಿದ್ಯಾರ್ಥಿಗಳು ಅಂಬೇಡ್ಕರ್ ಅವರ ವಿಚಾರಧಾರೆ ಅಳವಡಿಸಿಕೊಂಡು ಮುನ್ನಡೆಯಬೇಕು. ನವಭಾರತ ನಿರ್ಮಾಣಕ್ಕೆ ಅಂಬೇಡ್ಕರ್ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಅವರು ಕೇವಲ ದಲಿತ ಸಮುದಾಯ ಶ್ರೇಯೋಭಿವೃದ್ಧಿ ಮಾತ್ರವೇ ಶ್ರಮಿಸಲಿಲ್ಲ. ಎಲ್ಲಾ ವರ್ಗದ ಮಹಿಳೆಯರೂ ಸೇರಿದಂತೆ ಭಾರತ ಸಮಸ್ತ ಸಮುದಾಯಗಳ ಏಳಿಗೆಗಾಗಿ ದುಡಿದರು ಎಂದು ಹೇಳಿದರು.

ಅಂಬೇಡ್ಕರ್ ಅವರು ಸಮಾನತೆಗಾಗಿ ಬಹುದೊಡ್ಡ ಹೋರಾಟ ಮಾಡಿದರು. ಆದರೆ ನಮ್ಮ ಸಮಾಜದಲ್ಲಿ ಇಂದಿಗೂ ಜಾತಿ ಪದ್ಧತಿ, ಮಹಿಳೆಯರ ಮೇಲಿನ ದೌರ್ಜನ್ಯ ಮುಂದುವರೆದಿದೆ. ಇವುಗಳ ನಿರ್ಮೂಲನೆಗಾಗಿ ಅಂಬೇಡ್ಕರ್ ಅವರು ತೋರಿದ ದಾರಿಯಲ್ಲಿ ಹೋರಾಟ ಮಾಡಬೇಕಿದೆ ಎಂದರು. ಇದಕ್ಕೂ ಮುನ್ನ ಅಂಬೇಡ್ಕರ್ ಅವರ ಚಿತ್ರಪಟಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಕಾಲೇಜಿನ ಪ್ರಾಂಶುಪಾಲರಾದ ಅನಿಟ ವಿಮ್ಲ ಬ್ರ್ಯಾಗ್ಸ್ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಆಡಳಿತಾಧಿಕಾರಿ ಪ್ರೊ. ಜಿ. ಹೆಚ್.ನಾಗರಾಜ, ಪಠ್ಯೇತರ ಚಟುವಟಿಕೆಗಳ ಸಮಿತಿ ಸಂಚಾಲಕಿ ಡಾ.ಷಹಸಿನ ಬೇಗಂ ಮತ್ತಿತರರು ಹಾಜರಿದ್ದರು.

ಎರಡು ದಿನಗಳ ರಾಜ್ಯ ಮಹಿಳಾ ಅಭ್ಯಾಸ ವರ್ಗಕ್ಕೆ ನಾಳೆ ಚಾಲನೆ

ಮೈಸೂರು, ಜೂ.23(ಆರ್‌ಕೆಬಿ)– ಸಹಕಾರ ಭಾರತಿಯ ಮೈಸೂರು ಜಿಲ್ಲಾ ಘಟಕದ ವತಿಯಿಂದ ಜೂ.25 ಮತ್ತು 26ರಂದು ಮೈಸೂರು ಬಳಿಯ ಲಿಂಗದೇವರ ಕೊಪ್ಪಲಿನ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾನಿಲಯದ ಜ್ಞಾನ ಸರೋವರದಲ್ಲಿ ರಾಜ್ಯ ಮಹಿಳಾ ಅಭ್ಯಾಸ ವರ್ಗ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾಧ್ಯಕ್ಷ ಮಹದೇವಸ್ವಾಮಿ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಹಕಾರ ಸಂಘಗಳ ಮಹಿಳಾ ನಿರ್ದೇಶಕರ ಹಾಗೂ ಮಹಿಳಾ ಸಿಬ್ಬಂದಿಗಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ಜೂ.25ರ ಸಂಜೆ 4.30ಕ್ಕೆ ಮುಜರಾಯಿ ಇಲಾಖೆ ಸಚಿವೆ ಶಶಿಕಲಾ ಜೊಲ್ಲೆ ಕಾರ್ಯಕ್ರಮ ಉದ್ಘಾಟಿಸುವರು. ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಸಚಿವರಾದ ಲೀಲಾದೇವಿ ಆರ್. ಪ್ರಸಾದ್, ರಾಜಶೇಖರ್ ಶೀಲವಂತ್ ಇನ್ನಿತರರು ಭಾಗವಹಿಸುವರು ಎಂದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ನಾರಾಯಣ ರಾವ್, ಹೆಚ್.ಎನ್.ನವೀನ್, ವಿ.ವೆಂಕಟೇಶ್, ಭಗೀರಥ ಉಪಸ್ಥಿತರಿದ್ದರು.

ಶೃಂಗಾರ್‌ಗೆ ಪಿಹೆಚ್.ಡಿ

ಮೈಸೂರು: ಡಾ. ದಯಾನಂದ ಮಾನೆ ಮಾರ್ಗದರ್ಶನದಲ್ಲಿ ಕೆ.ಎಸ್. ಶೃಂಗಾರ್ ಸಾರ್ವಜನಿಕ ಆಡಳಿತ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿ ನೀಡಿದೆ.



ಮೈಸೂರಲ್ಲಿ ನಾಳೆ 'ಕಲಾ ಸಂಭ್ರಮ'

ರಾಜ್ಯಮಟ್ಟದ ಅಂತರ ಕಾಲೇಜು ಕಲಾ ಉತ್ಸವ



ಮೈಸೂರು,ಜೂ.23(ಆರ್‌ಕೆಬಿ)–ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಜೂ.25ರಂದು 'ಕಲಾ ಸಂಭ್ರಮ' ರಾಜ್ಯಮಟ್ಟದ ಅಂತರ ಕಾಲೇಜು ಕಲಾ ಉತ್ಸವ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಚಾರ್ಯ ಡಾ. ಎಸ್.ಮರೀಗೌಡ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾಗತೀಕರಣ ಹಾಗೂ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯಿಂದಾಗಿ ದೇಶೀಯ ಕಲೆ ಹಾಗೂ ಸಂಸ್ಕೃತಿ ನಶಿಸುತ್ತಿವೆ. ಹೀಗಾಗಿ ದೇಶೀಯ ಕಲೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಆಯೋಜಿಸಿರುವುದಾಗಿ ತಿಳಿಸಿದರು.

'ಆಧುನಿಕ ಜೀವನ ಶೈಲಿ ಭಾರತದ ಸಂಸ್ಕೃತಿಗೆ ಮಾರಕ? ಎಂಬ ವಿಷಯ ಕುರಿತು ಚರ್ಚಾ ಸ್ಪರ್ಧೆ, ಭಾವಗೀತೆ ಗಾಯನ ಸ್ಪರ್ಧೆಗಳು ನಡೆಯಲಿವೆ. ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಪ್ರಥಮ ದರ್ಜೆ ಕಾಲೇಜುಗಳಿಂದ ಒಂದು ಸಾವಿರ ವಿದ್ಯಾರ್ಥಿಗಳು ಆಗಮಿಸುವ ನಿರೀಕ್ಷೆ ಹೊಂದಿದ್ದೇವೆ. ಈಗಾಗಲೇ 700 ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಕಾಲೇಜುಗಳ ಮುಖ್ಯಸ್ಥರು ತಮ್ಮ ಕಾಲೇಜುಗಳಿಂದ ತಂಡಗಳನ್ನು ಕಳುಹಿಸಿಕೊಡುವಂತೆ ಮನವಿ ಮಾಡಿದರು. ಕಾಲೇಜಿನ ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ 'ಕಲಾ ಸಂಭ್ರಮ' ಕಾರ್ಯಕ್ರಮಕ್ಕೆ ಬೆಳಗ್ಗೆ 9.30ಕ್ಕೆ ನಗರ ಪೊಲೀಸ್ ಉಪ ಆಯುಕ್ತರಾದ ಎಂ.ಎಸ್.ಗೀತಾ ಚಾಲನೆ ನೀಡಲಿದ್ದಾರೆ. ಚಿತ್ರನಟ ಚಂದನ್ ಆಚಾರ್, ವಿದ್ಯಾವರ್ಧಕ ಸಂಘದ ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ ಅಧ್ಯಕ್ಷತೆ ವಹಿಸುವರು.

ಚರ್ಚಾ ಸ್ಪರ್ಧೆ ಬೆಳಗ್ಗೆ 10ಕ್ಕೆ ಆರಂಭವಾಗಲಿವೆ. ಮಧ್ಯಾಹ್ನ 2 ಗಂಟೆಗೆ ಭಾವಗೀತೆ ಸ್ಪರ್ಧೆ ಆರಂಭವಾಗಲಿವೆ. ಮೈಸೂರು ವಿವಿ ಲಲಿತ ಕಲಾ ಕಾಲೇಜಿನ ಉಪನ್ಯಾಸಕಿ ವಿದೂಷಿ ರಶ್ಮಿ ಚಿಕ್ಕಮಗಳೂರು ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಉಪನ್ಯಾಸಕರಾದ ಡಾ.ಟಿ.ಶ್ರೀನಿವಾಸ್, ಪ್ರೊ. ಮೋಹನ್‌ಕುಮಾರ್, ಡಾ.ಬಿ.ಟಿ.ರಘು ಉಪಸ್ಥಿತರಿದ್ದರು.

ಇಂದು 'ತ್ರಿವಿಕ್ರಮ' ಬಿಡುಗಡೆ

ಮೈಸೂರು,ಜೂ.23(ಎಸ್‌ಬಿಡಿ)–'ತ್ರಿವಿಕ್ರಮ' ಸಿನಿಮಾ ವೀಕ್ಷಿಸಿ ಸರಿತಪ್ಪುಗಳ ತಿಳಿಸುವ ಮೂಲಕ ಪ್ರೋತ್ಸಾಹಿಸುವಂತೆ ಚಿತ್ರದ ನಾಯಕ ನಟ ವಿಕ್ರಮ್ ರವಿಚಂದ್ರನ್, ಜನರಲ್ಲಿ ಮನವಿ ಮಾಡಿದ್ದಾರೆ. ಶುಕ್ರವಾರ(ಜೂ.24) ತಮ್ಮ ನಟನೆಯ ಚೊಚ್ಚಲ ಚಿತ್ರ 'ತ್ರಿವಿಕ್ರಮ' ಬಿಡುಗಡೆಯಾಗಲಿರುವ ಹಿನ್ನೆಲೆಯಲ್ಲಿ ಮೈಸೂರಿಗೆ ಆಗಮಿಸಿದ್ದ ಅವರು, ಚಾಮುಂಡಿ ಬೆಟ್ಟಕ್ಕೆ ತೆರಳುವ ಮುನ್ನ ಗೋಕುಲಂನ ಖಾಸಗಿ ಹೋಟೆಲ್ ಆವರಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದರು.



ಕ್ರೇಜಿಸ್ಟಾರ್ ರವಿಚಂದ್ರನ್ ಪುತ್ರ ಎಂಬ ಕಾರಣಕ್ಕೆ ಜನರ ನಿರೀಕ್ಷೆ ಹೆಚ್ಚಿರುತ್ತದೆ. ಒಬ್ಬ ನಟನಾಗಿ ನನ್ನ ಪಾತ್ರಕ್ಕೆ ನ್ಯಾಯ ಒದಗಿಸುವ ಪ್ರಯತ್ನ ಮಾಡಿದ್ದೇನೆ. ಚಿತ್ರದ ಕತೆ ಎಲ್ಲಾ ತಾಯಂದಿರು ಹಾಗೂ ಯುವಕರಿಗೆ ಕನೆಕ್ಟ್ ಆಗುತ್ತದೆ. ಈಗಾಗಲೇ 'ಪ್ಲೀಸ್ ಮಮ್ಮಿ...', 'ಹನಿ ಬನಿ ಫೀಲ್ ಮೈ ಲವ್...' ಹಾಗೂ 'ಶಕುಂತಲಾ ಶೇಕ್ ಯುವರ್ ಬಾಡಿ ಪ್ಲೀಸ್...' ಹಾಡುಗಳನ್ನು ಜನ ಇಷ್ಟಪಟ್ಟಿರುವುದರಿಂದ ನಮ್ಮ ವಿಶ್ವಾಸ ಗಟ್ಟಿಯಾಗಿದೆ. ಹಿರಿಯ ಕಲಾವಿದರು ಚಿತ್ರದ ತೂಕ ಹೆಚ್ಚಿಸಿದ್ದಾರೆ. ನನ್ನ ಮೊದಲ ಚಿತ್ರವನ್ನು ಜನ ಹೇಗೆ ಸ್ವೀಕರಿಸುತ್ತಾರೆ? ಎಂದು ನೋಡುವ ಕಾತುರತೆಯಲ್ಲಿದ್ದೇನೆ ಎಂದರು. ಚಿತ್ರದ ನಾಯಕಿ ಆಕಾಂಕ್ಷ ಶರ್ಮ, ಹಿರಿಯ ನಟ ಸಾಧು ಕೋಕಿಲ ಇದ್ದರು. ಸೋಮಣ್ಣ ಟಾಕೀಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗಿರುವ 'ತ್ರಿವಿಕ್ರಮ' ಸಿನಿಮಾವನ್ನು ಸಹನಾ ನಿರ್ದೇಶಿಸಿದ್ದು, ರಾಮ್ಕೋ ಸೋಮಣ್ಣ ಬಂಡವಾಳ ಹೂಡಿದ್ದಾರೆ. ಅರ್ಜುನ್ ಜನ್ಯ ಸಂಗೀತವಿದ್ದು, ಸಂತೋಷ್ ರೈ ಪಾತಾಜೆ ಛಾಯಾಗ್ರಹಣವಿದೆ. ವಿಕ್ರಮ್ ಜೊತೆ ಅಕ್ಷರಾಗೌಡ, ಆಕಾಂಕ್ಷ ಶರ್ಮ, ತುಳಸಿ, ಸುಚೇಂದ್ರ ಪ್ರಸಾದ್, ಸಾಧುಕೋಕಿಲ, ಚಿಕ್ಕಣ್ಣ, ಜಯಪ್ರಕಾಶ್, ಶಿವಮಣಿ, ರೋಹಿತ್ ರಾಯ್, ಆದಿ ಲೋಕೇಶ್, ನಾಗೇಂದ್ರ ಶಾ ಹೀಗೆ ದೊಡ್ಡ ತಾರಾ ಬಳಗವಿದೆ.

ಕೆರೆ ಸಂಪರ್ಕಿತ ಕಾಲುವೆಗಳು ಒಡೆದು ಜಮೀನು ಜಲಮಯ; ಬೆಳೆ ಹಾನಿಯಿಂದ ಕಂಗಾಲು

ಮೈಸೂರು, ಜೂ.23(ಎಸ್‌ಬಿಡಿ)– ಕೆರೆಗೆ ಸಂಪರ್ಕ ಕಲ್ಪಿಸಿರುವ ಕಿರು ಕಾಲುವೆಗಳು ಒಡೆದಿರುವ ಪರಿಣಾಮ ಮೈಸೂರು ತಾಲೂಕು ಡಿ.ಸಾಲುಂಡಿ ಗ್ರಾಮದ ನೂರು ಎಕರೆಗೂ ಅಧಿಕ ಜಮೀನಿನಲ್ಲಿ ನೀರು ತುಂಬಿ ಏನನ್ನೂ ಬೆಳೆಯಲಾಗದ ಪರಿಸ್ಥಿತಿ ನಿರ್ಮಾಣವಾಗಿದ್ದು, ರೈತರು ಕಂಗಾಲಾಗಿದ್ದಾರೆ.

ಡಿ.ಸಾಲುಂಡಿ ಗ್ರಾಮ ಹಾಗೂ ಕೆರೆಹುಂಡಿ–ಗೋಪಾಲಪುರ ಭಾಗದ ಮಳೆ ನೀರು ಹರಿವನ್ನು ಧನಗಳ್ಳಿ ಕೆರೆಗೆ ಸಂಪರ್ಕ ಕಲ್ಪಿಸಲು ಎರಡು ಪ್ರತ್ಯೇಕ ಕಾಲುವೆಗಳನ್ನು ನಿರ್ಮಿಸಲಾಗಿದೆ. ಆದರೆ ಹಲವು ವರ್ಷಗಳಿಂದ ಈ ಕಾಲುವೆಗಳ ನಿರ್ವಹಣೆ ಮಾಡಿಲ್ಲ. ಪರಿಣಾಮ ಹೂಳು ತುಂಬಿ, ಗಿಡಗಂಟಿಗಳು ಬೆಳೆದು ಹಳ್ಳದಂತಾಗಿದೆ. 2 ವರ್ಷದ ಹಿಂದೆ ಧಾರಾಕಾರ ಮಳೆಯಾದಾಗ ಈ ಕಾಲುವೆಗಳಲ್ಲಿ ಸರಾಗವಾಗಿ ನೀರು ಹರಿಯಲಾಗದೆ ಒತ್ತಡದಿಂದ 2 ಕಡೆ ಕಾಲುವೆಗಳು ಒಡೆದಿವೆ. ಪರಿಣಾಮ ಮಳೆ ಬಂದಾಗಲೆಲ್ಲಾ ಈ ಭಾಗದ ಜಮೀನುಗಳು ಜಲಾವೃತವಾಗುತ್ತವೆ. ಕೆರೆಹುಂಡಿ–ಗೋಪಾಲಪುರ ಮಾರ್ಗದ ಕಾಲುವೆ ರಾಧಾ ಬಸಪ್ಪ ಅವರ ಜಮೀನು ಬಳಿ ಒಡೆದಿದ್ದು, ಬಸವೇಗೌಡ, ಕೆ.ಬಸಪ್ಪ ಪ್ರಭಾಕರ, ಚಿಕ್ಕಬುದ್ದಿಗೌಡ, ಮರಪ್ಪ, ಬೀರಪ್ಪ ಸೇರಿದಂತೆ ಹತ್ತಾರು ರೈತರ 70–80 ಎಕರೆ ಜಮೀನಿಗೆ ಜಲಕಂಟಕ ಎದುರಾಗಿದೆ. ಡಿ.ಸಾಲುಂಡಿ ಮಾರ್ಗದ ಕಾಲುವೆ ಶಿವನಂಜು ಅವರ ಜಮೀನು ಬಳಿ ಒಡೆದಿದ್ದು, ಸುತ್ತಮುತ್ತಲ ಹತ್ತಾರು ಎಕರೆ ಜಮೀನಿನಲ್ಲಿ ನೀರು ನಿಂತಿದೆ.



ಜಮೀನಿಗೆ ನೀರು ತುಂಬಿ ಬೆಳೆ ನಷ್ಟವಾಗಿರುವುದನ್ನು ಚಿತ್ರದಲ್ಲಿ ಕಾಣಬಹುದು.

> ಕಾಲುವೆ ಒಡೆದಿರುವುದರಿಂದ ಡಿ.ಸಾಲುಂಡಿಯ ಹತ್ತಾರು ರೈತರ ಜಮೀನು ಜಲಾವೃತವಾಗಿದೆ. ಮಳೆ ಬಂದಾಗಲೆಲ್ಲಾ ನೀರು ತುಂಬಿ ಬೆಳೆ ನಷ್ಟವಾಗುತ್ತಿದೆ. ಹೆಚ್ಚು ಪ್ರಮಾಣದ ನೀರು ಸಂಗ್ರಹವಾಗುವುದರಿಂದ ಮಳೆ ಬಿಡುವಿದ್ದಾಗಲೂ ಬೆಳೆ ತೆಗೆಯಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ದೂರು ನೀಡಿದೆವು. ಆದರೆ ಇದು ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟಿದ್ದು ಎಂದರು. ಒಂದೆರಡು ಬಾರಿ ನೀರಾವರಿ ಇಲಾಖೆ ಕಚೇರಿಗೆ ಹೋದಾಗ ಸಂಬಂಧಪಟ್ಟ ಇಂಜಿನಿಯರ್ ಸಿಗಲಿಲ್ಲ. ತುರ್ತಾಗಿ ಕಾಲುವೆ ದುರಸ್ತಿ ಮಾಡುವ ಅಗತ್ಯವಿದೆ. **–ಕೆ.ಬಸಪ್ಪ, ಗ್ರಾಪಂ ಸದಸ್ಯ, ಡಿ.ಸಾಲುಂಡಿ ಗ್ರಾಪಂ**

ಬೆಳೆ ಹಾನಿ: ವಿವಿಧ ದ್ವಿದಳ ಧಾನ್ಯ, ತರಕಾರಿ ಬೆಳೆ ಜಲಾವೃತವಾಗಿದೆ. ನೀರು ಹೆಚ್ಚಾಗಿ ತೆಂಗಿನ ಸಸಿಗಳು ಬೆಳವಣಿಗೆಯಾಗುತ್ತಿಲ್ಲ. ರೈತರು ಜಮೀನನ್ನು ಹದ ಮಾಡಿ ಧಾನ್ಯ ಹಾಗೂ ತರಕಾರಿ ಬಿತ್ತನೆ ಮಾಡುತ್ತಾರೆ. ಅವು ಸಸಿಯಾಗಿ ಕೈಸೇರುವಷ್ಟರಲ್ಲಿ ಜಲಾವೃತಗೊಂಡು ನಷ್ಟವಾಗುತ್ತಿದೆ.

ಸಾಲದ ಹೊರೆ: ಆಶಾಭಾವನೆಯಿಂದ ಜಮೀನಿನಲ್ಲಿ ಕಷ್ಟಪಟ್ಟು ಕೆಲಸ ಮಾಡಿ, ಉತ್ತು–ಬಿತ್ತಿ, ಗೊಬ್ಬರ ಹಾಕಿ ಪೋಷಿಸುವ ರೈತರು ಪ್ರತಿ ಬಾರಿ ನಿರಾಶರಾಗುವಂತಾಗಿದೆ. ಸಾಲ ಮಾಡಿ ಜಮೀನಿಗೆ ಖರ್ಚು ಮಾಡುತ್ತಾರೆ. ಆದರೆ ಬೆಳೆ ಕೈಸೇರುವ ಮುನ್ನ ಹೀಗೆ ನೀರಿನಿಂದ ಹಾಳಾಗುತ್ತಿದೆ. ಸಂಬಂಧಪಟ್ಟವರು ಕಾಲುವೆ ದುರಸ್ತಿಗೆ ಕ್ರಮ ಕೈಗೊಂಡು ರೈತರ ಬದುಕನ್ನೂ ರಕ್ಷಿಸಬೇಕಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.06.2022 ಶುಕ್ರವಾರ, ಮಳೆ ನಕ್ಷತ್ರ : ಆರ್ದ್ರೆ 22.06.2022 ರಿಂದ 05.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ
ತಿಥಿ: ಏಕಾದಶಿ, ನಕ್ಷತ್ರ : ಅಶ್ವಿನಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಬೇಸಿಗೆ ಮೇಳ–2022, ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆವರೆಗೆ.


■ **ಅಮೃತ ವಿಶ್ವವಿದ್ಯಾಪೀಠಂ :** ಬೆಳಗ್ಗೆ 9.30ಕ್ಕೆ ರಾಜ್ಯ ಮಟ್ಟದ ಅಂತರ ಕಾಲೇಜು ಉತ್ಸವ 'ಸದ್ಗಮಯ–2022', ಉದ್ಘಾಟನೆ : ಉಪ ಪೊಲೀಸ್ ಆಯುಕ್ತ ಪ್ರದೀಪ್ ಗುಂಟಿ, ಸಂಜೆ 5ಕ್ಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಗಾಯಕ ವಾಸುಕಿ ವೈಭವ್, ಸ್ಥಳ: ಅಮೃತ ವಿಶ್ವವಿದ್ಯಾಪೀಠಂ, ಬೋಗಾದಿ 2ನೇ ಹಂತ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಪ್ರಸಾರಾಂಗ :** ಪ್ರಚಾರೋಪನ್ಯಾಸ ಮಾಲೆ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ. ರಹಮತ್ ತರೀಕೆರೆ ಅವರಿಂದ ಕುವೆಂಪು ಚಿಂತನೆಗಳಲ್ಲಿ ನಾಗರಿಕ ಸಮಾಜದ ಪರಿಕಲ್ಪನೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎಸ್. ವಿದ್ಯಾಶಂಕರ್, ಉಪಸ್ಥಿತರು : ಕರಾಮುವಿವಿ ಕುಲಸಚಿವ ಪ್ರೊ. ಆರ್. ರಾಜಣ್ಣ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಮಧ್ಯಾಹ್ನ 3ಕ್ಕೆ.

■ **ಮೈಸೂರು ಜಿಲ್ಲಾ ಗುತ್ತಿಗೆದಾರರ ಸಂಘ :** ಮೈಸೂರು ಜಿಲ್ಲಾ ಗುತ್ತಿಗೆದಾರರ ಸಂಘದ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಗುತ್ತಿಗೆದಾರರ ಸಂಘದ ಅಧ್ಯಕ್ಷ ಎ.ಜಿ. ಸುರೇಶ್, ಗೌರವ ಅತಿಥಿಗಳು : ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎಂ. ರವೀಂದ್ರ, ಸ್ಥಳ: ಹೋಟೆಲ್ ರಿಯೋ ಮೆರಿಡಿಯನ್, ನ್ಯೂ ಸಯ್ಯಾಜಿರಾವ್ ರಸ್ತೆ, ಬಂಬೂ ಬಜಾರ್, ಮಧ್ಯಾಹ್ನ 3.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾನ್ ಡಾ. ಬೆ.ನಾ. ವಿಜಯೇಂದ್ರಚಾರ್ಯರಿಂದ 'ಶ್ರೀ ಮಹಾಭಾರತದ ಉದ್ಯೋಗ ಪರ್ವ' ಕುರಿತು ವಿಶೇಷ ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಜಯಲಕ್ಷ್ಮೀಪುರಂ, ಸಂಜೆ 5 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ "ಆಧಾರ ಶಿಲೆ"–ಮೈಸೂರು ಸುತ್ತಲಿನ ಪ್ರಾಗಿತಿಹಾಸ ತಾಣಗಳ ಪರಿಚಯ–ಡಾ.ಎಸ್.ಜಿ.ರಾಮದಾಸ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಅಂಬಯ್ಯನುಲಿ ಮತ್ತು ಪಿ. ಸುರಭೀ, ವ್ಯಾಖ್ಯಾನ– ಡಾ.ಲತಾ ಮೈಸೂರು, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಶೇಖ್ ಚಿನ್ನ ಮೌಲಾನಾ–ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಪಿ.ಎಸ್. ರಂಜನಿ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 4.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ, ನಿರೂಪಣಾ ಸಾಹಿತ್ಯ–ಪ್ರೊ.ಆರ್. ವಿಶ್ವೇಶ್ವರನ್, ಪರಿಕಲ್ಪನೆ ಗೀತಾ ರಮಾನಂದ್, 4.30 ವೃತ್ತಿ ಮಾರ್ಗದರ್ಶನ–ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಗಣಿತ ಕುರಿತು ಡಾ.ಎಸ್.ಎನ್. ಗಣನಾಥ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್ ವಾಣಿ, ರೇಷ್ಮೆ ಕೃಷಿಯಲ್ಲಿ ಅಧಿಕ ಪ್ರಗತಿ ಕುರಿತು ಬಿ.ಸಿ.ವಸಂತ್ ಅವರೊಡನೆ ಸಂದರ್ಶನ, 7.45 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣೀ, ರಚನೆ ಮತ್ತು ಪ್ರಸ್ತುತಿ– ಸಿ.ಕೆ. ವಿಜಯನಾರಸಿಂಹ, ನಿರ್ಮಾಣ –ಎಸ್.ಲಕ್ಷ್ಮೀನಾರಾಯಣ, 9.00 ಸಂಧ್ಯಾರಾಗ–ಹಿರಿಯ ಆಯುರ್ವೇದ ವೈದ್ಯ ದಂಪತಿ ಡಾ. ನಾಗೇಶ್ ಪಾಟೀಲ್ ಮತ್ತು ಡಾ. ಮಧುಮಿತಾ ಅವರ ಜೊತೆ ಮಾತುಕತೆ, ಪ್ರಸ್ತುತಿ– ಕೆ.ಬಿ. ಮೀನಾ, 10.30 ಸವಿನೆನಪು

■ **ಗಾನಭಾರತೀ :** ಸುಗುಣಮ್ಮ ದಯಾಳು ಮತ್ತು ಜಿ. ಮಹಾಲಕ್ಷ್ಮಮ್ಮ ಸ್ಮರಣಾರ್ಥ ಕಾರ್ಯಕ್ರಮ, ವಿದ್ವಾನ್ ವಿಷ್ಣುದೇವ್ ಕೆ.ಎಸ್. ಅವರಿಂದ ಗಾಯನ, ವಿದ್ವಾನ್ ಹೆಚ್.ಎನ್. ಭಾಸ್ಕರ್ –ಪಿಟೀಲು, ವಿದ್ವಾನ್ ಕೆ.ಯು. ಜಯಚಂದ್ರರಾವ್ –ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ಕುದೇರು ಮಠ, ಶ್ರೀ ತೋಂಟದಾರ್ಯ ವಿದ್ಯಾಸಂಸ್ಥೆ :** ಶ್ರೀ ಗುರುಮಲ್ಲೇಶ್ವರ ಮಹಾಪ್ರಭುಗಳವರ 123ನೇ ಪ್ರಮಥರ ಗಣಾರಾಧನೆ ಮತ್ತು ಲಿಂಗೈಕ್ಯ ಶ್ರೀ ಗುರುಲಿಂಗಸ್ವಾಮಿಗಳವರ 31ನೇ ವಾರ್ಷಿಕ ಗಣಾರಾಧನಾ ಮಹೋತ್ಸವ, ಶ್ರೀ ಬಸವೇಶ್ವರ ಮೂರ್ತಿ ಹಾಗೂ ಶ್ರೀ ಗುರುಮಲ್ಲೇಶ್ವರ ಮೂರ್ತಿ ಮೆರವಣಿಗೆ, ಉದ್ಘಾಟನೆ : ಶ್ರೀ ಮಹಾಂತ ಸ್ವಾಮಿಗಳು, ಶ್ರೀ ಸಿದ್ದಮಲ್ಲಸ್ವಾಮಿಗಳು, ಶ್ರೀ ಶಾಂತ ಮಲ್ಲಿಕಾರ್ಜುನಸ್ವಾಮಿಗಳು, ಶ್ರೀ ಶಿವಕುಮಾರ ಸ್ವಾಮಿಗಳು, ಶ್ರೀ ಸಾಂಬಸದಾಶಿವ ಸ್ವಾಮಿಗಳು, ಸ್ಥಳ: ಶ್ರೀ ಕುದೇರು ಮಠ, ಸಂಜೆ 7ಕ್ಕೆ.

ಮೈಸೂರು, ಚಾ.ನಗರ, ಕೊಡಗಲ್ಲಿ 4 ದಿನ ಭಾರಿ ಮಳೆ

ಬೆಂಗಳೂರು: ಕರ್ನಾಟಕದಲ್ಲಿ ಮುಂದಿನ 4 ದಿನಗಳ ಕಾಲ ಸಾಧಾರಣದಿಂದ ಭಾರೀ ಮಳೆಯಾಗುವ ಸಾಧ್ಯತೆ ಇದೆ. ಭಾರೀ ಮಳೆಯ ಮುನ್ಸೂಚನೆ ಹಿನ್ನೆಲೆಯಲ್ಲಿ ರಾಜ್ಯದ 18 ಜಿಲ್ಲೆಗಳಲ್ಲಿ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಮೈಸೂರು, ಶಿವಮೊಗ್ಗ, ತುಮಕೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ 2 ದಿನಗಳ ಕಾಲ ಹಳದಿ ಅಲರ್ಟ್ ಘೋಷಿಸಲಾಗಿದೆ. ಉಡುಪಿ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದೆ. ವಿಜಯಪುರ, ಬೀದರ್, ಬೆಳಗಾವಿ ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿಯಲ್ಲಿ ಜೂ.25 ರವರೆಗೆ ಭಾರೀ ಮಳೆಯಾಗುವ ನಿರೀಕ್ಷೆಯಿದೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಮೈಸೂರು ಜಿಲ್ಲೆ, ನಂಜನಗೂಡು ಸಿಟಿ, ಶ್ರೀಧರಮೂರ್ತಿ ಲೇ ಔಟ್, ಎನ್.ಜಿ.ಒ ಕಾಲೋನಿ, ಮನೆ ನಂ.7259 ರಲ್ಲಿ ವಾಸವಾಗಿರುವ ನಮ್ಮ ಕಕ್ಷಿದಾರರಾದ ಅಶ್ವತ್ ನಾರಾಯಣರವರ ಧರ್ಮಪತ್ನಿಯಾದ ಶ್ರೀಮತಿ ದೀಪಶ್ರೀ ಎಂ.ಜಿ. ರವರು ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ, ಪೈಪ್ ಫ್ಯಾಕ್ಟರಿ ಹಿಂಭಾಗ, ಮನೆ ನಂ.1007 ರಲ್ಲಿ ವಾಸವಾಗಿರುವ ಲೇ॥ ಗುಂಡಪ್ಪ ಹೆಚ್. ರವರ ಧರ್ಮಪತ್ನಿ ಶ್ರೀಮತಿ ಶ್ಯಾಮಲ ಗುಂಡಪ್ಪ ರವರಿಂದ ಈ ಕೆಳಗೆ ನಮೂದಿಸಿರುವ ಕೆಳಗಿನ ಸ್ವತ್ತನ್ನು ಕ್ರಯಕ್ಕೆ ಪಡೆಯಲಿದ್ದು ಕ್ರಮಗಳು ಮುಂದುವರೆದಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಯಾರಿಂದಲಾದರೂ ತಂಟೆ ತಕರಾರುಗಳು ಇದ್ದಲ್ಲಿ ಹಾಗೂ ಯಾವುದೇ ರೀತಿಯ ಕ್ರಯ, ಅಡಮಾನ, ಕ್ರಯದ ಕರಾರು ಹಾಗೂ ಯಾವುದೇ ರೀತಿಯ ಕರಾರುಗಳ ಹಕ್ಕುಬಾಧ್ಯತೆಗಳು ಇದ್ದಲ್ಲಿ ಈ ಪ್ರಕಟಣೆ ಹೊರಬಿದ್ದ ದಿನಾಂಕದಿಂದ 7 (ಏಳು) ದಿನಗಳ ಒಳಗಾಗಿ ನಮ್ಮ ಈ ಕೆಳಕಂಡ ಕಛೇರಿಗೆ ತಲುಪಿಸತಕ್ಕದ್ದು ನಂತರ ಬಂದ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಮಾನ್ಯ ಮಾಡಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿರುತ್ತದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಗ್ರಾಮ, ಬಿ.ಜಿ.ಎಸ್ ಲೇಔಟ್‌ನಲ್ಲಿರುವ ಮನೆ ನಂ.1007 ಸ್ವತ್ತಿನ ಸಂಖ್ಯೆ 1670, ಪಿ.ಐ.ಡಿ ಸಂಖ್ಯೆ 152200403127002785 ಸ್ವತ್ತಿಗೆ ಚಕ್ಕುಬಂದಿ:– ಪೂರ್ವಕ್ಕೆ: ಅನುಸೂಯರವರ ಸ್ವತ್ತು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಮಹದೇವಪ್ಪನವರ ಸ್ವತ್ತು, ದಕ್ಷಿಣಕ್ಕೆ : ದೇವಿಕಾ ಪ್ರಸಾದ್‌ರವರ ಸ್ವತ್ತು. ಈ ಮಧ್ಯೆ ಇರುವ ಪೂರ್ವಪಶ್ಚಿಮ 6.096 ಮೀಟರ್, ದಕ್ಷಿಣೋತ್ತರ 12.192 ಮೀಟರ್ ನಿವೇಶನದಲ್ಲಿ ನಿರ್ಮಿಸಿರುವ ನೆಲ ಮಹಡಿ ಮತ್ತು ಮೊದಲನೇ ಹಾಗೂ ಎರಡನೇ ಹಂತಸ್ತಿನ ಮನೆಯು ಈ ಸ್ವತ್ತಾಗಿರುತ್ತದೆ.

Sd/- Bindu.M
B.A.L., LL.B., Advocate
No.2967/2, 14th Main, 2nd Cross, Saraswathipuram, Mysuru-570009
ದಿನಾಂಕ: 22.06.2022

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ದೂರವಾಣಿ ಸಂಖ್ಯೆ : 2419209/2419361 E-mail : registrar@uni-mysore.ac.in
ಫ್ಯಾಕ್ಸ್: 0821–2419363/2419301 www.uni-mysore.ac.in

ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916
ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್‌ಭವನ, ಮೈಸೂರು – 570005
ಸಂಖ್ಯೆ: ಜಿಎಲ್3/702/2018–19 ದಿನಾಂಕ: 18.06.2022

ಪ್ರಕಟಣೆ

ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆಂದು ಚಿನ್ನದ ಪದಕ / ನಗದು ಬಹುಮಾನ ಪದಕಗಳನ್ನು ಪ್ರದಾನ ಮಾಡಲು ಈಗಾಗಲೇ ಸ್ಥಾಪಿಸಿರುವ ದತ್ತಿಗಳ ಮತ್ತು ದಾನಿಗಳ ಸಂಕ್ಷಿಪ್ತ ಪರಿಚಯಾತ್ಮಕ ಕೈಪಿಡಿ ತಯಾರಿಸಲು ಮೈಸೂರು ವಿಶ್ವವಿದ್ಯಾನಿಲಯವು ಕಾರ್ಯಪ್ರವೃತ್ತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದತ್ತಿ ಮತ್ತು ದಾನಿಗಳಿಂದ ಮಾಹಿತಿ ಸಂಗ್ರಹಿಸಲಾಗುತ್ತಿದ್ದು, ಸಂಬಂಧಪಟ್ಟ ದಾನಿಗಳು ಅಂತರ್ಜಾಲದ **https://uni-mysore.ac.in/node/3245** ಲಿಂಕ್‌ನಲ್ಲಿರುವ ನಿಗದಿತ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಮಾಹಿತಿಯನ್ನು ಭರ್ತಿ ಮಾಡಿ ದಿನಾಂಕ: 30.06.2022 ರ ಒಳಗೆ ಕುಲಸಚಿವ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಕಳುಹಿಸುವಂತೆ ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ 0821–2419209, 2419223 ನಂಬರ್‌ಗೆ ಕರೆ ಮಾಡಬಹುದಾಗಿದೆ.

ಸಹಿ/– ಕುಲ ಸಚಿವ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಉಪನಿರ್ದೇಶಕರ ಕಾರ್ಯಾಲಯ, ಮೈಸೂರು, ನಗರ ಕೇಂದ್ರ ಗ್ರಂಥಾಲಯ, ಸಯ್ಯಾಜಿರಾವ್ ರಸ್ತೆ, ಮೈಸೂರು. ದೂರವಾಣಿ: 2423678, 2430343
ಇಮೇಲ್:ddccl-mys@ka.gov.in, ddcclmys@gmail.com

ಸಂಖ್ಯೆ:ನಕೇಗ್ರಂ.ಮೈ/ತಾವಿ–1/ಕು.ಸಂ.ಗ್ರಂ.ವಾ.ಕ/01/2022–23 ದಿನಾಂಕ:22.06.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 2000ರನ್ವಯ ಸರ್ಕಾರದಿಂದ ನೋಂದಾಯಿಸಲ್ಪಟ್ಟ ಅರ್ಹ ಸಂಸ್ಥೆಯವರು 2022–23ನೇ ಸಾಲಿಗೆ ಈ ಕಚೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಕುವೆಂಪು ಸಂಚಾರಿ ಗ್ರಂಥಾಲಯ ವಾಹನಕ್ಕೆ ವಾಹನ ಚಾಲಕರನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.eproc.karnataka.gov.in** ವೆಬ್‌ಸೈಟ್ ಮುಖಾಂತರ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು. ಹಾಗೂ ಟೆಂಡರ್‌ಗೆ ಸಂಬಂಧಿಸಿದಂತೆ ಮಾಹಿತಿಗಾಗಿ ಈ ಕಚೇರಿಯನ್ನು ಸಂಪರ್ಕಿಸಬಹುದು. ಹೆಚ್ಚಿನ ವಿವರಗಳನ್ನು **www.eproc.karnataka.gov.in** ವೆಬ್‌ಸೈಟ್‌ನಲ್ಲಿ ಮತ್ತು ಈ ಕಚೇರಿಯಲ್ಲಿ ಪಡೆಯಬಹುದು.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಗಿನಂತಿವೆ. 1. ಟೆಂಡರ್ ಕರೆದ ವಿವರ: ಹೊರಗುತ್ತಿಗೆ ಆಧಾರದ ಮೇಲೆ ಕುವೆಂಪು ಸಂಚಾರಿ ಗ್ರಂಥಾಲಯ ವಾಹನಕ್ಕೆ ವಾಹನ ಚಾಲಕರನ್ನು ಪೂರೈಸುವ ಕುರಿತು. 2. ಟೆಂಡರ್‌ನಲ್ಲಿ ಕಾಯ್ದಿರಿಸಲಾಗಿರುವ ಅಂದಾಜು ಮೊತ್ತ ರೂ.2,45,000.00. 3. ಇ.ಎಂ.ಡಿ ಮೊತ್ತ: ರೂ.6,125.00. 4. ಇ–ಟೆಂಡರ್‌ನಲ್ಲಿ ಭಾಗವಹಿಸಲು ಪ್ರಾರಂಭವಾಗುವ ದಿನಾಂಕ ಮತ್ತು ಸಮಯ: **22.06.2022 ಸಂಜೆ 5–00 ರಿಂದ.** 5. ಇ–ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ಸಂಬಂಧಿತ ಕುಂದು–ಕೊರತೆ ವಿಚಾರಿಸಲು ದಿನಾಂಕ ಮತ್ತು ಸಮಯ: **18.07.2022 ಸಂಜೆ 5–30 ಗಂಟೆಯವರೆಗೆ.** 6. ಇ–ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ ಮತ್ತು ಸಮಯ: **19.07.2022 ಸಂಜೆ 5–00 ಗಂಟೆಯವರೆಗೆ.** 7. ಇ–ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **21.07.2022 ಬೆಳಿಗ್ಗೆ 11–00 ಗಂಟೆಗೆ.** 8. ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **25.07.2022 ಬೆಳಿಗ್ಗೆ 11–00 ಗಂಟೆಗೆ.**

ಸಹಿ/– ಉಪನಿರ್ದೇಶಕರು
ನಗರ ಕೇಂದ್ರ ಗ್ರಂಥಾಲಯ, ಮೈಸೂರು

DIPR/MYS/KAVITA/152/2022-23

ನಕ್ಕರೆ ಅದೇ ಸ್ವರ್ಗ

ಈತ : "ಸಾರ್, ನನಗೊಂದು ಸಿಗರೇಟ್ ಕೊಡಿ"
ಆತ : "ಸಿಗರೇಟ್ ಸೇದೋದು ಬಿಟ್ಟುಬಿಟ್ಟೆ ಅಂದ್ರಿ"
ಈತ : "ನಾನಿನ್ನೂ ಫಸ್ಟ್ ಸ್ಟೇಜ್‌ನಲ್ಲಿದ್ದೀನಿ"
ಆತ : "ಹಾಗಂದರೆ?"
ಈತ : "ಅಂದರೆ, ಕೊಂಡುಕೊಳ್ಳೋದು ಬಿಟ್ಟಿದ್ದೀನಿ"

ಮೈಸೂರು ಮಿತ್ರ
ಶುಕ್ರವಾರ, 24 ಜೂನ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಇತರರ ಸುಖವನ್ನು ಬಯಸುವುದು ನಾವು ಸುಖವನ್ನು ಪಡೆಯುವುದಕ್ಕಿಂತ ಸುಲಭ ಮಾರ್ಗ – ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಚಾಟಿಯಿಲ್ಲದೆ ಬುಗುರಿ ಆಡಿಸಿದ ಹಾಗೆ

ನಿಮ್ಮ ಪತ್ರಗಳು

ವಿಜಯನಗರ 4ನೇ ಹಂತ ಸಮಸ್ಯೆಗಳ ಆಗರ

ಮಾನ್ಯರೆ,

ಮೈಸೂರಿನ ಹೆಮ್ಮೆಯ ವಿಜಯನಗರ 4ನೇ ಹಂತ ಸಮಸ್ಯೆಗಳ ಆಗರವಾಗಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವಿಜಯನಗರ 4ನೇ ಹಂತದ ನಿವೇಶನಗಳನ್ನು ಹರಾಜಿಗೆ ಇಡುವಾಗ, "ವಿಜಯನಗರ 4ನೇ ಹಂತ ಏಷ್ಯಾ ಖಂಡದಲ್ಲಿ ಅತ್ಯಂತ ದೊಡ್ಡ ಬಡಾವಣೆ ಹಾಗೂ ಪ್ರತಿಷ್ಠಿತ ಬಡಾವಣೆ" ಎಂದೆಲ್ಲಾ ಪ್ರಚಾರ ನೀಡಿ ನಿವೇಶನ ಖರೀದಿಸುವವರಿಗೆ ಖುಷಿಯಾಗುವಂತೆ ಮಾಧ್ಯಮಗಳಲ್ಲಿ ಪ್ರಕಟಣೆ ನೀಡುತ್ತದೆ. ಈ ಪ್ರಕಟಣೆ ನೋಡಿ ಜನ ನಾಮುಂದು ತಾಮುಂದು ಎಂದು ಮುಗಿಬಿದ್ದು, ದುಪ್ಪಟ್ಟು ಹರಾಜು ಕರೆದು ನಿವೇಶನ ಖರೀದಿಸುತ್ತಾರೆ. ಈ ಬಡಾವಣೆಯ ವಾಸ್ತವ ಇಲ್ಲಿ ವಾಸಿಸುವ ನಿವಾಸಿಗಳಿಗೆ ಮಾತ್ರವೇ ಗೊತ್ತು. ಕಳೆದ 10 ವರ್ಷಗಳಿಂದ ಈ ಬಡಾವಣೆ ನಿವಾಸಿಗಳು ಬೋರ್‌ವೆಲ್ ನೀರು ಕುಡಿದೇ ಬದುಕುತ್ತಿದ್ದಾರೆ. ಕಬಿನಿ ನೀರು ಕೊಡುತ್ತೇವೆ ಎಂದು ಎರಡು ವರ್ಷಗಳಿಂದ ಹೇಳುತ್ತಿದ್ದಾರೆ. ಈವರೆಗೆ ಕೊಟ್ಟಿಲ್ಲಾ. 2 ದಿನಕೊಮ್ಮೆ 3 ಗಂಟೆ ನೀರು ಬಿಡುತ್ತಾರೆ, ಅದು ಸಾಲುವುದಿಲ್ಲ. ಈ ನೀರನ್ನಾದರೂ ಪ್ರತಿದಿನ ಬಿಟ್ಟರೆ ನೀರಿನ ಬವಣೆ ತಪ್ಪುತ್ತದೆ. ಈ ಬಡಾವಣೆಯ ಕೆಲವು ರಸ್ತೆಗಳಂತು ಟಾರನ್ನೇ ಕಂಡಿಲ್ಲ. ಟಾರ್ ಕಾಣುವುದು ಹೋಗಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಪ್ರಾಧಿಕಾರಕ್ಕೆ ಸಾಧ್ಯವಾಗಿಲ್ಲ.

ಚರಂಡಿಗಳೆಲ್ಲಾ ಮುಚ್ಚಿ ಹೋಗಿ ಚರಂಡಿಗಳೇ ಮಾಡಿಲ್ಲವೇನೋ ಎಂಬಂತಿದೆ. ಕ್ಲೀನಿಂಗ್ ಅಂತು ಈ ಬಡಾವಣೆಗೆ ಮರೀಚಿಕೆ. ಯಾವ ಪಾರ್ಕ್ ಅನ್ನೂ ಅಭಿವೃದ್ಧಿ ಪಡಿಸಿಲ್ಲ. ಪಾರ್ಕ್‌ಗಳೆಲ್ಲಾ ಗಿಡ–ಗಂಟಿಗಳು ಬೆಳೆದು ಸಾರ್ವಜನಿಕ ಬಳಕೆಗೆ ಯೋಗ್ಯವಾಗಿಲ್ಲ. ಖಾಲಿ ನಿವೇಶನಗಳಿಗೆ ಕಂದಾಯ ಪಡೆಯುತ್ತಾರೆ. ಕ್ಲೀನಿಂಗ್ ಮಾಡಿಸುವುದಿಲ್ಲ. ಪ್ರಾಧಿಕಾರಕ್ಕೆ ಬಡಾವಣೆಯ ನಿವೇಶನ ಹರಾಜಿನಿಂದಲೇ ಕೋಟ್ಯಾಂತರ ಹಣ ಹರಿದು ಬಂದರೂ ಬಡಾವಣೆಯ ಅಭಿವೃದ್ಧಿ ಕೆಲಸಗಳು ಮಾತ್ರ ಆಗಿಲ್ಲ. ಈ ಬಡಾವಣೆಯ ಹೆಬ್ಬಾಗಿಲು ರಸ್ತೆ ಶಾಸಕ ಜಿ.ಟಿ.ದೇವೇಗೌಡರ ಕೃಪಾಕಟಾಕ್ಷದಿಂದ ಅರ್ಧವಾದರೂ ಆಗಿದೆ. ಉಳಿದ ರಸ್ತೆ ಬಸವನಹಳ್ಳಿಯವರೆಗೆ ಇದೇ ರೀತಿ ಅಭಿವೃದ್ಧಿ ಪಡಿಸಿದರೆ ಈ ರಸ್ತೆಯಲ್ಲಿ ನೂರಾರು ಜನ ವಾಕ್ ಮಾಡಲು ಅನುಕೂಲವಾಗುತ್ತದೆ. ಕೇವಲ ಪ್ರಾಧಿಕಾರದ ಘೋಷಣೆಯಿಂದ ಇದು ಪ್ರತಿಷ್ಠಿತ ಬಡಾವಣೆಯಾಗುವುದಿಲ್ಲ. ಅದರ ಬದಲು ಈ ಬಡಾವಣೆಯನ್ನು ಅಭಿವೃದ್ಧಿಪಡಿಸಿ ಪ್ರತಿಷ್ಠಿತ ಬಡಾವಣೆ ಮಾಡಬೇಕೆಂಬುದು ಈ ಬಡಾವಣೆಯ ಎಲ್ಲ ನಿವಾಸಿಗಳ ಒತ್ತಾಯ. ಈ ಬಡಾವಣೆಯ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಜನಪ್ರತಿನಿಧಿಗಳಲ್ಲಿ ಈ ಮೂಲಕ ಮನವಿ ಮಾಡಿಕೊಳ್ಳುತ್ತೇವೆ.

–ಬಿ.ಜಿ.ರಂಗೇಗೌಡ, ಮೈಸೂರು.

ಹೆಚ್.ಡಿ.ದೇವೇಗೌಡರು ರಾಷ್ಟ್ರಪತಿಯಾಗಲಿ



ಮಾನ್ಯರೆ,

ಹಾಲಿ ರಾಷ್ಟ್ರಪತಿಗಳಾದ ರಾಮ್‌ನಾಥ್ ಕೋವಿಂದ್ ಅವರ ಅಧಿಕಾರ ಅವಧಿ ಜುಲೈ 24ಕ್ಕೆ ಮುಕ್ತಾಯಗೊಳ್ಳಲಿದೆ.

ಜುಲೈ 18 ರಂದು ರಾಷ್ಟ್ರಪತಿ ಚುನಾವಣೆ ನಡೆಯಲಿದ್ದು, ಚುನಾವಣಾ ಕಣದಲ್ಲಿ ಮಾಜಿ ಪ್ರಧಾನಿ ಹೆಚ್. ಡಿ. ದೇವೇಗೌಡರನ್ನು ಅಭ್ಯರ್ಥಿಯಾಗಿ ನಿಲ್ಲಿಸಿ ರಾಷ್ಟ್ರಪತಿಯಾಗಿ ಆಯ್ಕೆ ಮಾಡಲಿ.

ಕರ್ನಾಟಕದ ಹಿರಿಯ ರಾಜಕೀಯ ಮುತ್ಸದ್ಧಿ ಹಾಗೂ ಕರ್ನಾಟಕದ ರಾಜ್ಯದ ನೀರಾವರಿ ಸಚಿವರಾಗಿ, ಆಡಳಿತ ನಡೆಸಿದವರು ದೇವೇಗೌಡರು. ಜೊತೆಗೆ 1994ರಲ್ಲಿ ಕರ್ನಾಟಕ ರಾಜ್ಯದ 14ನೇ ಮುಖ್ಯ ಮಂತ್ರಿಯಾಗಿ ಆಡಳಿತ ನಡೆಸಿದ್ದಾರೆ. ಮೇ 30,1996ರಿಂದ ಏಪ್ರಿಲ್ 21,1997 ರವರೆಗೆ ಪ್ರಜಾಪ್ರಭುತ್ವದ ಸಾರ್ವಭೌಮ ರಾಷ್ಟ್ರವಾದ ಭಾರತ ದೇಶದ 11ನೇ ಪ್ರಧಾನ ಮಂತ್ರಿಯಾಗಿ ಆಡಳಿತ ನಡೆಸಿದ ಹರದನಹಳ್ಳಿ ದೊಡ್ಡಗೌಡ ದೇವೇಗೌಡರು ಮಣ್ಣಿನ ಮಗ ಎಂದೇ ಖ್ಯಾತನಾಮರಾದವರು.

ಹಾಸನದ ಲೋಕಸಭೆಯಿಂದ ಸಂಸತ್ತಿನ ಸದಸ್ಯರಾಗಿ ಆಯ್ಕೆಯಾಗಿದ್ದರು. 1975ರ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಬಂಧನಕ್ಕೆ ಒಳಪಟ್ಟಿದ್ದರು. ಇಂತಹ ಹಿರಿಯ ರಾಜಕೀಯ ಮುತ್ಸದ್ಧಿಯನ್ನು ಕರ್ನಾಟಕದ ಎಲ್ಲಾ ರಾಜಕೀಯ ಮುಖಂಡರು ಬೆಂಬಲಿಸಿ ಹಾಗೂ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ರಾಷ್ಟ್ರಪತಿಯಾಗಿ ಆಯ್ಕೆ ಮಾಡಲಿ ಎನ್ನುವ ಅಭಿಲಾಷೆ.

–ಕಂಗಾಣಿಸೋಮು ಪಿ.ಸಿ., ಕ್ಯಾತಮಾರನಹಳ್ಳಿ ಮೈಸೂರು

ಕಾಶ್ಮೀರ ಪಂಡಿತರ ಸ್ಥಳಾಂತರ ಬೇಡ, ರಕ್ಷಣೆ ನೀಡಿ

ಮಾನ್ಯರೆ,

ಸಂವಿಧಾನದ 370 ವಿಧಿ ರದ್ದಾದ ಮೇಲೆ ಜಮ್ಮು–ಕಾಶ್ಮೀರದಲ್ಲಿ ಪರಿಸ್ಥಿತಿ ಸುಧಾರಿಸಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಇಂದು ಕಾಶ್ಮೀರದ ಪರಿಸ್ಥಿತಿಯೇ ತೀರಾ ಹದಗೆಟ್ಟಿದೆ. ದುಷ್ಕರ್ಮಿಗಳು ಪಂಡಿತರು ಹಾಗೂ ಹಿಂದೂಗಳನ್ನು ಟಾರ್ಗೆಟ್ ಮಾಡಿ ಕೊಂದು ಹಾಕುತ್ತಿರುವುದಂತು ಅಮಾನವೀಯ.

ಪಂಡಿತರು ಮತ್ತು ಹಿಂದೂಗಳನ್ನು ಕಾಶ್ಮೀರದಿಂದ ಜಮ್ಮುವಿಗೆ ಕಳುಹಿಸುವುದರ ಬದಲು ಕಣಿವೆಯಲ್ಲೇ ಸುರಕ್ಷಿತ ಪ್ರದೇಶಗಳಿಗೆ ತುರ್ತಾಗಿ ಸ್ಥಳಾಂತರಿಸಲು, ಜಮ್ಮು ಕಾಶ್ಮೀರ ಆಡಳಿತ ಯಂತ್ರಕ್ಕೆ ಕೇಂದ್ರ ಸರ್ಕಾರ ತುರ್ತು ಆದೇಶ ನೀಡಬೇಕು.

ಅಲ್ಲಿನ ಪಂಡಿತರು ಮತ್ತು ಹಿಂದೂಗಳು ಕಾಶ್ಮೀರ ತೊರೆಯಲು ಪ್ರಾರಂಭಿಸಿದರೆ, ಅದರಿಂದ ಹೆಚ್ಚು ಲಾಭವಾಗುವುದು ಉಗ್ರರಿಗೆ ಹಾಗೂ ಭಯೋತ್ಪಾದಕರಿಗೆ ಅನ್ನುವುದನ್ನು ಅಲ್ಲಗಳೆಯುವಂತಿಲ್ಲ.

ಮೊದಲು ಅಲ್ಲಿನ ಪಂಡಿತರು ಹಾಗೂ ಹಿಂದೂಗಳಿಗೆ, ರಕ್ಷಣೆ ನೀಡುವ ಕೆಲಸಕ್ಕೆ ಆಡಳಿತ ಯಂತ್ರ ಮುಂದಾಗಬೇಕು. ತದನಂತರ ಹತ್ಯೆ ನಡೆಸಿದವರನ್ನು ಪತ್ತೆ ಹಚ್ಚಿ ತುರ್ತು ವಿಚಾರಣೆ ನಡೆಸಿ, ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ತುರ್ತು ಕ್ರಮಗಳನ್ನು ಕೈಗೊಳ್ಳಲು ಮುಂದಾಗದೆ ಇದ್ದರೆ, ದಶಕಗಳಿಂದ ಕಣಿವೆಯಲ್ಲಿ ಶಾಂತಿ ನೆಲೆಸುವುದಕ್ಕೆ ಸರ್ಕಾರ ಕೈಗೊಂಡ ಎಲ್ಲಾ ಪ್ರಯತ್ನಗಳು ಹೊಳೆಯಲ್ಲಿ ಹುಣಸೆಹಣ್ಣು ಕಿವಿಚಿದಂತಾಗುತ್ತದೆ.

ಯಾವುದೇ ಕಾರಣಕ್ಕೂ ಕಾಶ್ಮೀರದಲ್ಲಿರುವ ಪಂಡಿತರು, ಹಿಂದೂಗಳು ಕಾಶ್ಮೀರ ಕಣಿವೆ ತೊರೆಯದ ಹಾಗೆ ಅವರ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಪರಿಸ್ಥಿತಿ ಕೈಮೀರಿ, 1990ರಲ್ಲಿ ಆದ ರೀತಿ ಕಾಶ್ಮೀರಿಗಳು ಕಾಶ್ಮೀರವನ್ನು ತೊರೆಯಲು ಪ್ರಾರಂಭಿಸಿದ್ದೆ ಆದರೆ, ಇದರ ಜಯ ಭಯೋತ್ಪಾದಕರದ್ದೆ ಆಗುತ್ತದೆ.

ಈಗಾಗಲೇ ಅಲ್ಲಿನ ಪಂಡಿತರು ಹಾಗೂ ಹಿಂದೂಗಳು ತಮ್ಮ ರಕ್ಷಣೆಗಾಗಿ ನ್ಯಾಯಾಲಯದ ಕದ ತಟ್ಟುತ್ತಿದ್ದಾರೆ. ಸ್ಥಳಾಂತರ ಮಾಡಲು ಅವಕಾಶ ನೀಡಲು ಕೇಳುತ್ತಿದ್ದಾರೆ. ಕೇಂದ್ರ ಸರ್ಕಾರ ಕೂಡಲೇ ಮಧ್ಯೆ ಪ್ರವೇಶಿಸಬೇಕು.

– ಎ.ಎಸ್.ಗೋಪಾಲಕೃಷ್ಣ, ಮೈಸೂರು.




ಪ್ರೊ. ಎ.ವಿ. ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

'ಶೇಷ' ಎಂಬ ಹೆಸರಿನ ಅಮೂಲ್ಯ ಕೊಡುಗೆಗಳು



ಎಲ್.ಎಸ್. ಶೇಷಗಿರಿರಾವ್



ಟಿ.ಎನ್. ಶೇಷನ್



ಕೆ. ಶೇಷಾದ್ರಿ ಅಯ್ಯರ್

ಮೊದಲನೆಯವರೇ **ಎಲ್.ಎಸ್. ಶೇಷಗಿರಿರಾವ್**. ಇವರ ಪೂರ್ಣ ಹೆಸರು ಲಕ್ಷ್ಮೀಶ್ವರ ಸ್ವಾಮಿರಾಯ ಶೇಷಗಿರಿರಾವ್. ಇವರು 16.02.1925 ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಇವರು ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಸಾಹಿತ್ಯದಲ್ಲಿ ಬಿ.ಎ. ಆನರ್ಸ್‌ನಲ್ಲಿ ಚಿನ್ನದ ಪದಕ ಪಡೆದರು. ನಂತರ ನಾಗಪುರ ವಿಶ್ವವಿದ್ಯಾನಿಲಯ ದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ. ಪದವಿ ಪಡೆದರು. ಕೆಲವು ವರ್ಷಗಳ ಕಾಲ ಬೆಂಗಳೂರು ವಿಶ್ವವಿದ್ಯಾನಿಲಯ ದಲ್ಲಿ ಸೇವೆ ಸಲ್ಲಿಸಿದ ನಂತರ ಸೇವೆಯಿಂದ ನಿವೃತ್ತರಾದರು. ಇಂಗ್ಲಿಷ್ ಸಾಹಿತ್ಯವನ್ನು ಕನ್ನಡಿಗರಿಗೂ ಹಾಗೂ ಕನ್ನಡ ಸಾಹಿತ್ಯವನ್ನು ಇಂಗ್ಲಿಷ್ ಬಲ್ಲವರಿಗೂ ಪರಿಚಯ ಮಾಡಿಕೊಡುವ ಕೆಲಸವನ್ನು ಇವರು ನಲವತ್ತೈದು ವರ್ಷಗಳಿಂದಲೂ ಮಾಡುತ್ತಾ ಬಂದಿದ್ದಾರೆ.

ಇವರು **ಹಿಸ್ಟರಿ ಆಫ್ ಕನ್ನಡ ಲಿಟರೇಚರ್. ಎನ್. ಇಂಟ್ರೊಡಕ್ಷನ್ ಟು ಮಾರ್ಡನ್ ಕನ್ನಡ ಲಿಟಲೇಚರ್, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಹಾಗೂ ಟಿ.ಪಿ. ಕೈಲಾಸಂ** ಕೃತಿಗಳನ್ನು ಇಂಗ್ಲಿಷ್‌ನಲ್ಲಿ ರಚಿಸಿದ್ದಾರೆ.

ಇವರು ಕನ್ನಡದಲ್ಲೂ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. 1948ರಲ್ಲಿ ಇವರು ಬರೆದ **'ಜೀವನ'** ಎಂಬ ಕಾದಂಬರಿ ಅನೇಕ ಕನ್ನಡಿಗರಿಂದ ಮೆಚ್ಚುಗೆ ಪಡೆದಿದೆ. ಇವರ ಕೃತಿಗಳಲ್ಲಿ ಮುಖ್ಯವಾದುವೆಂದರೆ, **ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಳಕಿನ ದೂತರು** ಮಿರ್ಜಾ ಇಸ್ಮಾಯಿಲ್, ಇಲಿಯಡ್. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ 1975–76ರ ಸಮಯದಲ್ಲಿ ಗೋಪಾಲಕೃಷ್ಣ ಅಡಿಗರಿಂದ ಆರಂಭಿಸಿ, ಮೂವತ್ತೈದು ಕನ್ನಡದ ಹಿರಿಯ ಲೇಖಕರ ಪರಿಚಯವನ್ನು ಇಂಗ್ಲಿಷ್ ಓದುಗರಿಗೆ ಮಾಡಿಕೊಟ್ಟಿದ್ದಾರೆ. ಇವುಗಳಲ್ಲದೆ ದಿ ಹಿಂದೂ, ಡೆಕ್ಕನ್ ಹೆರಾಲ್ಡ್, ದಿ ಟೈಮ್ಸ್ ಆಫ್ ಇಂಡಿಯಾ ಮೊದಲಾದ ಇಂಗ್ಲೀಷ್ ಪತ್ರಿಕೆಗಳ ಮೂಲಕ ಕನ್ನಡದ ಸಾಹಿತ್ಯ ಹಾಗೂ ಸಾಹಿತಿಗಳ ಪರಿಚಯವನ್ನು ಇವರು ಮಾಡಿಕೊಟ್ಟಿದ್ದಾರೆ.

ಕೇರಳ ಸಾಹಿತ್ಯ ಅಕಾಡೆಮಿಯು ತನ್ನ ರಜತೋತ್ಸವ ಸಂದರ್ಭದಲ್ಲಿ **ಕಂಪಾರೇಟಿವ್ ಇಂಡಿಯನ್ ಲಿಟರೇಚರ್** ಯೋಜನೆಯನ್ನು ಎರಡು ಬೃಹತ್ ಸಂಪುಟಗಳ ಕನ್ನಡ ಅನುವಾದದ ಸಂಪಾದಕರಾಗಿ ಇವರನ್ನು ಆಯ್ಕೆ ಮಾಡಿತ್ತು. ಇವರು 1996ರಲ್ಲಿ ಇಂಗ್ಲಿಷ್ ಸಾಹಿತ್ಯ ಚರಿತ್ರೆಯನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. 2001ರಲ್ಲಿ ಇವರ ಈ ಕೃತಿಗೆ **ಕೇಂದ್ರ ಸಾಹಿತ್ಯ ಅಕಾಡೆಮಿ** ಪ್ರಶಸ್ತಿ ಲಭಿಸಿದೆ. ಇವುಗಳ ಜೊತೆಗೆ **ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (2001)** ಹಾಗೂ ಇವರು ಬರೆದ ವಿಮರ್ಶೆಗಳಿಗೆ **ವರ್ಧಮಾನ ಸಾಹಿತ್ಯ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ ಪ್ರಶಸ್ತಿ, ಬಿ.ಎಂ.ಶ್ರೀ ಪ್ರಶಸ್ತಿ, ಅ.ನ.ಕೃಷ್ಣರಾಯರ ಪ್ರಶಸ್ತಿ**ಗಳು ಲಭಿಸಿವೆ.

ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಇವರು ಪಂಡಿತರಾಗಿದ್ದರು. ಇವರ ವಿಮರ್ಶೆಗಳು **ವಸ್ತುನಿಷ್ಠವಾಗಿವೆ. ಗ್ರೀಕ್ ರಂಗಭೂಮಿ** ಹಾಗೂ **ಹೊಸಗನ್ನಡ ಸಾಹಿತ್ಯ** ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಕೃತಿಗಳೆಂದು ಪ್ರಸಿದ್ಧವಾಗಿವೆ. ಇದಲ್ಲದೆ ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಯುವಕರಿಗೆ ಪರಿಚಯ ಮಾಡಿಕೊಡುವ 510 ಹಿರಿಯ ಸಾಹಿತಿಗಳ ಪರಿಚಯ ಮಾಡಿಕೊಡುತ್ತದೆ. ಇವುಗಳ ಜೊತೆಗೆ ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ ಸಾಹಿತ್ಯ ಸಂಪುಟಗಳಿಗೆ ಶೇಷಗಿರಿ ರಾಯರು ಸಂಪಾದಕರಾಗಿದ್ದರು.

ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ 1947ರಿಂದ 1950ರವರೆಗೆ ಉತ್ತಮ ಕಾರ್ಯಗಳನ್ನು ಮಾಡಿದರು. ಶೇಷಗಿರಿರಾಯರು ಹಲವು ದಶಕಗಳಿಂದ ಕನ್ನಡದ ಚಳವಳಿಯಲ್ಲೂ ಭಾಗವಹಿಸಿದ್ದರು. ಶೇಷಗಿರಿರಾಯರು ಬರೆದ ಕಥೆ ಮುಯ್ಯಿ ಚಲನಚಿತ್ರವಾಗಿದೆ.

ಎರಡನೇಯವರು ಟಿ.ಎನ್.ಶೇಷನ್. ಇವರು 1932ರಲ್ಲಿ ಕೇರಳದ ಪಾಲ್ಘಾಟ್ ನಲ್ಲಿ ಜನಿಸಿದರು. ಇವರ ಪೂರ್ಣ ಹೆಸರು **ತಿರುನೆಲ್ಲೈ ನಾರಾಯಣ ಅಯ್ಯರ್ ಶೇಷನ್**. ಇವರು ಮ್ಯಾಗ್ಸೆಸೆ ಪ್ರಶಸ್ತಿ ಪಡೆದ ಮಾಜಿ ಚುನಾವಣಾ ಆಯುಕ್ತರು (ಕಮಿಷನರ್). ಮದರಾಸು ವಿಶ್ವವಿದ್ಯಾನಿಲಯದಿಂದ ಭೌತಶಾಸ್ತ್ರದಲ್ಲಿ ಎಂಎಸ್‌ಸಿ ಪದವಿ ಪಡೆದರು. ನಂತರ ಇವರು ಅಮೇರಿಕಾಕ್ಕೆ ಹೋಗಿ ಹಾರ್ವರ್ಡ್ ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿಯನ್ನು ಗಳಿಸಿದರು. ನಂತರ ಶೇಷನ್ ಭಾರತಕ್ಕೆ ಮರಳಿ ಐಎಎಸ್ ಅಧಿಕಾರಿಯಾಗಿ ಸೇವೆಯನ್ನು ಆರಂಭಿಸಿದರು. ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಅಧಿಕಾರಾವಧಿಯಲ್ಲಿ ಇವರು ರಕ್ಷಣಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು.

ಇವರು ಅಧಿಕಾರ ವಹಿಸಿಕೊಂಡ ಆರಂಭದಲ್ಲೇ ದೇಶದ ಚುನಾವಣೆ ವ್ಯವಸ್ಥೆಯಲ್ಲಿದ್ದ ನೂರಾರು ಲೋಪ ದೋಷಗಳನ್ನು ಗುರುತಿಸಿದರು. ಚುನಾವಣಾ ಆಯೋಗಕ್ಕಿರುವ ಸಂವಿಧಾನದತ್ತವಾದ ಅಧಿಕಾರವನ್ನು ಬಳಸಿ ದೋಷಗಳನ್ನು ಹಂತಹಂತವಾಗಿ ಸರಿಪಡಿಸಿದರು.

ಕೇಂದ್ರ ಪೊಲೀಸ್ ಪಡೆಯನ್ನು ಬಳಸಿ ಮತಗಟ್ಟೆಯಲ್ಲಿ ನಡೆಯುತ್ತಿದ್ದ ದುಷ್ಕೃತ್ಯಗಳನ್ನು ತಡೆಗಟ್ಟಿದ್ದರು. ಚುನಾವಣೆಯಲ್ಲಿ ದುಡ್ಡು ಕೊಟ್ಟು ಮತಗಳನ್ನು ಪಡೆಯುವುದನ್ನು ತಪ್ಪಿಸಲು ಇವರು ಸೂಕ್ತ ಕ್ರಮಗಳನ್ನು ಕೈಗೊಂಡರು. ಆಡಂಬರದ ಹಾಗೂ ಗದ್ದಲದ ಚುನಾವಣಾ ಭಾಷಣಗಳನ್ನು ನಿಯಂತ್ರಿಸಲು ಕ್ರಮಗಳನ್ನು ಕೈಗೊಂಡರು. ಗೋಡೆ ಬರಹಗಳು ಹಾಗೂ ಘೋಷಣೆಗಳನ್ನು ಬರೆದು, ಭಿತ್ತಿಪತ್ರಗಳನ್ನು ಅಂಟಿಸಿ, ಸಾರ್ವಜನಿಕ ಆಸ್ತಿಗಳನ್ನು ಹಾಳು ಮಾಡುವ ಸ್ಪರ್ಧಿಗಳಿಗೆ ಚಾಟಿ ಬೀಸಿದರು. ಹಾಗೇನಾದರೂ ಅಭ್ಯರ್ಥಿಗಳು ಗೋಡೆಗಳನ್ನು ಹಾಳು ಮಾಡಿದರೆ, ತಾವೇ ಸ್ವಚ್ಛಗೊಳಿಸಬೇಕೆಂದು ನಿರ್ದೇಶನ ಕೊಟ್ಟರು. ಅಭ್ಯರ್ಥಿಗಳು ಗೋಡೆಗಳನ್ನು ಸ್ವಚ್ಛಗೊಳಿಸದೇ ಇದ್ದರೆ ಚುನಾವಣೆಯ ಅಧಿಕಾರಿಗಳು ಗೋಡೆಗಳನ್ನು ಸ್ವಚ್ಛಗೊಳಿಸಿ ಅಭ್ಯರ್ಥಿಗಳಿಗೆ ಎರಡರಷ್ಟು ದಂಡವನ್ನೂ ಹಾಕುವಂತೆ ಸೂಚಿಸಿದರು. ಹೀಗಾಗಿ ಸರ್ಕಾರದ ಬೊಕ್ಕಸಕ್ಕೆ ಆ ಹಣವು ಸೇರುತ್ತಿತ್ತು.

ಇಷ್ಟೇ ಅಲ್ಲದೆ, ಚುನಾವಣೆಗೆ ಸ್ಪರ್ಧಿಸುವವರ ಖರ್ಚು– ವೆಚ್ಚದ ಮೇಲೆ ನಿಯಂತ್ರಣ ವಿಧಿಸಿದರು. ಚುನಾವಣೆಯ ಸಂಪೂರ್ಣ ವೆಚ್ಚದ ವಿವರಗಳನ್ನು ಭಾರತ ಸರ್ಕಾರದ ತನಿಖಾಧಿಕಾರಿಗಳಿಗೆ ನೀಡುವುದನ್ನು ಇವರು ಕಡ್ಡಾಯಗೊಳಿಸಿದರು. ರಾಜಕಾರಣಿಗಳು ಸಾರ್ವಜನಿಕ ಸಂಪನ್ಮೂಲಗಳು ಹಾಗೂ ಸರ್ಕಾರದ ಸವಲತ್ತುಗಳನ್ನು ಉಪಯೋಗಿಸುವುದನ್ನು ಶೇಷನ್ ನಿಷೇಧಿಸಿದರು. ಇಷ್ಟೇ ಅಲ್ಲದೆ ಚುನಾವಣಾ ಸಮಯದಲ್ಲಿ ಸಾರಾಯಿ ಮಾರಾಟವನ್ನು ಇವರು ನಿಷೇಧಿಸಿದರು. ಚುನಾವಣೆಯಲ್ಲಿ ಸ್ಪರ್ಧಿಸುವವರು ಆತ್ಮರಕ್ಷಣೆಗೋಸ್ಕರ ಹೊಂದಿದ್ದ ಬಂದೂಕುಗಳನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಂಡಿತು. ಇವರು ಜಾತಿ ಹಾಗೂ ಧರ್ಮದ ಆಧಾರದ ಮೇಲೆ ಚುನಾವಣಾ ಪ್ರಚಾರ ಮಾಡುವುದನ್ನು ನಿಷೇಧಿಸಿದರು. ಇವರು ಮಾಡಿದ ಇನ್ನೊಂದು ಮುಖ್ಯ ಕೆಲಸವೆಂದರೆ, ಪ್ರತಿಯೊಬ್ಬ ಮತದಾರನಿಗೂ **ಗುರುತಿನ ಚೀಟಿ** ನೀಡಿ, ಮತದಾನದ ಸಮಯದಲ್ಲಿ ಎಲ್ಲರೂ ಇದನ್ನು ಹಾಜರುಪಡಿಸುವುದನ್ನು ಕಡ್ಡಾಯಗೊಳಿಸುವುದರ ಮೂಲಕ ಮೋಸದ ಮತದಾನವನ್ನು ತಡೆದರು. **ಮತದಾರರ ಹಕ್ಕು** ಮತ್ತು ಜವಾಬ್ದಾರಿಗಳನ್ನು ಜನಗಳಿಗೆ ತಿಳಿಸಲು ಇವರು ಚುನಾವಣಾಧಿಕಾರಿಗಳ ಪರವಾಗಿ ಹೇಳಿಕೆಯನ್ನು ವೃತ್ತ ಪತ್ರಿಕೆಗಳಲ್ಲಿ ನೀಡಿ ಜನಜಾಗೃತಿಯನ್ನುಂಟು ಮಾಡಿದರು.

ಶೇಷನ್ ಅವರನ್ನು **ಭಾರತದ ಪ್ರಜಾಪ್ರಭುತ್ವದ ಉಕ್ಕಿನ ಮನುಷ್ಯ (ದಿ ಐರನ್‌ಮ್ಯಾನ್)** ಎಂದು ಜನ ಹೊಗಳಿದರು. ಇವರ ಕ್ರಾಂತಿಕಾರಿ ಪ್ರಯತ್ನಗಳಿಂದಾಗಿ, ಭಾರತದ ಚುನಾವಣೆಯ ರೀತಿ–ನೀತಿಗಳಲ್ಲಿ ಕೊಂಚಮಟ್ಟಿಗೆ ಸುಧಾರಣೆಗಳನ್ನು ಕಂಡಿತು. ಭಾರತದ ಅನೇಕ ರಾಜ್ಯಗಳು ಶೇಷನ್ ಮಾದರಿಯನ್ನು ಅನುಸರಿಸುವಂತೆ ಆಯಿತು. ಇವರು ಸಲ್ಲಿಸಿದ ಸೇವೆಗಾಗಿ 1996ರಲ್ಲಿ **ರ್‍ಯಾಮನ್ ಮ್ಯಾಗ್ಸೇಸೆ** ಪ್ರಶಸ್ತಿ ಇವರಿಗೆ ಲಭಿಸಿದೆ. ಇವರು ಚೆನ್ನೈನಲ್ಲಿ 2019ರಲ್ಲಿ ನಿಧನರಾದರು. ಶೇಷನ್ ಅವರು ಬರಹಗಾರರೂ ಆಗಿದ್ದು, **ಮೈ ಬರ್ಡನ್ಡ್ ಹಾರ್ಟ್** ಎಂಬ ಅನುಭವ ಕಥನವನ್ನು ಬರೆದಿದ್ದಾರೆ.

ಮೂರನೇಯವರೇ ಕೆ.ಶೇಷಾದ್ರಿ ಅಯ್ಯರ್. ಇವರು ಕೇರಳದ ಪಾಲ್ಘಾಟ್ ಜಿಲ್ಲೆಯಲ್ಲಿ ಜನಿಸಿದರು. 1845ರಲ್ಲಿ ಪಾಲ್ಘಾಟ್‌ನ ವಿದ್ಯಾಶ್ರಮ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಿಎ ಪದವೀಧರರಾದರು. 1865ರಲ್ಲಿ ಕಲ್ಲಿಕೋಟೆಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಭಾಷಾಂತರಕಾರರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ಮೈಸೂರು ಸಂಸ್ಥಾನದಲ್ಲಿ ರಂಗಾಚಾರ್ಲು ಅವರು ಅಧಿಕಾರವನ್ನು ವಹಿಸಿಕೊಂಡಾಗ, ಇವರ ಉತ್ತಮ ಕೆಲಸಗಳನ್ನು ಗಮನಿಸಿದ ರಂಗಾಚಾರ್ಲು, ಶೇಷಾದ್ರಿ ಅಯ್ಯರ್ ಅವರನ್ನು ಮೈಸೂರಿಗೆ ಕರೆಸಿಕೊಂಡರು. 1868ರಲ್ಲಿ ಅಯ್ಯರ್ ಅವರನ್ನು ಮೈಸೂರು ಸಂಸ್ಥಾನದ ಅಷ್ಟಗ್ರಾಮದ ವಿಭಾಗದ ಸೂಪರಿಂಟೆಂಡೆಂಟ್‌ರವರ ಕಚೇರಿಯಲ್ಲಿ ನ್ಯಾಯಾಂಗ ಶಿರಸ್ತೇದಾರ್ ಆಗಿ ನೇಮಕ ಮಾಡಿದರು. 1879ರಲ್ಲಿ ತುಮಕೂರಿನ ಜಿಲ್ಲಾಧಿಕಾರಿಗಳನ್ನಾಗಿ ಮೈಸೂರು ಸರ್ಕಾರ ನೇಮಿಸಿತು. 1882ರಲ್ಲಿ ರಂಗಾಚಾರ್ಲು ಅವರು ದಿವಾನರಾಗಿ ನೇಮಕರಾದರು. ಅಯ್ಯರ್ ಅವರು ಬಿ.ಎ. ಪದವಿಯನ್ನು ಪಡೆದಿದ್ದನ್ನು ಗಮನಿಸಿದ ರಂಗಾಚಾರ್ಲು, ಅವರನ್ನು ತಮ್ಮ ಖಾಸಗಿ ಕಾರ್ಯದರ್ಶಿಯಾಗಿ ನೇಮಿಸಿದರು. ರಂಗಾಚಾರ್ಲು ಅವರು ನಿಧನರಾದರು. ಅಪಾರ ಅನುಭವವನ್ನು ಗಳಿಸಿದ್ದ ಇವರನ್ನು ಮೈಸೂರಿನ ಮಹಾರಾಜರು ದಿವಾನರಾಗಿ ನೇಮಿಸಿದರು.

ಶೇಷಾದ್ರಿ ಅಯ್ಯರ್ ಅವರ ಕೊಡುಗೆಗಳು ಅಪಾರವಾಗಿದ್ದವು. ಆಧುನಿಕ ಮೈಸೂರಿನ ಇತಿಹಾಸದಲ್ಲಿ ದೀರ್ಘಕಾಲ ದಿವಾನರಾಗಿದ್ದ, ಇವರ ಸಾಧನೆಗಳು ಬಹುಮುಖವಾದವು. ಮೈಸೂರು ಸಂಸ್ಥಾನದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಹಲವಾರು ಹೆದ್ದಾರಿಗಳ ನಿರ್ಮಾಣ, ಬೆಂಗಳೂರಿನಿಂದ ಹರಿಹರದವರೆಗೆ ಮತ್ತು ಹಿಂದೂಪುರದವರೆಗೆ ರೈಲ್ವೆ ಮಾರ್ಗದ ವಿಸ್ತರಣೆ ಮತ್ತು ಮುಖ್ಯವಾದ ನೀರಾವರಿ ಕಾರ್ಯಗಳು. ಇವರು ಕೈಗಾರಿಕೆಗಳ ಸ್ಥಾಪನೆ ತ್ವರಿತಗೊಳಿಸಿದರು. ಮೈಸೂರಿನ ಪ್ರಮುಖ ಕೈಗಾರಿಕೆಯಾದ ಚಿನ್ನದ ಗಣಿಯ ಉದ್ಯಮಕ್ಕೆ ಉತ್ತೇಜನ ಕೊಟ್ಟು, ಅದರಿಂದ ಮೈಸೂರು ಸಂಸ್ಥಾನದ ಖಜಾನೆಗೆ ಏಳೂವರೆ ಲಕ್ಷ ರೂಪಾಯಿಗಳ ಆದಾಯ ಬರುವಂತೆ ಮಾಡಿದರು. ಮೈಸೂರು ಸಂಸ್ಥಾನದ ಅರಣ್ಯದ ಆದಾಯವನ್ನು ಹೆಚ್ಚಿಸಲು ಕಾಫಿ ಹಾಗೂ ಟೀ ಪ್ಲಾಂಟೇಷನ್‌ಗಳನ್ನು ಇವರು ವಿಸ್ತರಿಸಿದರು. 1884ರಲ್ಲಿ ಸ್ಥಳೀಯ ಸಂಸ್ಥೆಗಳ ಚಟುವಟಿಕೆಗಳಲ್ಲಿ ಮೈಸೂರಿನ ಪ್ರಜೆಗಳು ಪಾಲ್ಗೊಳ್ಳುವಂತೆ ಮಾಡಿದರು. 1885ರಲ್ಲಿ ಮೈಸೂರು ಸಂಸ್ಥಾನದಲ್ಲಿ ಮೊದಲ ಬಾರಿಗೆ ತಾಲೂಕು ಬೋರ್ಡ್‌ಗಳನ್ನು ಸ್ಥಾಪಿಸಲಾಯಿತು.

ಇಷ್ಟೇ ಅಲ್ಲದೆ, ಮೈಸೂರು ಸಂಸ್ಥಾನದ ರಾಜ್ಯದ ಪ್ರಾಚೀನ ಶಾಸನಗಳನ್ನು ಪರಿಶೀಲಿಸಿ ಹಾಗೂ ಪ್ರಕಟಿಸುವ ಸಲುವಾಗಿ ಪ್ರಾಚ್ಯ ವಸ್ತು ಸಂಶೋಧನಾ ಇಲಾಖೆ (ಈಗಿನ ಮೈಸೂರಿನ ಓರಿಯಂಟಲ್ ಲೈಬ್ರರಿ) ಇಲಾಖೆಯನ್ನು ಸುಧಾರಿಸಿ, ವಿದ್ವಾಂಸರಾದ ಲೂಯಿ ರೈಸ್ ಅವರ ನೇತೃತ್ವದಲ್ಲಿ ಈ ಕೆಲಸ ನಡೆಯುವಂತೆ ಏರ್ಪಾಡು ಮಾಡಿದರು. 1890ರಲ್ಲಿ ಓರಿಯಂಟಲ್ ಲೈಬ್ರರಿಯನ್ನು ಮೈಸೂರು ನಗರದಲ್ಲಿ ಸ್ಥಾಪಿಸಿ ಅಮೂಲ್ಯವಾದ ಹಸ್ತಪ್ರತಿಗಳನ್ನು ಶೇಖರಿಸಿ ಮತ್ತು ಪ್ರಕಟಿಸುವ ಕಾರ್ಯವನ್ನು ರೈಸ್ ಅವರಿಗೆ ವಹಿಸಿದರು.

ಮೈಸೂರಿನ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಮಹಾರಾಣಿಯವರ ಹೆಸರಿನಲ್ಲಿ ಶಾಲೆಯೊಂದನ್ನು ಸ್ಥಾಪಿಸಿದರು. ಪ್ರತಿಭಾವಂತ ಯುವಕರಿಗೆ ಆಡಳಿತದಲ್ಲಿ ಅವಕಾಶವನ್ನು ಕಲ್ಪಿಸುವ ಸಲುವಾಗಿ ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ಜಾರಿಗೆ ತಂದರು. ನ್ಯಾಯಾಂಗದಲ್ಲಿ ಬದಲಾವಣೆಗಳನ್ನು ಮಾಡಿ ರಾಜ್ಯದಲ್ಲಿ ನ್ಯಾಯಕ್ಕೆ ಚ್ಯುತಿ ಬರದಂತೆ ಇವರು ಏರ್ಪಾಡು ಮಾಡಿದರು.

ಮೈಸೂರು ಸಂಸ್ಥಾನ ವ್ಯವಸಾಯ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಲು ಅನೇಕ ಯೋಜನೆಗಳನ್ನು ಇವರು ಕೈಗೊಂಡರು. ಇವರು ಮುಖ್ಯವಾಗಿ ಶಿವನಸಮುದ್ರದಲ್ಲಿ ವಿದ್ಯುತ್ ಆಗರವನ್ನು ಸ್ಥಾಪಿಸಿದರು. ನೀರನ್ನು ಬಳಸಿ ವಿದ್ಯುಚ್ಛಕ್ತಿಯನ್ನು ಪಡೆಯುವ ಈ ತಾಂತ್ರಿಕತೆಯು ಭಾರತದಲ್ಲಿಯೇ ಮೊಟ್ಟ ಮೊದಲನೆಯದಾಗಿದ್ದು, ಇದನ್ನು ಮೈಸೂರಿನಲ್ಲಿ ಸ್ಥಾಪಿಸಿದ ಕೀರ್ತಿ ಶೇಷಾದ್ರಿಯವರಿಗೆ ಸಲ್ಲುತ್ತದೆ. ನಮ್ಮ ರಾಜ್ಯದಲ್ಲಿ ಮಾರಿ ಕಣಿವೆಯ ಜಲಾಶಯವನ್ನು ಕಟ್ಟಿಸಿ ಶೇಷಾದ್ರಿ ಅಯ್ಯರ್ ಅವರು ರೈತರಿಗೆ ಅನುಕೂಲವನ್ನು ಮಾಡಿದ್ದಾರೆ.

ಶೇಷಾದ್ರಿ ಅಯ್ಯರ್ ಅವರ ಸೇವೆಯನ್ನು ಗಮನಿಸಿದ ಅಂದಿನ ಬ್ರಿಟಿಷ್ ಸರ್ಕಾರವು ಇವರಿಗೆ **ಕೆಸಿಎಸ್‌ಐ** ಪದವಿಯನ್ನು (1893) ಮತ್ತು ಮೈಸೂರಿನ ಮಹಾರಾಜರು **ರಾಜ್ಯದು ರಂಧರ** ಎಂಬ ಬಿರುದನ್ನು ನೀಡಿ ಗೌರವಿಸಿದರು. ಶೇಷಾದ್ರಿ ಅಯ್ಯರ್ ಅವರು 1901ರ ಸೆಪ್ಟೆಂಬರ್ ತಿಂಗಳಿನಲ್ಲಿ ವಿಶ್ರಾಂತಿ ಪೂರ್ವ ರಜೆಯನ್ನು ಪಡೆದರು. ಕೆಲ ದಿನಗಳಲ್ಲೇ ಅವರು ನಿಧನರಾದರು.

ಶೇಷಾದ್ರಿ ಅಯ್ಯರ್ ಅವರು ಮೈಸೂರು ರಾಜ್ಯಕ್ಕೆ ಸಲ್ಲಿಸಿದ ಉತ್ತಮ ಸೇವೆಗಾಗಿ ಭಾರತದ ವೈಸ್‌ರಾಯ್ ಆಗಿದ್ದ ಲಾರ್ಡ್ ಹಾರ್ಡಿಂಜರೇ ಬೆಂಗಳೂರಿಗೆ ಬಂದು ಶೇಷಾದ್ರಿ ಅಯ್ಯರ್ ಅವರ ನೆನಪಿಗಾಗಿ ಕಟ್ಟಿದ್ದ ಒಂದು ಭವನ (ಈಗಿನ ಕಬ್ಬನ್ ಪಾರ್ಕ್‌ನಲ್ಲಿರುವ ರಾಜ್ಯದ ಕೇಂದ್ರ ಗ್ರಂಥಾಲಯ ಕಟ್ಟಡ)ದ ಮುಂದೆ ಶೇಷಾದ್ರಿ ಅಯ್ಯರ್ ಅವರ ಕರಿಯ ಕಲ್ಲಿನ ಶಿಲ್ಪವನ್ನೂ ಅನಾವರಣ ಮಾಡಿದರು.

ಬಸವಮಾರ್ಗ ಫೌಂಡೇಶನ್‌ನಿಂದ ಯಶಸ್ವಿ ಮದ್ಯ ವರ್ಜನ ಶಿಬಿರ

ಫೌಂಡೇಶನ್ ಸೇವಾ ಕಾರ್ಯಕ್ಕೆ ಹೆಬ್ಬಾಳು ಇನ್‌ಸ್ಪೆಕ್ಟರ್ ಪ್ರಸಾದ್ ಶ್ಲಾಘನೆ



ಮೈಸೂರು, ಜೂ.23(ಎಂಕೆ)– ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಬಸವ ಮಾರ್ಗ ಫೌಂಡೇಶನ್‌ನಲ್ಲಿ ಆಯೋಜಿಸಿದ್ದ 16ನೇ ಮದ್ಯ ವರ್ಜನ ಶಿಬಿರ ಯಶಸ್ವಿಯಾಗಿ ನೆರವೇರಿತು.

21 ದಿನಗಳ ಶಿಬಿರದಲ್ಲಿ ಭಾಗವಹಿಸಿದ್ದ 60 ಮಂದಿ ಶಿಬಿರಾರ್ಥಿಗಳು ಮದ್ಯ ವ್ಯಸನದಿಂದ ಮುಕ್ತರಾಗಿ ಹೊಸ ಜೀವನಕ್ಕೆ ಕಾಲಿಟ್ಟರು. ಶಿಬಿರಾರ್ಥಿಗಳು ಆಧ್ಯಾತ್ಮಿಕ ಶಿಕ್ಷಣ ಪಡೆಯುವುದರೊಂದಿಗೆ ಸ್ವಚ್ಛತೆ, ಸಸಿ ನೆಡುವುದು ಸೇರಿದಂತೆ ಹಲವು ಸಮಾಜಮುಖಿ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು ವಿಶೇಷವಾಗಿತ್ತು.

ಮದ್ಯ ವರ್ಜನ ಶಿಬಿರದ ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಹೆಬ್ಬಾಳ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಪ್ರಸಾದ್ ಮಾತನಾಡಿ, ಮದ್ಯ ವ್ಯಸನಿಗಳನ್ನು ಚಟದಿಂದ ಮುಕ್ತಿಗೊಳಿಸಿ, ಸಮಾಜದ ಮುಖ್ಯವಾಹಿನಿಗೆ ತರುವ ಕೆಲಸ ಮಾಡುತ್ತಿರುವ ಬಸವ ಮಾರ್ಗ ಫೌಂಡೇಷನ್‌ನ ಸೇವಾ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ಮದ್ಯದ ಚಟದಿಂದ ಬಿಡಿಸುವುದರೊಂದಿಗೆ ಸಮಾಜದಲ್ಲಿ ಹೇಗೆ ಉತ್ತಮ ಮಾರ್ಗದಲ್ಲಿ ನಡೆಯಬೇಕು ಎಂಬುದರ ಬಗ್ಗೆ ಸಂಸ್ಥೆ ಮಾರ್ಗದರ್ಶನ ಮಾಡುತ್ತಿದೆ ಎಂದರು.

ಫೌಂಡೇಷನ್‌ನ ಅಧ್ಯಕ್ಷ ಎಸ್.ಬಸವರಾಜು ಮಾತನಾಡಿ, ಮದ್ಯ ವ್ಯಸನಿಗಳನ್ನು ಚಟದಿಂದ ಮುಕ್ತಿಗೊಳಿಸಿ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವುದೇ ನಮ್ಮ ಫೌಂಡೇಷನ್ ಉದ್ದೇಶವಾಗಿದೆ. ಇದಕ್ಕಾಗಿ ವ್ಯಸನ ಮುಕ್ತ ಆಶ್ರಮವನ್ನು ಸ್ಥಾಪಿಸಲಾಗುತ್ತಿದ್ದು, ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ವ್ಯಸನಿಗಳನ್ನು ಕರೆತಂದು, ಚಟದಿಂದ ವಿಮುಕ್ತಿಗೊಳಿಸಿ ಅಲ್ಲಿಯೇ ಉದ್ಯೋಗ ಕಲ್ಪಿಸುವ ವ್ಯವಸ್ಥೆ ಮಾಡಲಾಗುವುದು ಎಂದರು.

21 ದಿನಗಳ ಶಿಬಿರದಲ್ಲಿ 60 ಮಂದಿಗೆ ದೈಹಿಕ ಮತ್ತು ಮಾನಸಿಕ ಚಿಕಿತ್ಸೆಯೊಂದಿಗೆ ಯೋಗ ತರಬೇತಿ, ಆಧ್ಯಾತ್ಮಿಕ ಶಿಕ್ಷಣ ನೀಡಲಾಗಿದೆ. ಪರಿಸರ ದಿನದಂದು 100 ಗಿಡಗಳನ್ನು ಶಿಬಿರಾರ್ಥಿಗಳು ನೆಟ್ಟಿದ್ದು, ಜತೆಗೆ ಸ್ವಚ್ಛತಾ ಕಾರ್ಯವನ್ನು ಸಹ ಮಾಡಿದ್ದಾರೆ ಎಂದು ಹೇಳಿದರು. ಈ ವೇಳೆ ಆನಂದ್, ಮಧು ಇನ್ನಿತರರು ಉಪಸ್ಥಿತರಿದ್ದರು.

ಹೊನ್ನಿಧಿಗೆ ಅತ್ಯುನ್ನತ ಶ್ರೇಣಿ



ಮೈಸೂರು, ಜೂ.23– ನಗರದ ವಿಜಯ ವಿಠಲ ಕಾಲೇಜಿನ ವಿದ್ಯಾರ್ಥಿನಿ ಟಿ.ಹೊನ್ನಿಧಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.96 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಕನ್ನಡ 94, ಇಂಗ್ಲೀಷ್ 94, ಭೌತಶಾಸ್ತ್ರ 96, ರಸಾಯನಶಾಸ್ತ್ರ 94, ಗಣಿತ 99, ಜೀವಶಾಸ್ತ್ರ 97 ಸೇರಿದಂತೆ ಒಟ್ಟು 574 ಅಂಕ ಗಳಿಸಿದ್ದಾರೆ.

ವೃದ್ಧೆಗೆ ಪಿಂಚಣಿ ಕೊಡಿಸುವ ಆಮಿಷ ತೋರಿ ವೃದ್ಧೆಯ ಸರಕಳವು

ಮದ್ದೂರು, ಜೂ.23– ವೃದ್ಧೆಯೊಬ್ಬರಿಗೆ ವೃದ್ಧಾಪ್ಯ ವೇತನದ ಹಣ ಕೊಡಿಸುವುದಾಗಿ ನಂಬಿಸಿ ಮಾಂಗಲ್ಯ ಸರ ಎಗರಿಸಿದ ಘಟನೆ ಮದ್ದೂರು ಪಟ್ಟಣದಲ್ಲಿ ನಡೆದಿದೆ.

ಮದ್ದೂರು ತಾಲೂಕು ಚಾಮನಹಳ್ಳಿ ಗ್ರಾಮದ ಗೌರಮ್ಮ(69) ಅವರು ಜೂ.20ರಂದು ಬೆಳಗ್ಗೆ ಮದ್ದೂರಮ್ಮನ ದೇವಸ್ಥಾನದ ಬಳಿ ಬರುತ್ತಿದ್ದಾಗ ಅವರಿಗೆ ಎದುರಾದ ಅಪರಿಚಿತ ವ್ಯಕ್ತಿ ತನ್ನನ್ನು ಗ್ರಾಮ ಲೆಕ್ಕಿಗ ಎಂದು ಪರಿಚಯಿಸಿಕೊಂಡು ನಿಮಗೆ 60 ವರ್ಷ ವಯಸ್ಸಾಗಿದೆ. 50 ಸಾವಿರ ರೂ. ವೃದ್ಧಾಪ್ಯ ವೇತನದ ಹಣ ಬಂದಿದೆ. ಅದನ್ನು ಕೊಡಿಸುತ್ತೇನೆ ಎಂದು ಹೇಳಿ, ಅವರ ಆಧಾರ್ ಕಾರ್ಡ್ ಮತ್ತು ಫೋಟೋ ಬೇಕು ಎಂದು ಹೇಳಿದ್ದಾನೆ. ಮಹಿಳೆಯ ಮೊಬೈಲ್‌ನಿಂದಲೇ ಆಕೆಯ ಮೊಮ್ಮಗನಿಗೆ ಕರೆ ಮಾಡಿ ವೃದ್ಧಾಪ್ಯ ವೇತನ 58 ಸಾವಿರ ರೂ. ಬಂದಿದೆ. ಅದರಲ್ಲಿ ನಾವು 8 ಸಾವಿರ ಹಿಡಿದುಕೊಂಡು ಉಳಿದ 50 ಸಾವಿರ ರೂ. ಕೊಡುತ್ತೇವೆ. ಅದಕ್ಕೆ ನಿಮ್ಮ ಅಜ್ಜಿಯ ಫೋಟೋ, ಆಧಾರ್ ಕಾರ್ಡ್ ಬೇಕು ಎಂದು ಕೇಳಿದ್ದಾನೆ. ಅದನ್ನು ನಂಬಿದ ಮೊಮ್ಮಗ ಆಧಾರ್ ಕಾರ್ಡ್, ಫೋಟೋ ಕೊಡುವಂತೆ ಅಜ್ಜಿಗೆ ತಿಳಿಸಿದ್ದಾನೆ.

ಅಪರಿಚಿತ ವ್ಯಕ್ತಿ ವೃದ್ಧೆಯನ್ನು ಮದ್ದೂರಿನ ಫೋಟೋ ಸ್ಟುಡಿಯೋವೊಂದಕ್ಕೆ ಕರೆದೊಯ್ದು ಫೋಟೋ ತೆಗೆಸಿದ ನಂತರ ಎಸ್‌ಬಿಐ ಬಳಿಗೆ ಕರೆದೊಯ್ದಿದ್ದಾನೆ. ಅಲ್ಲಿಂದ ಯಾರಿಗೋ ಮೊಬೈಲ್‌ನಲ್ಲಿ ಮಾತನಾಡಿದ ನಂತರ ನಿಮ್ಮ ವೃದ್ಧಾಪ್ಯ ವೇತನ ಕೊಡಲು ವರಮಾನದ ಬಗ್ಗೆ ಕೇಳುತ್ತಾರೆ. ನನ್ನ ಬಳಿ 30 ಗ್ರಾಂನ ಚೈನ್ ಇದೆ. ನಿಮ್ಮ ಚೈನ್ ಅನ್ನು ಕೂಡ ಕೊಡಿ. ಅದನ್ನು ತೋರಿಸಿ ನಿಮಗೆ ಹಣ ಕೊಡಿಸುತ್ತೇನೆ ಎಂದು ಹೇಳಿ ಅವರ 30 ಗ್ರಾಂ ತೂಕದ ಮಾಂಗಲ್ಯ ಸರ ಪಡೆದ ನಂತರ ನಿಮ್ಮ ಆಫ್ ಪೋಟೋ ಮಾತ್ರ ತೆಗೆಸಿದ್ದೇನೆ. ಆದರೆ ಫುಲ್ ಫೋಟೋ ಬೇಕಂತೆ ಎಂದು ಹೇಳಿ ಮತ್ತೊಂದು ಫೋಟೋ ಸ್ಟುಡಿಯೋಗೆ ಹೋಗಿ ಫೋಟೋ ತೆಗೆಯಲು ಹೇಳಿದ್ದಾನೆ. ಫೋಟೋಗ್ರಾಫರ್ ಫೋಟೋ ತೆಗೆಯುವ ಸಲುವಾಗಿ ಸ್ಕ್ರೀನ್ ಎಳೆಯುತ್ತಿದ್ದಂತೆಯೇ ಅಪರಿಚಿತ ವ್ಯಕ್ತಿ ಮಹಿಳೆಯ ಮಾಂಗಲ್ಯ ಸರ ಸಮೇತ ಪರಾರಿಯಾಗಿದ್ದಾನೆ. ಈ ಸಂಬಂಧ ಮದ್ದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಲ–ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.23– ಮೈಸೂರು ಮಹಾನಗರ ಪಾಲಿಕೆಯಲ್ಲಿ 2022–23ನೇ ಸಾಲಿನ ಡೇ–ನಲ್ಮ್ ಯೋಜನೆಯಡಿ ವಿವಿಧ ಸಾಲ–ಸೌಲಭ್ಯಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಸೂಕ್ತ ದಾಖಲೆಗಳೊಂದಿಗೆ ಅರ್ಜಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪ್ರಧಾನಿ ನರೇಂದ್ರ ಮೋದಿ ಇನ್ನೂ ಮೈಸೂರಲ್ಲೇ ಇದ್ದಾರೆ! ಭೇಟಿ ಮಾಡಿದವರಿಗೆ ಯೋಗ ಹೇಳಿಕೊಡುತ್ತಾರೆ!!


● ಆಯುಷ್ ಸಚಿವಾಲಯದ ಡಿಜಿಟಲ್ ಯೋಗ ಪ್ರದರ್ಶನ ● ಪ್ರಧಾನಿ ಮೋದಿಯವರೊಂದಿಗೆ ಯೋಗ ಮಾಡಿದಂತೆ ಛಾಯಾಚಿತ್ರ ತೆಗೆದುಕೊಳ್ಳುವ ಸದಾವಕಾಶ ● ಡಿಜಿಟಲ್ ಪರದೆಗಳಲ್ಲಿ ಮೂಡಿ ಬರಲಿದೆ ಯೋಗದ ಸಮಗ್ರ ನೋಟ

ಎಂ.ಬಿ.ಪವನ್‌ಮೂರ್ತಿ

ಮೈಸೂರು,ಜೂ.23– 'ಯೋಗ' ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಗೆ ಸಹಕಾರಿ. ಇಂತಹ ವಿದ್ಯೆಯನ್ನು ಇಡೀ ವಿಶ್ವಕ್ಕೆ ನೀಡಿದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ. ಈ ವಿದ್ಯೆಯನ್ನು ಕರಗತ ಮಾಡಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ಇದೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಂದು ಮೈಸೂರು ಅರಮನೆ ಆವರಣದಲ್ಲಿ ನಡೆದ ಸಾಮೂಹಿಕ ಯೋಗ ಪ್ರದರ್ಶನ ಸಾರಥ್ಯ ವಹಿಸಿದ್ದರು.

ಆದರೆ ಈ ಕಾರ್ಯಕ್ರಮದ ಬಳಿಕ ಪ್ರಧಾನಿ ನರೇಂದ್ರ ಮೋದಿ ದೆಹಲಿಗೆ ಮರಳದೇ ಮೈಸೂರಿನಲ್ಲೇ ಉಳಿದಿದ್ದಾರೆ! ಹೌದು, ಅವರು ಇನ್ನೂ ಮೈಸೂರಿನಲ್ಲೇ ಇದ್ದಾರೆ! ಮಾತ್ರವಲ್ಲ, ಅವರನ್ನು ಭೇಟಿ ಮಾಡಿದರೆ, ಯೋಗವನ್ನು ನಿಮಗೂ ಹೇಳಿಕೊಡಲಿದ್ದಾರೆ! ಹಾಗಾದರೆ, ಎಲ್ಲಿ ಭೇಟಿ ಮಾಡುವುದು ಎಂಬ ಪ್ರಶ್ನೆಯೇ? ಹೆಚ್ಚು ದೂರ ಹೋಗಬೇಕಿಲ್ಲ. ಮೈಸೂರಿನ ವಸ್ತು ಪ್ರದರ್ಶನ ಆವರಣಕ್ಕೆ ಭೇಟಿ ಕೊಟ್ಟರೆ ಸಾಕು. ಅಲ್ಲಿ ಪ್ರಧಾನಿಗಳು ನಿಮ್ಮೊಂದಿಗೆ ಯೋಗ ಮಾಡಲಿದ್ದಾರೆ. ಇದೇನಿದು ಎಂದು ಅಚ್ಚರಿಯೇ?

ವಸ್ತು ಪ್ರದರ್ಶನ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಕೇಂದ್ರ ಸರ್ಕಾರದ ಆಯುಷ್ ಸಚಿವಾಲಯ ಹಮ್ಮಿಕೊಂಡಿರುವ ಡಿಜಿಟಲ್ ಯೋಗ ಪ್ರದರ್ಶನಕ್ಕೆ ಭೇಟಿ ನೀಡಿದರೆ, ಅಲ್ಲಿ ತೆರೆದುಕೊಳ್ಳುವ ಡಿಜಿಟಲ್ ಪರದೆಗಳಲ್ಲಿ ಮೋದಿಯವರು ಯೋಗ ಹೇಳಿಕೊಡಲಿದ್ದಾರೆ. ಜೊತೆಗೆ ಅವರೊಂದಿಗೆ ಯೋಗ ಮಾಡುವ ಯೋಗವೂ ಇಲ್ಲಿ ಲಭಿಸಲಿದೆ. ಆ ಮೂಲಕ ಈ ಡಿಜಿಟಲ್ ಲೋಕದಲ್ಲಿ ಮೋದಿ ಯವರೊಂದಿಗೆ ಯೋಗ ಮಾಡಿದಂತೆ ನಾವು ಛಾಯಾಚಿತ್ರಗಳನ್ನು ತೆಗೆದುಕೊಂಡು ಖುಷಿಪಡಬಹುದು.



ಪ್ರಧಾನಿ ನರೇಂದ್ರ ಮೋದಿಯವರು ಜೊತೆಯಲ್ಲಿ ನಿಂತಿರುವಂತೆ ಫೋಟೋ ನೀಡುವ ಡಿಜಿಟಲ್ ಪರದೆ

ಇಲ್ಲಿ 'ಯೋಗ ವಿತ್ ಮೋದಿ ಜೀ' ಶೀರ್ಷಿಕೆ ಇರುವ ಡಿಜಿಟಲ್ ಪರದೆ ಬಳಿಗೆ ಹೋಗಿ, ಇಲ್ಲಿರುವ ಚೌಕಾಕಾರದ ಚೌಕಟ್ಟಿನ ಗುರುತಿನ ಜಾಗದಲ್ಲಿ ನಿಂತರೆ, ಪರದೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಯೋಗಾಸನ ಮಾಡುವಂತಹ ಚಿತ್ರಗಳು ಬಿತ್ತರಗೊಳ್ಳುತ್ತವೆ. ಚೌಕಟ್ಟಿನಲ್ಲಿ ನಿಂತವರು ಮೋದಿಯವರಂತೆ ಯೋಗದ ನಾಲ್ಕು ಸರಳ ಆಸನಗಳನ್ನು ಮಾಡಿದರೆ, ಕೊನೆಗೆ ಪರದೆಯಲ್ಲಿ ಮೋದಿಯವರು ನಿಂತಿರುವ ಚಿತ್ರ ಅನಾವರಣಗೊಳ್ಳಲಿದ್ದು, ನೈಜವಾಗಿಯೇ ಮೋದಿಯವರು ಪಕ್ಕದಲ್ಲಿ ಇರುವಂತೆ ಚಿತ್ರವೊಂದು ಮೂಡಿಬರಲಿದೆ. ಇದನ್ನು ಮೊಬೈಲ್‌ನಲ್ಲಿ ಕ್ಲಿಕ್ಕಿಸಿಕೊಂಡರೆ, ಮೋದಿಯವರ ಪಕ್ಕದಲ್ಲೇ ನಿಂತಂತೆ ಫೋಟೋ ತೆಗೆದುಕೊಳ್ಳಬಹುದು.

ಸೆಂಟ್ರಲ್ ಕೌನ್ಸಿಲ್ ಫಾರ್ ರಿಸರ್ಚ್ ಇನ್ ಯೋಗ ಅಂಡ್ ನ್ಯಾಚುರೋಪತಿ (ಸಿಸಿಆರ್‌ವೈಎನ್) ಈ ಡಿಜಿಟಲ್ ಯೋಗ ಪ್ರದರ್ಶನದ ವಿನ್ಯಾಸ ರೂಪುಗೊಳಿಸಿ, ಸಜ್ಜುಗೊಳಿಸಿದೆ. ಅಲ್ಲದೆ, ಇದರ ಪ್ರತಿನಿಧಿಗಳು ಇಲ್ಲಿಗೆ ಭೇಟಿ ನೀಡುವ ಸಾರ್ವಜನಿಕರಿಗೆ ಪ್ರದರ್ಶನದ ಮಾಹಿತಿ ನೀಡಲಿದ್ದಾರೆ.

ವೇದಪೂರ್ವ ಕಾಲ, ಶಾಸ್ತ್ರೀಯ ಅವಧಿ, ಶಾಸ್ತ್ರೀಯ ಅವಧಿಯ ನಂತರ, ಆಧುನಿಕ ಅವಧಿಯಲ್ಲಿ ಯೋಗ ಆಯಾಮಗಳನ್ನು ಡಿಜಿಟಲ್ ಮಾಧ್ಯಮದ ಮೂಲಕ ಅನಾವರಣ ಆಗಲಿದೆ. ಚೌಕಾಕಾರದ ಚೌಕಟ್ಟಿನ ಗುರುತಿನ ಮೇಲೆ ನಿಂತರೆ, ಎದುರಿನ ಪರದೆಯಲ್ಲಿ ಈ ಅವಧಿಯ ಯೋಗದ ಇತಿಹಾಸ ತೆರೆದುಕೊಳ್ಳಲಿದೆ. ವೇದಪೂರ್ವ ಕಾಲದಲ್ಲಿ ಸಿಂಧೂ ಬಯಲಿನ ನಾಗರಿಕತೆಯಲ್ಲಿಯೂ ಯೋಗ ಇತ್ತು ಎಂಬುದು ಸೇರಿದಂತೆ ಸಮಗ್ರ ಮಾಹಿತಿಗಳು ಇಲ್ಲಿ ಡಿಜಿಟಲ್ ರೂಪದಲ್ಲಿ ಅನಾವರಣಗೊಳ್ಳಲಿವೆ.

ಇನ್ನು, ಇದರ ಪಕ್ಕದಲ್ಲೇ ಇರುವ ಕಿಯೋಸ್ಕ್ ಮಾದರಿಯ ಡಿಜಿಟಲ್ ಪರದೆ ಹೊಂದಿರುವ ಯಂತ್ರದ ಬಳಿಗೆ ಹೋಗಿ ಅದರಲ್ಲಿರುವ ನೀಲಿ ಬೆಳಕು ಸೂಸುವ ಗುಂಡಿ ಮಾದರಿಯ ಮೇಲೆ ಕೈಯೊಡ್ಡಿದರೆ, ಯೋಗಾಭ್ಯಾಸಕ್ಕೆ ಸಂಬಂಧಿಸಿದಂತೆ ನಡೆದ ಸಂಶೋಧನೆ ಮತ್ತು ಬೆಳವಣಿಗೆಗಳ ಚಿತ್ರಣ ದೊರೆಯಲಿದೆ. ಇದರ ಸನಿಹದಲ್ಲೇ ಯೋಗಕ್ಕೆ ಸಂಬಂಧಿಸಿದ ಮತ್ತೊಂದು ಮಹತ್ವದ ಮಾಹಿತಿ ದೊರೆಯಲಿದೆ. ಅದೇಂದರೆ, ಯಾವ್ಯಾವ ಕಾಯಿಲೆಗಳ ನಿವಾರಣೆಗೆ ಯೋಗ ನೆರವಾಗಲಿದೆ ಎಂಬ ಬಗ್ಗೆ ನಡೆದಿರುವ ವೈದ್ಯಕೀಯ ಪ್ರಯೋಗಗಳ ಕುರಿತಂತೆ ಬೃಹತ್ ಫಲಕದಲ್ಲಿ ಇಲ್ಲಿ ಮಾಹಿತಿ ಇದೆ.

'ಡಿಜಿಟಲ್ ಯುಗದಲ್ಲಿ ಯೋಗ' ಶೀರ್ಷಿಕೆಯಡಿ ಅಳವಡಿಸಿರುವ ಡಿಜಿಟಲ್ ಪರದೆಗಳ ಎದುರು ನಿಂತು ಮೊಬೈಲ್‌ಗಳಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ, ಪ್ರಸ್ತುತದಲ್ಲಿ ಯೋಗದ ಸಮಗ್ರ ಚಿತ್ರಣ ನಿಮ್ಮ ಮೊಬೈಲ್‌ಗಳಲ್ಲಿ ಅನಾವರಣಗೊಳ್ಳಲಿದೆ.

'ಬೆಸ್ಟ್ ಯೋಗ ಪ್ಲಾನ್' ಶೀರ್ಷಿಕೆಯಡಿ ಇರುವ ಡಿಜಿಟಲ್ ಪರದೆಗಳು ಎತ್ತರ ಮತ್ತು ತೂಕ ಪರಿಶೀಲಿಸಿ ಯಾವ ಆಸನಗಳನ್ನು ಮಾಡಬೇಕೆಂಬ ಮಾಹಿತಿ ನೀಡಲಿವೆ. ಭೌತಿಕ ದ್ರವ್ಯರಾಶಿ ಸೂಚಿ (ಬಾಡಿ ಮಾಸ್ ಇಂಡೆಕ್ಸ್) ಅಳತೆ ಮಾಡಿ, ಒಂದೆರಡು ಆಸನಗಳ ಬಗ್ಗೆ ಮಾಹಿತಿ ನೀಡಲಿದೆ. ಜೊತೆಗೆ ಅಲ್ಲಿ ಪ್ರದರ್ಶನಗೊಳ್ಳುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ, ನಿಮಗೆ ಸರಿ ಹೊಂದುವ ಯೋಗದ ಆಸನಗಳ ಮಾಹಿತಿ ಲಭ್ಯವಾಗಲಿದೆ.

ಯೋಗದ ಪ್ರಯೋಜನ ಕುರಿತು ಅರಿವು ಮೂಡಿಸಲು ಆಧುನಿಕ ಸಂವಹನಾ ತಂತ್ರಜ್ಞಾನಗಳ ಬಳಕೆ ಮೂಲಕ ಏರ್ಪಡಿಸಿರುವ ಈ ಡಿಜಿಟಲ್ ವಸ್ತು ಪ್ರದರ್ಶನ ನಮ್ಮ ದೇಹ ಮತ್ತು ಮನಸ್ಸು ಅರ್ಥ ಮಾಡಿಕೊಳ್ಳಲು ಸಹಕಾರಿಯಾಗಲಿದೆ. ಇದರ ಜೊತೆಗೆ ಈ ಪ್ರದರ್ಶನದ ಪಕ್ಕದಲ್ಲೇ 'ಆಯುಷ್ ಪ್ರದರ್ಶನ' ಶೀರ್ಷಿಕೆಯಡಿ ಹಮ್ಮಿಕೊಂಡಿರುವ ವಸ್ತು ಪ್ರದರ್ಶನದಲ್ಲಿ 150ಕ್ಕೂ ಹೆಚ್ಚು ಮಳಿಗೆಗಳು ಯೋಗದ ಪ್ರಯೋಜನಗಳ ಬಗ್ಗೆ ಮಾಹಿತಿ ನೀಡಲಿವೆ.

ಜೂ.26ರವರೆಗೆ ಸಾರ್ವಜನಿಕರಿಗೆ ಪ್ರವೇಶ ಉಚಿತ


ಡಿಜಿಟಲ್ ಯೋಗ ಪ್ರದರ್ಶನ ಮತ್ತು ಯೋಗಕ್ಕೆ ಸಂಬಂಧಿಸಿದ ಮಳಿಗೆಗಳ ವಸ್ತು ಪ್ರದರ್ಶನ ಜೂ.26ರವರೆಗೆ ವಿಸ್ತರಣೆಗೊಂಡಿದೆ. ಮಳಿಗೆಗಳ ವಸ್ತು ಪ್ರದರ್ಶನದಲ್ಲಿ ಔಷಧ ಉದ್ಯಮ ಕಂಪನಿಗಳು ತಮ್ಮ ಮಳಿಗೆಗಳನ್ನು ಖಾಲಿ ಮಾಡಿವೆ. ಉಳಿದಂತೆ ಸರ್ಕಾರಿ ಅಧೀನದ ಸಂಸ್ಥೆಗಳು ಇವೆ. ಪ್ರವೇಶ ಉಚಿತವಿದ್ದು, ಬೆಳಗ್ಗೆ 9ರಿಂದ ರಾತ್ರಿ 8ರವರೆಗೆ ಸಾರ್ವಜನಿಕರು ಭೇಟಿ ನೀಡಬಹುದು.

-ಕೆ.ರುದ್ರೇಶ್, ವಸ್ತು ಪ್ರದರ್ಶನ ಪ್ರಾಧಿಕಾರದ ಪ್ರಭಾರ ಸಿಇಓ ಮತ್ತು ತೋಟಗಾರಿಕೆ ಇಲಾಖೆ ಡಿಡಿ

ಬುದ್ಧಿಮತ್ತೆ ವೃದ್ಧಿಸಲು ಯಾವ ಯೋಗಾಸನ ಮಾಡಬೇಕೆಂದು ತಿಳಿಯಿರಿ...

ಇಲ್ಲಿನ ಡಿಜಿಟಲ್ ಪರದೆಯಲ್ಲಿ ಮೈಂಡ್ ಗೇಮ್ಸ್ (ಮನಸ್ಸಿನ ಆಟ) ಮೂಲಕ ಮತ್ತಷ್ಟು ಬುದ್ಧಿಮತ್ತೆ ವೃದ್ಧಿಸಿಕೊಳ್ಳಲು ಮಾಡಬೇಕಿರುವ ಆಸನಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು.

'ಗ್ರೀನ್' ಎಂದು ಬರೆದಿರುವುದು ಪ್ರಕಟಗೊಳ್ಳಲಿದ್ದು, ಅದು ಹಳದಿ ಬಣ್ಣದ ಅಕ್ಷರದಲ್ಲಿ ಗ್ರೀನ್ (ಇಂಗ್ಲಿಷ್ ಅಕ್ಷರ) ಎಂದು ಬರೆದಿದ್ದರೆ, ಕೆಳ ಬದಿಯಲ್ಲಿ ಬರುವ ನಾಲ್ಕು ಉತ್ತರಗಳಲ್ಲಿ ಸರಿ ಉತ್ತರ ಸ್ಪರ್ಶಿಸಿದರೆ (ಟಚ್ ಸ್ಕ್ರೀನ್) ಸರಿಯಾದ ಆಟ ಆಡಿದಂತೆ. ಹೀಗೆ, 10 ಬಾರಿ ಅಕ್ಷರದ ಚಿತ್ರಗಳು ಪ್ರಕಟಗೊಳ್ಳಲಿದ್ದು, 10ಕ್ಕೆ 10 ಅಂಕಗಳು ಪಡೆದರೆ ನಿಮ್ಮ ಬುದ್ಧಿಮತ್ತೆ ಉತ್ತಮವಾಗಿದೆ ಎಂದು ಅರ್ಥೈಸಿಕೊಳ್ಳುವ ಜೊತೆಗೆ ಮತ್ತಷ್ಟು ಬುದ್ಧಿಮತ್ತೆ ಚುರುಕುಗೊಳ್ಳಲು ವಿವಿಧ ಆಸನಗಳ ಅಭ್ಯಾಸ ಬಗ್ಗೆ ಇಲ್ಲಿ ಮಾಹಿತಿ ಪಡೆಯಬಹುದು. ಯೆಲ್ಲೋ (ಇಂಗ್ಲಿಷ್‌ನಲ್ಲಿ) ಎಂದು ನೀಲಿ ಬಣ್ಣದಲ್ಲಿ ಬಂದರೆ, ಉತ್ತರವಾಗಿ 'ಬಿ' ಸ್ಪರ್ಶಿಸಿದರೆ ಸರಿ ಉತ್ತರ ಆಯ್ಕೆ ಮಾಡಿದಂತೆ. ಜೊತೆಗೆ ನಿಮಗೆ ಲಭ್ಯವಾಗುವ ಸ್ಕೋರ್ ಆಧಾರದಲ್ಲಿ ಯಾವ ಆಸನ ಮಾಡಬೇಕೆಂದು ಸಲಹೆ ಇಲ್ಲಿ ದೊರೆಯುತ್ತದೆ. ಆ ಮೂಲಕ ಬೌದ್ಧಿಕಶಕ್ತಿ ಉತ್ತಮಗೊಳಿಸಿಕೊಳ್ಳಲು ಯಾವ್ಯಾವ ಆಸನದಲ್ಲಿ ನೀವು ನಿರತರಾಗಬೇಕೆಂಬ ಮಾಹಿತಿ ನೀಡಲಾಗಿದೆ.



ಡಿಜಿಟಲ್ ಯೋಗ ಪ್ರದರ್ಶನದ ಹೊರಗಿನ ನೋಟ



ಡಿಜಿಟಲ್ ಪರದೆಗಳನ್ನು ಹೊಂದಿರುವ ಯೋಗ ಪ್ರದರ್ಶನದ ಒಂದು ಚಿತ್ರಣ

ರಂಗಾಯಣ ನಿರ್ದೇಶಕರ ನೇತೃತ್ವದಲ್ಲಿ 'ಸಂಗ್ರಾಮ'

ಸ್ವಾತಂತ್ರ್ಯ ಅಮೃತಮಹೋತ್ಸವದ ಅಂಗವಾಗಿ 'ತಾಯಿ ಭಾರತಿಗೆ ಸಂಗ್ರಾಮಧಾರತಿ' ನಾಟಕ



ಮೈಸೂರು, ಜೂ.23(ಎಂಕೆ)– ಮೈಸೂರು ರಂಗಾಯಣ ನಿರ್ದೇಶಕರ ನಿರ್ದೇಶನದಲ್ಲಿ ನಡೆಯುತ್ತಿದೆ 'ಸಂಗ್ರಾಮ'...! ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ 'ತಾಯಿ ಭಾರತಿಗೆ ಸಂಗ್ರಾಮಧಾರತಿ' ಮಾಡಲು ರಂಗಾಯಣ ಕಲಾವಿದರು ನಿರ್ಧರಿಸಿದ್ದು, ರಂಗಾಯಣ ನಿರ್ದೇಶಕರೇ ಅದರ ನೇತೃತ್ವ ವಹಿಸಿದ್ದಾರೆ. 1857–1947ರವರೆಗಿನ ಸ್ವಾತಂತ್ರ್ಯ ಹೋರಾಟದ ಇತಿಹಾಸದ ಪುಟಗಳಲ್ಲಿ ಮಿಂಚಿ ಮರೆಯಾದವರ ತ್ಯಾಗ–ಬಲಿದಾನ ಹೇಗಿತ್ತು ಎಂಬುದನ್ನು ಅನಾವರಣಗೊಳಿಸಲು ಬಣ್ಣದ ವೇದಿಕೆ ಸಿದ್ಧಪಡಿಸುತ್ತಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶನದ ಮೇರೆಗೆ 30 ನಿಮಿಷಗಳ "ತಾಯಿ ಭಾರತಿಗೆ ಸಂಗ್ರಾಮಧಾರತಿ' ನಾಟಕ ರೂಪುಗೊಳ್ಳುತ್ತಿದೆ. ಪ್ರಮುಖ 8 ದೃಶ್ಯಗಳನ್ನು ಒಳಗೊಂಡಿರುವ ನಾಟಕದಲ್ಲಿ ಭಗತ್‌ಸಿಂಗ್‌ರ ಹೋರಾಟದ ಕಿಚ್ಚಿನಿಂದ ಆರಂಭವಾಗಿ ಸ್ವಾತಂತ್ರ್ಯ ಪಡೆಯುವವರೆಗೂ ನಡೆಯುವ ಘಟನಾವಳಿಗಳನ್ನು ಅಚ್ಚುಕಟ್ಟಾಗಿ ಪ್ರತಿಬಿಂಬಿಸುವ ಪ್ರಯತ್ನ ಮಾಡಲಾಗಿದೆ.

ಪಾತ್ರಗಳು: ಮಂಗಲಪಾಂಡೆ, ಅಲಿ, ಹಿಗ್ಗಿನ್ಸ್, ಬಗ್, ಸೈಮನ್, ಜೇಮ್ಸ್ ಕಾರ್ಟ್ ಮತ್ತು ಜೆಪಿ ಸ್ಯಾಂಡರ್ಸ್,(ಬ್ರಿಟಿಷ್ ಅಧಿಕಾರಿಗಳು), ರಾಮ, ಬಾಲ, ಜಡಗ, ಹನುಮ(ಹಲಗಲಿ ಬೇಡರ ಗುಂಪು), ಬಂಕಿಮಚಂದ್ರ ಚಟರ್ಜಿ, ರವೀಂದ್ರನಾಥ ಠಾಗೋರ್, ವಿ.ಡಿ.ಸಾವರ್ಕರ್, ಮದನ್‌ಲಾಲ್ ದಿಂಗ್ರಾ ಮತ್ತು ಇಬ್ಬರು ಸ್ನೇಹಿತರು, ಬಾಲಗಂಗಾಧರ ತಿಲಕ್, ಲಾಲಾ ಲಜಪತ್‌ರಾಯ್, ಬಿಪಿನ್ ಚಂದ್ರಪಾಲ್, ಉದಾಂಸಿಂಗ್, ಭಗತ್ ಸಿಂಗ್, ರಾಜಗುರು, ಸುಖದೇವ್, ಬಾಪು ಮತ್ತು ಕಾಂಗ್ರೆಸ್ ಸದಸ್ಯರು, ಸುಭಾಷ್ ಚಂದ್ರ ಬೋಸ್, ಕ್ಯಾಪ್ಟನ್ ಲಕ್ಷ್ಮಿ ಹಾಗೂ ಭಗತ್ ಸಿಂಗ್ ತಾಯಿ ಪಾತ್ರಗಳಿರಲಿದೆ.

ನಿಜವಾದ ಸ್ವಾತಂತ್ರ್ಯ ಹೋರಾಟ: ಬ್ರಿಟಿಷರ ವಿರುದ್ಧ ನಡೆದ ನಿಜವಾದ ಸ್ವಾತಂತ್ರ್ಯ ಹೋರಾಟದ ಅಂಶಗಳನ್ನು ಒಳಗೊಂಡ ನಾಟಕ ಇದಾಗಿದೆ. ವೀರ ಸಾವರ್ಕರ್ ಅವರ ಹೋರಾಟದಿಂದ ಇತರರಿಗೆ ದೊರೆತ ಸ್ಫೂರ್ತಿ, ಸುಭಾಷ್ ಚಂದ್ರ ಬೋಸ್‌ರ ಸೇನಾ ಕಿಚ್ಚು, ಭಾರತವನ್ನು ಇಬ್ಭಾಗ ಮಾಡಬೇಕು ಎನ್ನುವ ಜಿನ್ನಾ ಹೋರಾಟ, ಗಾಂಧೀಜಿಯವರ ಪಾತ್ರ ಮತ್ತು ನೆಹರು ಅವರಲ್ಲಿದ್ದ ಅಧಿಕಾರದ ಬಯಕೆಯನ್ನು ಪ್ರಸ್ತುತಪಡಿಸಲಾಗಿದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

7 ದಿನಗಳ ಪ್ರದರ್ಶನ: ರಂಗಾಯಣ ಕಲಾವಿದರಾದ ರಾಜಶೇಖರ ಗಂಗಾವತಿ, ಮಿಲನ್ ಕೆ.ಗೌಡ ರಂಗರೂಪ ನೀಡಿದ್ದು, ನಾಳೆ ಶಿವಮೊಗ್ಗದಲ್ಲಿ ಪ್ರಾಯೋಗಿಕ ಪ್ರದರ್ಶನ ನಡೆಯಲಿದೆ. ನಂತರ ಬೆಂಗಳೂರಿನಲ್ಲಿ ಜು.4 ರಿಂದ 10ರವರೆಗೆ 7 ದಿನಗಳ ಕಾಲ ನಾಟಕ ಪ್ರದರ್ಶನವಿರಲಿದೆ ಎಂದು ಮಾಹಿತಿ ನೀಡಿದರು.

ಅನ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಜೂ.23– ಮೈಸೂರಿನ ಮರಿಮಲ್ಲಪ್ಪ ಕಾಲೇಜಿನ ವಿದ್ಯಾರ್ಥಿನಿ ಜೆ. ಕನ್ನಿಕಾ ದ್ವಿತೀಯ ಪಿಯು ಕಲಾ ವಿಭಾಗದ ಪರೀಕ್ಷೆಯಲ್ಲಿ 600 ಅಂಕಗಳಿಗೆ 570 ಅಂಕ (ಶೇ.95) ಗಳನ್ನು ಪಡೆದು , ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಕನ್ನಡ– 96 , ಇಂಗ್ಲೀಷ್ –91, ಭೂಗೋಳಶಾಸ್ತ್ರ –99, ಇತಿಹಾಸ –98, ರಾಜಶಾಸ್ತ್ರ –98 ಮತ್ತು ಅರ್ಥಶಾಸ್ತ್ರ –88 ಅಂಕಗಳನ್ನು ಗಳಿಸಿರುತ್ತಾಳೆ. ಈಕೆ ಮೈಸೂರಿನ ಗೋಕುಲಂನ ನಿವಾಸಿ ಜಯರಾಮ ಮತ್ತು ಲಲಿತಾ ದಂಪತಿ ಪುತ್ರಿಯಾಗಿದ್ದಾಳೆ.

ಪರಿಷತ್ ಚುನಾವಣೆಯಲ್ಲಿ ಬಿಜೆಪಿಗೆ ಜನರಿಂದ ತಕ್ಕ ಪಾಠ

ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ ವಾಗ್ದಾಳಿ



ಮೈಸೂರು,ಜೂ.23– ಪಕ್ಷವನ್ನು ತಳಮಟ್ಟದಿಂದ ಸಂಘಟನೆ ಮಾಡುವುದೇ ಚಿಂತನಾ ಶಿಬಿರದ ಉದ್ದೇಶವಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲಬೇಕು. ಕಾಂಗ್ರೆಸ್‌ಗೆ ಹಿನ್ನಡೆಯಾದ ಕ್ಷೇತ್ರಗಳಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು. ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಿ ಪ್ರಧಾನಿ ನರೇಂದ್ರ ಮೋದಿಗೆ ಗಿಫ್ಟ್ ಕೊಡಬೇಕು ಎಂದು ಬಿಜೆಪಿ ನಾಯಕರು ಪ್ಲಾನ್ ಮಾಡಿ ಕೊಂಡಿದ್ದರು. ಆದರೆ, ಜನರು ಅವರಿಗೆ ತಕ್ಕ ಪಾಠ ಕಲಿಸಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ವಾಗ್ದಾಳಿ ನಡೆಸಿದರು.

ಮಾಜಿ ಶಾಸಕ ಕೆ. ವೆಂಕಟೇಶ್ ಮಾತನಾಡಿ, ಬಿಜೆಪಿ ಹಾಗೂ ಜೆಡಿಎಸ್‌ನ ಅನೈತಿಕ ಸಂಬಂಧದಿಂದ ಕಾಂಗ್ರೆಸ್‌ಗೆ ಕಳೆದ ಬಾರಿ ಸೋಲುಂಟಾಯಿತು. ಈ ಬಾರಿ ಅಂತಹ ತಪ್ಪುಗಳು ಆಗದಂತೆ ಕಾಂಗ್ರೆಸ್ ಕಾರ್ಯಕರ್ತರು ಎಚ್ಚರಿಕೆ ವಹಿಸಬೇಕು. ಹಾಗಾಗಿ ಪಕ್ಷ ಸಂಘಟನೆಗೆ ಹೆಚ್ಚಿನ ಗಮನಹರಿಸಬೇಕು. ಈ ಹಿಂದೆ ಪ್ರಧಾನಿ ಮೋದಿ ಅಮೆರಿಕಕ್ಕೆ ಭೇಟಿ ನೀಡಿದ್ದ ಸಂದರ್ಭ ಅಲ್ಲಿನ ಭಾರತೀಯರು ಮೋದಿ ಮೋದಿ ಎಂದು ಘೋಷಣೆ ಕೂಗುತ್ತಿದ್ದರು. ಆದರೆ ಮೋದಿ ಈಗ ಹಿಟ್ಲರ್ ಮಾದರಿಯ ಆಡಳಿತ ನಡೆಸುತ್ತಿರುವುದು ಎಲ್ಲರಿಗೂ ಮನವರಿಕೆಯಾಗಿದೆ. ಹಾಗಾಗಿ ಅಮೆರಿಕಕ್ಕೆ ಇತ್ತೀಚೆಗೆ ಮೋದಿ ಭೇಟಿ ನೀಡಿದ ಸಂದರ್ಭ ಗೋ ಬ್ಯಾಕ್ ಮೋದಿ ಎಂಬ ಘೋಷಣೆ ಕೇಳಿ ಬಂತು. ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಜನಸಾಮಾನ್ಯರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಕಾಂಗ್ರೆಸ್ ಸರ್ಕಾರ ದೇಶಕ್ಕೆ ನೀಡಿದ ಕೊಡುಗೆಗಳನ್ನು ಜನರಿಗೆ ತಿಳಿಸಿ ಮತ್ತೆ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು ಎಂದು ಸಲಹೆ ನೀಡಿದರು.

ಬಿಜೆಪಿಗೆ ಸಿದ್ದರಾಮಯ್ಯ ಟಾರ್ಗೆಟ್: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಮುಗಿಸಬೇಕು ಎಂಬುದು ಬಿಜೆಪಿಯ ಲೆಕ್ಕಾಚಾರವಾಗಿದೆ. ಈ ಕಾರಣಕ್ಕಾಗಿ ಬಿಜೆಪಿ ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿಕೊಂಡು ಟೀಕಿಸುತ್ತಿದ್ದಾರೆ. ಆದರೆ, ಸಿದ್ದರಾಮಯ್ಯ ಬಿಜೆಪಿ ಟೀಕೆಗಳಿಗೆ ಸಮರ್ಥ ಉತ್ತರ ನೀಡುತ್ತಾ ರಾಜಕೀಯವಾಗಿ ಮತ್ತಷ್ಟು ಎತ್ತರಕ್ಕೆ ಬೆಳೆಯುತ್ತಿದ್ದಾರೆ. ರಾಜ್ಯದಲ್ಲಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪಕ್ಷವನ್ನು ಸಮರ್ಥವಾಗಿ ಸಂಘಟಿಸುತ್ತಿದ್ದು, 2023ರಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುವುದು ನಿಶ್ಚಿತ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲುವವರಿಗೆ ಪಕ್ಷ ಟಿಕೆಟ್ ನೀಡಬೇಕು. ನನಗೆ ಟಿಕೆಟ್ ಬೇಕು ಎಂದು ನಾನು ಕೇಳುವುದಿಲ್ಲ. ನನಗಿಂತ ಸಮರ್ಥ ನಾಯಕರು ಇದ್ದರೆ ಅವರಿಗೆ ಟಿಕೆಟ್ ನೀಡಿ. ಕಾಂಗ್ರೆಸ್ ಸಾಮಾಜಿಕ ನ್ಯಾಯಕ್ಕೆ ಹೆಚ್ಚಿನ ಒತ್ತು ನೀಡುತ್ತಿರುವ ಪಕ್ಷ. ಆದರೆ, ಟಿಕೆಟ್ ಹಂಚಿಕೆ ಸಂದರ್ಭ ಸಾಮಾಜಿಕ ನ್ಯಾಯವನ್ನೇ ಪ್ರಧಾನವಾಗಿ ಪರಿಗಣಿಸದೆ ಗೆಲ್ಲುವ ಅಭ್ಯರ್ಥಿಗಳಿಗೆ ಮಣೆ ಹಾಕಬೇಕು ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಶಾಸಕ ತನ್ವೀರ್ ಸೇಠ್ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರ ಜನರನ್ನು ದಾರಿ ತಪ್ಪಿಸುವ ಯೋಜನೆಗಳನ್ನು ಜಾರಿಗೆ ತರುತ್ತಿದೆ. ಆದರೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಜನರನ್ನು ದಾರಿ ತಪ್ಪಿಸುವ ಒಂದೇ ಒಂದು ಯೋಜನೆ ಜಾರಿಗೆ ತರಲಿಲ್ಲ. ಬದಲಾಗಿ ನಾವು ಜಾರಿಗೆ ತಂದ ಯೋಜನೆಗಳೆಲ್ಲವೂ ಜನೋಪಯೋಗಿ ಯೋಜನೆ ಗಳಾಗಿವೆ. ಆದರೆ ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ನಾವು ವಿಫಲವಾಗಿದ್ದೇವೆ. ದಲಿತರ ಮೇಲೆ ಅನ್ಯಾಯವಾದಾಗ ದಲಿತರು ಹೋರಾಟ ನಡೆಸಲಿ, ಹಿಜಾಬ್ ವಿಚಾರ ಬಂದಾಗ ಮುಸ್ಲಿಂ ಸಮುದಾಯ ಹೋರಾಟ ನಡೆಸಲಿ ಎಂಬ ಮಾನಸಿಕತೆಯಿಂದ ಕಾಂಗ್ರೆಸ್ ಹೊರಬರಬೇಕು. ಕಾಂಗ್ರೆಸ್ ಸಂಘಟಿತವಾಗಿ ಕೋಮು ಶಕ್ತಿಗಳನ್ನು ಎದುರಿಸಬೇಕು ಎಂದು ಅಭಿಪ್ರಾಯಪಟ್ಟರು.

ಮೋದಿ ಮೈಸೂರು ಪ್ಯಾರಿಸ್ ಮಾಡಿದರೆ...

ಮಾಜಿ ಸಚಿವ ಹೆಚ್.ಸಿ. ಮಹದೇವಪ್ಪ ಪ್ರಶ್ನೆ

ಮೈಸೂರು,ಜೂ.23(ಎಂಟಿವೈ)– ಲೋಕಸಭಾ ಚುನಾವಣೆ ಪ್ರಚಾರದ ವೇಳೆ ಮೈಸೂರನ್ನು ಪ್ಯಾರಿಸ್ ಮಾಡುವುದಾಗಿ ಹೇಳಿದ್ದ ಪ್ರಧಾನಿ ನರೇಂದ್ರ ಮೋದಿ ತಮ್ಮ ಭರವಸೆ ಈಡೇರಿಸದೆ, ಕಾಂಗ್ರೆಸ್ ಸರ್ಕಾರದ ಅವಧಿಯ ಅಭಿವೃದ್ಧಿ ಕಾಮಗಾರಿಗಳನ್ನೇ ಈಗ ಉದ್ಘಾಟಿಸಿದ್ದಾರೆ. ಇದೇ ಮೋದಿ ಸರ್ಕಾರದ ಸಾಧನೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಲೇವಡಿ ಮಾಡಿದ್ದಾರೆ.

ನವ ಸಂಕಲ್ಪ ಚಿಂತನಾ ಶಿಬಿರದಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಅಭಿವೃದ್ಧಿಗೆ ತಿಲಾಂಜಲಿ ನೀಡಿ ಯುವಜನರ ಮನಸ್ಸಿಗೆ ಕೋಮು ಅಫೀಮು ತುಂಬುವಲ್ಲಿ ಮಗ್ನವಾಗಿದೆ. ಬಿಜೆಪಿಯ ಜನವಿರೋಧಿ ನೀತಿಗಳ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಹೋರಾಟ ನಡೆಸಬೇಕು. ಇಲ್ಲದಿದ್ದರೆ ಸ್ವಾತಂತ್ರ್ಯದ ಆಶಯಕ್ಕೆ ಧಕ್ಕೆಯಾಗುತ್ತದೆ. ಎಲ್ಲರೂ ಸಮಾನತೆಯಿಂದ ಜೀವನ ನಡೆಸುವುದೇ ಸಂವಿಧಾನದ ಮೂಲ ಆಶಯ. ಆದರೆ, ಬಿಜೆಪಿ ಸಮಾನತೆಯ ಆಶಯಗಳಿಗೆ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ. ಕಾಂಗ್ರೆಸ್ ಕಾರ್ಯಕರ್ತರು ಸಂವಿಧಾನವನ್ನು ಸರಿಯಾಗಿ ಓದಿ, ಅರ್ಥ ಮಾಡಿಕೊಳ್ಳದಿದ್ದರೆ ರಾಜಕೀಯ ಎದುರಾಳಿಗಳನ್ನು ಎದುರಿಸಲು ಸಾಧ್ಯವಾಗುವುದಿಲ್ಲ. ಬಿಜೆಪಿ ಸರ್ಕಾರ ಹೊಗಳುಭಟ್ಟರ ಕೂಟವಾಗಿದೆ. ಈ ಸರ್ಕಾರವನ್ನು ತೊಡೆದು ಹಾಕದೆ ಇದ್ದರೆ ದೇಶಕ್ಕೆ ಭವಿಷ್ಯವಿಲ್ಲ. ಬಿಜೆಪಿ ಸರ್ಕಾರವನ್ನು ತೊಡೆದು ಹಾಕಲು ಕಾಂಗ್ರೆಸ್ ಕಾರ್ಯಕರ್ತರು ಶ್ರಮಿಸಬೇಕು. ಆ ಮೂಲಕ ಮನುವಾದ, ಕೋಮುವಾದವನ್ನು ತೊಡೆದು ಹಾಕಬೇಕು ಎಂದು ಸಲಹೆ ನೀಡಿದರು.

ಮೋದಿಯಂತೆ ನಡು ಬಾಗಿಸಿ ನಮಸ್ಕರಿಸಿದ ಸಿದ್ದರಾಮಯ್ಯ

ಸಭೆಯ ಉದ್ಘಾಟನೆಯ ಸಂದರ್ಭದಲ್ಲಿ ಪಕ್ಷದ ಕಾರ್ಯಕರ್ತರು ಸಿದ್ದರಾಮಯ್ಯ ಅವರಿಗೆ ಜೈಕಾರ ಹಾಕುತ್ತಿದ್ದರು. ಈ ವೇಳೆ ಸಿದ್ದರಾಮಯ್ಯ ಅವರು ನಡು ಬಾಗಿಸಿ ಸಭಿಕರತ್ತ ಕೈ ಮುಗಿದರು. ಈ ವೇಳೆ ಮುಂದೆ ನಿಂತಿದ್ದ ಛಾಯಾಗ್ರಾಹಕರಿಗೆ 'ಪ್ರಧಾನಿ ಮೋದಿ ಹೀಗೆ ಅಲ್ವೇನ್ರೀ ನಮಸ್ಕರಿಸೋದು' ಎಂದು ಮತ್ತೆ ನಡುಬಾಗಿಸಿ ನಮಸ್ಕರಿಸಿದರು. ಮತ್ತೆ ಸಿದ್ದರಾಮಯ್ಯ ಪರ ಜೈಕಾರದ ಘೋಷಣೆ ಮೊಳಗಿತು.

ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ 243ಕ್ಕೆ ಏರಿಕೆ

ಬೆಂಗಳೂರು, ಜೂ.23– ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಾರ್ಡ್‌ಗಳ ಸಂಖ್ಯೆ 243ಕ್ಕೆ ಏರಿಕೆಯಾಗಿದೆ. ಬಿಬಿಎಂಪಿ ಸಲ್ಲಿಸಿದ್ದ ವಾರ್ಡ್ ಮರುವಿಂಗಡಣೆ ಪ್ರಸ್ತಾವನೆಯನ್ನು ಸರ್ಕಾರ ಅಂಗೀಕರಿಸಿದ್ದು, ಅಧಿಸೂಚನೆ ಹೊರಡಿಸಿದೆ. ಈ ಕುರಿತು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಣೆ ಹೊರಡಿಸಿದೆ. ಅಲ್ಲದೆ ಸಾರ್ವಜನಿಕರಿಂದ ಸಲಹೆ, ಆಕ್ಷೇಪಣೆಗಳಿಗೆ ಅವಕಾಶ ನೀಡಲಾಗಿದೆ. ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಲಾಗಿದೆ. ಬಿಬಿಎಂಪಿ ವಾರ್ಡ್‌ಗಳ ಮರುವಿಂಗಡಣೆ ಕುರಿತು 2022ರ ಜೂನ್ 9ರಂದು ವಾರ್ಡ್ ಮರುವಿಂಗಡಣಾ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಇದೀಗ ಸಮಿತಿ ಸಲ್ಲಿಸಿದ್ದ ವರದಿಯನ್ನು ಅನುಮೋದಿಸಿರುವ ಸರ್ಕಾರ ಅಧಿಸೂಚನೆ ಹೊರಡಿಸಿದೆ.

2011 ಜನಗಣತಿಯನ್ನು ಆಧರಿಸಿ ಬೆಂಗಳೂರಿನ ವಾರ್ಡ್‌ಗಳ ಸಂಖ್ಯೆಯನ್ನು 243 ಹೆಚ್ಚಿಸುವಂತೆ ಸಮಿತಿಯು ವರದಿ ಸಲ್ಲಿಸಿತ್ತು. ಬಿಬಿಎಂಪಿಯಲ್ಲಿ ಈವರೆಗೂ 198 ವಾರ್ಡ್‌ಗಳಿದ್ದವು.

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ





ಗೋಧ್ರಾ ಈಗ ಡಿಯರ್ ವಿಕ್ರಮ್

ಟೈಟಲ್ ಮೂಲಕವೇ ಸಾಕಷ್ಟು ಸುದ್ದಿಯಾಗಿದ್ದ ಗೋಧ್ರಾ ಚಿತ್ರದ ಶೀರ್ಷಿಕೆಯೀಗ 'ಡಿಯರ್ ವಿಕ್ರಂ' ಎಂದು ಬದಲಾಗಿದೆ. ಜೊತೆಗೆ ಈ ಚಿತ್ರ ನೇರವಾಗಿ ಓಟಿಟಿ ಪ್ಲಾಟ್ ಫಾರಂ ಮೂಲಕ ಬಿಡುಗಡೆಯಾಗುತ್ತಿದೆ. ವೂಟ್ ಸೆಲೆಕ್ಟ್‌ನಲ್ಲಿ ಜೂನ್ 30ರಿಂದ ವೀಕ್ಷಣೆಗೆ ಲಭ್ಯವಾಗಲಿದೆ.

ಇದು ಕ್ರಾಂತಿಕಾರಿಯೊಬ್ಬನ ಕಥೆಯಾಗಿದ್ದು, ನೀನಾಸಂ ಸತೀಶ್ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸತೀಶ್, ಈ ಕಥೆ ಯಾವುದೇ ಧರ್ಮ, ರಾಜಕೀಯ ಸಿದ್ಧಾಂತಗಳ ಪರ ಅಥವಾ ವಿರುದ್ಧವಿಲ್ಲ, ಜೀವನದಲ್ಲಿ, ನಾನು ಹೋರಾಟ ಮಾಡಿಕೊಂಡು ಬಂದಂತಹ ಸಾಮಾಜಿಕ ಸಮಸ್ಯೆಗಳನ್ನು ದೃಶ್ಯಗಳ ಮೂಲಕ ಹೇಳುವ ಪ್ರಯತ್ನ. ಬಡವರ ಬದುಕು, ಬವಣೆಯ ಕಥೆಯಿದು ಎಂದರು. ನೇರವಾಗಿ ವೂಟ್‌ನಲ್ಲಿ ಬಿಡುಗಡೆಯಾಗುತ್ತಿರುವುದಕ್ಕೆ ಉತ್ತರಿಸಿದ ಅವರು, ನಾನು ಅಭಿನಯಿಸಿರುವ 3 ಚಿತ್ರಗಳು ಬಿಡುಗಡೆಗೆ ರೆಡಿ ಇವೆ. ಚಿತ್ರಮಂದಿರದಲ್ಲಿ ರಿಲೀಸ್ ಮಾಡಬೇಕೆಂದರೆ ಒಂದೊಂದು ಚಿತ್ರಕ್ಕೂ 3 ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಈಗಾಗಲೇ ಕೊರೊನಾದಿಂದ ಬಳಲಿರುವ ನಿರ್ಮಾಪಕರಿಗೆ ತೊಂದರೆಯಾಗುತ್ತದೆ ಎಂದು ಈ ನಿರ್ಧಾರ ತೆಗೆದುಕೊಂಡಿದ್ದೇವೆ. ಸದ್ಯ ಡಿಯರ್ ವಿಕ್ರಂ ಒಳ್ಳೆಯ ಬೆಲೆಗೆ ಮಾರಾಟವಾಗಿ ನಿರ್ಮಾಪಕರು ಸೇಫ್ ಆಗಿದ್ದಾರೆ ಎಂದರು.

ಕಲರ್ಸ್ ವಾಹಿನಿಯ ಪರಮೇಶ್ ಗುಂಡ್ಕಲ್ ಮಾತನಾಡಿ, ನಿರ್ಮಾಪಕ ಮತ್ತು ನಮ್ಮ ಸಂಸ್ಥೆಯ ನಡುವೆ ಒಮ್ಮತದ ಒಡಂಬಡಿಕೆಯ ಮೇಲೆ ಈ ಚಿತ್ರ ಓಟಿಟಿಯಲ್ಲಿ ರಿಲೀಸಾಗುತ್ತಿದೆ. ನಿರ್ಮಾಪಕರಿಗೆ ಅನುಕೂಲವಾಗುವಂತೆ ಉತ್ತಮ ಚಿತ್ರಗಳನ್ನು ನಮ್ಮ ಸಂಸ್ಥೆ ಖರೀದಿಸಲಿದೆ ಜೊತೆಗೆ ವೆಬ್ ಸಿರೀಸ್‌ಗಳನ್ನು ಸಹ ನಿರ್ಮಾಣ ಮಾಡಲಿದ್ದೇವೆ ಎಂದರು.

ಕೆ.ಎಸ್ ನಂದೀಶ್ ಈ ಚಿತ್ರಕ್ಕೆ ಆಕ್ಷನ್-ಕಟ್ ಹೇಳಿದ್ದು, ಕುಕ್ಕೆ ಸುಬ್ರಮಣ್ಯ, ಹಾಸನ, ಭಟ್ಕಳ, ಕರ್ನೂಲ್ ಮಲೇಷಿಯಾದಲ್ಲಿ ಚಿತ್ರೀಕರಣ ಮಾಡಲಾಗಿದೆ ಈ ಚಿತ್ರದ ನಾಯಕಿಯಾಗಿ ಶ್ರದ್ಧಾ ಶ್ರೀನಾಥ್ ಕಾಣಿಸಿಕೊಂಡಿದ್ದಾರೆ. ಇವರೊಂದಿಗೆ ಸೋನು ಗೌಡ, ಅಚ್ಯುತ್ ಕುಮಾರ್, ವಸಿಷ್ಠ ಸಿಂಹ ಮುಂತಾದ ಕಲಾವಿದರು ನಟಿಸಿದ್ದಾರೆ.



ಪತ್ರಕರ್ತನ ಲೇಖನಿಯೇ ದುಷ್ಟರಿಗೆ ಮಾರಕಾಸ್ತ್ರ

ಪತ್ರಕರ್ತನ ಕೈಲಿರುವ ಲೇಖನಿ ಕತ್ತಿಗಿಂತಲೂ ಹರಿತವಾದದ್ದು. ದೇಶದ ರಾಜಕೀಯ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಶಕ್ತಿಯೂ ಸಹ ಈ ಲೇಖನಿಗಿದೆ. ಸಮಾಜದ ವ್ಯವಸ್ಥೆಗೇ ಮಾರಕವಾದಂಥ ದುಷ್ಟಶಕ್ತಿಗಳನ್ನು ನಿಗ್ರಹಿಸುವ ಶಕ್ತಿಯೂ ಪತ್ರಕರ್ತರ ಕೈಲಿರುವ ಲೇಖನಿಗಿದೆ. ಇಂಥದ್ದೇ ಒಂದು ಮಹತ್ತರ ವಿಷಯ ಇಟ್ಟುಕೊಂಡು ನಿರ್ಮಾಣವಾಗಿರುವ ಚಿತ್ರವೇ 'ಮಾರಕಾಸ್ತ್ರ. ದೇಶದ ರಕ್ಷಣೆಗಾಗಿ ಎಂಬ ಅಡಿಬರಹವಿರುವ ಈ ಚಿತ್ರದ ಮೇಕಿಂಗ್ ವೀಡಿಯೋ ಬಿಡುಗಡೆ ಕಾರ್ಯಕ್ರಮ ಕಳೆದ ವಾರ ನಡೆಯಿತು. ಈ ಸಂದರ್ಭದಲ್ಲಿ ಫಿಲಂ ಚೇಂಬರ್ ನೂತನ ಅಧ್ಯಕ್ಷ ಬಾಮಾ ಹರೀಶ್, ಸಿದ್ದರಾಜು ಕೂಡ ಹಾಜರಿದ್ದರು.

ಗುರುಮೂರ್ತಿ ಸುನಾಮಿ ಅವರ ಪ್ರಥಮ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ, ಕೋಮಲ ನಟರಾಜ್ ಅವರು ನಿರ್ಮಿಸುತ್ತಿರುವ 'ಮಾರಕಾಸ್ತ್ರ ಚಿತ್ರದಲ್ಲಿ ನಾಯಕನಾಗಿ ಆನಂದ್ ಆರ್ಯ ನಟಿಸಿದ್ದಾರೆ. ನೋಡಲು ಪುನೀತ್ ರಾಜ್‌ಕುಮಾರ್ ಅವರಂತೆಯೇ ಕಾಣುವ ಆನಂದ್ ಆರ್ಯ ಈ ಹಿಂದೆ 'ಛಾಯಾ' ಹಾರರ್ ಚಿತ್ರದಲ್ಲಿ ನಟಿಸಿದ್ದರು. ನಿರ್ಮಾಪಕ ನಟರಾಜ್ ಮಾತನಾಡಿ, ನಿರ್ದೇಶಕರು ಹೇಳಿದ ಕಥೆಯಲ್ಲಿ ದೇಶರಕ್ಷಣೆಯ ಬಗ್ಗೆ ಹಾಗೂ ದೇಶಭಕ್ತಿ ಮೂಡಿಸುವಂಥ ಹಲವಾರು ಅಂಶಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿದರು.


ಕೆಜಿಎಫ್ ಬೆಡಗಿ ಮೌನಿ ರಾಯ್

ಟ್ರೈಲರ್‌ನಲ್ಲಿ ಚಿತ್ತಾಕರ್ಷಕ ತಾರಾಮೇಳ !


ಕನ್ನಡದಲ್ಲಿ ಭಾರೀ ನಿರೀಕ್ಷೆ ಹುಟ್ಟು ಹಾಕಿರುವ, ಕಿಚ್ಚ ಸುದೀಪ್ ಅಭಿನಯದ ವಿಕ್ರಾಂತ್ ರೋಣ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು. ಚಿತ್ರದ ಬಿಡುಗಡೆ ದಿನಾಂಕವೂ ಈಗಾಗಲೇ ನಿಗದಿಯಾಗಿದೆ, ಈಗ ಟ್ರೈಲರ್ ಕೂಡ ಹೊರಬಂದಿದೆ. ಈ ವೇದಿಕೆಯಲ್ಲಿ ತಾರಾಮೇಳವೇ ನೆರೆದಿತ್ತು. ಇಲ್ಲಿ ರವಿಚಂದ್ರನ್, ಶಿವರಾಜ್‌ಕುಮಾರ್, ರಮೇಶ್ ಅರವಿಂದ್, ಧನಂಜಯ, ರಕ್ಷಿತ್ ಶೆಟ್ಟಿ, ರಿಷಭ್ ಶೆಟ್ಟಿ, ರಾಜ್ ಶೆಟ್ಟಿ, ಸೃಜನ್, ಇಂದ್ರಜಿತ್ ಲಂಕೇಶ್ ಮುಖ್ಯ ಅತಿಥಿಗಳಾಗಿದ್ದರು. ಶಾಲಿನಿ ಎಂಟರ್‌ಪ್ರೈಸಸ್, ಕಿಚ್ಚ ಕ್ರಿಯೇಶನ್ಸ್ ಹಾಗೂ ಸಲ್ಮಾನ್ ಖಾನ್ ಪ್ರೊಡಕ್ಷನ್ ಸಹಯೋಗದೊಂದಿಗೆ ತ್ರಿಡಿಯಲ್ಲಿ ನಿರ್ಮಾಣವಾದ ಚಿತ್ರವಿದು. ನಿರ್ಮಾಪಕ ಜಾಕ್‌ಮಂಜು ಮಾತನಾಡಿ, ಹೆಚ್ಚು-ಕಮ್ಮಿ ನಾಲ್ಕು ವರ್ಷ ವಿಕ್ರಾಂತ್‌ರೋಣ ಚಿತ್ರವನ್ನು ಬಿಟ್ಟು ಬೇರೇನನ್ನೂ ಯೋಚಿಸದ ನಿರ್ದೇಶಕ ಅನೂಪ್ ಭಂಡಾರಿ, ಚಿತ್ರಕ್ಕೆ ವೈಭವೋಪೇತ ಲುಕ್ ಕೊಟ್ಟಿರುವ ಕಲಾನಿರ್ದೇಶಕ ಶಿವಕುಮಾರ್, ಅದನ್ನು ಶ್ರೀಮಂತಗೊಳಿಸಿದ ಕ್ಯಾಮರಾಮನ್ ವಿಲಿಯಮ್ಸ್, ಹಾಡಿಗಾಗಿ ಜತೆಗೂಡಿದ ಜಾಕ್ವಲಿನ್ ಫರ್ನಾಂಡೀಸ್, ಇಡೀ ಚಿತ್ರನಿರ್ಮಾಣಕ್ಕೆ ಬಲ ತುಂಬಿದ ಸುದೀಪ್‌ರ ಪತ್ನಿ ಪ್ರಿಯಾ ಅವರನ್ನು ನೆನೆದರು. ನಾನು ಅನೂಪ್ ಸೇರಿ ಈ ಕಥೆಯನ್ನು ಸುದೀಪ್ ಅವರ ಬಳಿ ಚರ್ಚಿಸಿದಾಗ ಇದನ್ನು ಬೇರೆ ಲೆವೆಲ್‌ಗೆ ತಗೊಂಡು ಹೋಗೋಣ ಅಂದರು. ಆ ಬೇರೆ ಲೆವೆಲ್ ಏನೆಂದು ಇವತ್ತು ನನಗೆ ಗೊತ್ತಾಯ್ತು. ಎಲ್ಲರೂ ಮನೆಯಿಂದ ಹೊರಬರಲು ಭಯಪಡುವಂಥ ಕೋವಿಡ್ ಸಮಯದಲ್ಲಿ ನಮ್ಮ ತಂಡದವರೆಲ್ಲ ಜೊತೆ ಸೇರಿ ಕೆಲಸ ಮಾಡಿದ್ದಾರೆ. ಜಾಕ್ವಲಿನ್ ಅವರು ಹಾಡು ಮಾತ್ರವಲ್ಲದೆ ಸೀನ್‌ನಲ್ಲೂ ಕಾಣಿಸಿಕೊಂಡಿದ್ದಾರೆ. ಕನ್ನಡ ಬರದಿದ್ರೂ ಅರ್ಥಮಾಡಿಕೊಂಡು ಅಭಿನಯಿಸಿದ್ದಾರೆ. ಅಲ್ಲದೆ ಅವರು ಒಂದು ಸೀನ್ ಕೂಡ ರೀಟೇಕ್ ಮಾಡಿಲ್ಲ ಎಂದು ಹೊಗಳಿದರು.

ನಾಯಕ ಸುದೀಪ್ ಮಾತನಾಡಿ ರವಿಚಂದ್ರನ್, ಶಿವಣ್ಣ, ರಕ್ಷಿತ್ ಶೆಟ್ಟಿ ರಮೇಶ್ ಅರವಿಂದ್, ರಿಶಬ್ ಶೆಟ್ಟಿ ಇವರೆಲ್ಲ ನನ್ನ ಮೇಲಿಟ್ಟಿರುವ ಸ್ನೇಹಕ್ಕೆ ಬೆಲೆ ಕೊಟ್ಟು ಹರಸಲು ಬಂದಿದ್ದಾರೆ. ರವಿಚಂದ್ರನ್ ಅವರು ಹೇಳಿದ ಮಾತನ್ನು ಫುಲ್‌ಫಿಲ್ ಮಾಡುತ್ತೇನೋ ಗೊತ್ತಿಲ್ಲ. ಆದರೆ ಅವರು ಅದನ್ನು ಕನೆಕ್ಟ್ ಮಾಡಿದ ರೀತಿ ಮನ ಮುಟ್ಟುವಂತಿತ್ತು. ನನ್ನ ಸಿನಿಮಾ ಬಗ್ಗೆ ಯಾವಾಗಲೂ ಒಬ್ಬರು ಜಡ್ಜ್ ಮಾಡುತ್ತಾರೆ. ಅವರ ಬಳಿ ಒಂದು ಕಥೆ ತೆಗೆದುಕೊಂಡು ಹೋದಾಗ, ಅವರು ಇನ್ನೊಂದು ಕಥೆಯಿದೆ ಕೇಳಿ ಅಂದರು. ನಾನು ಕೇಳ್ತೇನೆ ಅಂತಲೇ ಒಂದು ವಾರ ಕಾಯಿಸಿದೆ, ಇವತ್ತು ಈ ಸಿನಿಮಾ ಆಗಲು ಒಂದು ರೀತಿ ಪ್ರಿಯಾ ಅವರೇ ಕಾರಣ, ಇಂಥ ಸಿನಿಮಾ ಮಾಡು ಅಂತ ನನ್ನನ್ನು ಪ್ರೇರೇಪಿಸಿದ ನನ್ನ ಪತ್ನಿ ಪ್ರಿಯಾಗೆ ಧನ್ಯವಾದ ಹೇಳಲೇಬೇಕು. ಅನ್ನ ಬೆಂದಿದೆಯಾ ಅಂತ ನೋಡಲು ಒಂದಗುಳು ಪರೀಕ್ಷಿಸಿದರೆ ಸಾಕು, ಅನೂಪ್ ಕೆಲಸ ಏನೆಂದು ಈ ಟ್ರೈಲರೇ ಹೇಳುತ್ತದೆ. ಒಬ್ಬ ಡೈರೆಕ್ಟರ್ ಕನಸು ಕಾಣುವುದು ದೊಡ್ಡದಲ್ಲ, ನಿರ್ಮಾಪಕ ಕನಸು ಕಾಣೋದು ದೊಡ್ಡದಲ್ಲ. ಆದರೆ ಅವರ ಕನಸಿಗೆ ತಕ್ಕಂತೆ ಸೆಟ್ ಹಾಕುವ ಮೂಲಕ ಕಲಾನಿರ್ದೇಶಕ ಶಿವಕುಮಾರ್ ಅದನ್ನು ಸಾಕಾರಗೊಳಿಸಿದ್ದಾರೆ. ಮತ್ತೊಂದು ಚಿತ್ರದ ಛಾಯಾಗ್ರಹಣ, ವಿಲಿಯಂ ಡೇವಿಡ್ ಕನಸಿನ ಕಥೆಗೆ ಜೀವ ತುಂಬಿದ್ದಾರೆ. ಜಾಕ್ ಮಂಜು ನನ್ನ ಬಾಲ್ಯದ ಗೆಳೆಯ, ಅವರಿಲ್ಲದೆ ಈ ಸಿನಿಮಾ ಸಾಧ್ಯವಿರಲಿ. ಎಂದು ಚಿತ್ರಕ್ಕೆ ಸಹಕರಿಸಿದ ಪ್ರತಿಯೊಬ್ಬರಿಗೂ ಧನ್ಯವಾದ ಹೇಳಿದರು. ಕಾರ್ಯಕ್ರಮದ ಕೊನೆಯಲ್ಲಿ ಎಕ್ಕಸಕ್ಕ ಹಾಡಿಗೆ ವೇದಿಕೆ ಮೇಲಿದ್ದವರೆಲ್ಲ ಹೆಜ್ಜೆ ಹಾಕಿದ್ದು ಮತ್ತೊಂದು ವಿಶೇಷವಾಗಿತ್ತು.



ಸಿನಿಪದಬಂಧ-013

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ____________________

ವಿಳಾಸ ____________________

ದೂರವಾಣಿ ಸಂಖ್ಯೆ ____________________

ಎಡದಿಂದ ಬಲಕ್ಕೆ

1. ಹುಣಸೂರು ಕೃಷ್ಣಮೂರ್ತಿ ನಿರ್ದೇಶನ ಡಾ. ರಾಜ್ – ಭಾರತಿ ಚಿತ್ರ (7)
4. ದರ್ಶನ್ – ಭಾವನಾ – ದೀಪಿಕಾ ಕಾಮಯ್ಯ ನಟಿಸಿದ ಚಿತ್ರ (3)
6. ಸಿಂಗ ಚಿತ್ರದ ನಾಯಕ ನಟ (4)
7. ಉಪೇಂದ್ರ – ಜೆನಿಫರ್ ಕೊತ್ವಾಲ್ ನಟನೆಯ ಚಿತ್ರ (2)
8. ನಾಗಶೇಖರ್ ನಿರ್ದೇಶನದಲ್ಲಿ 2008ರ ಗಣೇಶ್ ಚಿತ್ರ (4)
12. ಆದರ್ಶ್ – ಸುನೈನಾ ಅಭಿನಯದ ಹಾಸ್ಯಪ್ರಧಾನ ಚಿತ್ರ (4)
14. 1968ರ ಬಿ. ಆರ್. ಪಂತುಲು ನಿರ್ದೇಶನದ ರಾಜ್ – ಭಾರತಿ ಚಿತ್ರ (2)
16. 2014ರ ತಿಲಕ್ ಶೇಖರ್ – ಜಾಕಿಶ್ರಾಫ್ ನಟನೆಯ ಚಿತ್ರ (4)
17. ಲೀಲಾವತಿ – ವಿನೋದ್ ರಾಜ್ – ಅಶ್ವಿನಿ ಅಭಿನಯದ 2009ರ ಚಿತ್ರ (3)
18. ದೊರೆ ಭಗವಾನ್ ನಿರ್ದೇಶನದಲ್ಲಿ ಅನಂತ್ ನಾಗ್-ಲಕ್ಷ್ಮಿ ಚಿತ್ರ (7)

ಮೇಲಿನಿಂದ ಕೆಳಕ್ಕೆ

1. ಶಿವರಾಜ್ ಕುಮಾರ್ – ಶಿಲ್ಪಾ ಅಭಿನಯದ ಪ್ರಸಿದ್ಧ ಚಿತ್ರ (6)
2. ಪ್ರಜ್ವಲ್ ದೇವರಾಜ್ – ಐಂದ್ರಿತಾ ರೇ ಚಿತ್ರ (5)
3. 2013ರಲ್ಲಿ ತೆರೆಕಂಡ ಡಾರ್ಲಿಂಗ್ ಕೃಷ್ಣ ಅಭಿನಯದ ಚಿತ್ರ (4)
5. ರಾಮ್ ಕುಮಾರ್ – ಪ್ರೇಮಾ ಅಭಿನಯದ 2000ರ ಚಿತ್ರ (5)
9. ಲವ್ ಯು – – (2)
10. ರವಿಚಂದ್ರನ್ – ರಮ್ಯಕೃಷ್ಣ – ರಾಶಿ ಅಭಿನಯದ ಚಿತ್ರ (2)
11. ಜಗ್ಗೇಶ್ – ಚಾರುಲತಾ – ಪವಿತ್ರಾ ಲೋಕೇಶ್ ಚಿತ್ರ (6)
12. _ _ _ _ _ ಆನಂದ ಸಾಗರ (5)
13. ರಾಜ್ – ಪಂಡರಿಬಾಯಿ ಅಭಿನಯದ 1956ರ ಭಕ್ತಿ ಪ್ರಧಾನ ಚಿತ್ರ (5)
15. 1963ರಲ್ಲಿ ಜಯಂತಿ ಅಭಿನಯಿಸಿದ ಮೊದಲ ಕನ್ನಡ ಚಿತ್ರ (4)

ಸಿನಿ ಪದಬಂಧ 012ರ ಸರಿ ಉತ್ತರ

ದೇ	ವ	ರ	ಮ	ಗ		ಮ	ಹಾ	ರಾ	ಜ	
ವ		ಹ		ಣೇ		ಹಾ		ಜ		ಅಂ
ತೆ		ಸ್ಯ		ಶ		ಕ್ಷ		ಕು	ಟುಂ	ಬ
						ತ್ರಿ		ಮಾ		ರೀ
ಪ್ರೀ	ತಿ	ಪ್ರೇ	ಮ	ಪ್ರ	ಣ	ಯ		ರಿ		ಶ
			ಠ				ಮೈ			
ಪ್ರಾ		ಪ್ರೇ		ಅ	ರಿ	ಶಿ	ನ	ಕುಂ	ಕು	ಮ
ಣ		ಮ		ಗ್ನಿ						
ಸ	ರಿ	ತ		ಪಂ		ಮಿ		ಸ		ಅ
ಖಿ		ರಂ		ಜ		ಥು		ರ್ದಾ		ಗ್ರ
	ಮೃ	ಗ	ಶಿ	ರ		ನ	ಮ್ಯೂ	ರ	ರಾ	ಜ

ವಿಜೇತರು: ಬಿ.ಕೆ.ಶ್ರೀಕಾಂತ್
ಪಿ.ಓ.ರಸ್ತೆ, ಬೆಟ್ಟದಪುರ
ಪಿರಿಯಾಪಟ್ಟಣ ತಾ, ಮೈಸೂರು ಜಿಲ್ಲೆ

ವೀರಕಂಬಳದಲ್ಲಿ ಪ್ರಕಾಶ್ ರೈ–ರವಿಶಂಕರ್ ಜುಗಲ್ ಬಂದಿ




ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ ವೀರ ಕಂಬಳ ಚಿತ್ರದಲ್ಲಿ ಕಂಬಳದ ಪರ ವಕೀಲರಾಗಿ ಪ್ರಕಾಶ್ ರೈ ಹಾಗೂ ಪ್ರತಿವಾದಿಯಾಗಿ ರವಿಶಂಕರ್ ಅಭಿನಯಿಸಿದ್ದಾರೆ. ಈ ಕೋರ್ಟ್ ಸನ್ನಿವೇಶದ ಚಿತ್ರೀಕರಣ ಇತ್ತೀಚೆಗೆ ಕಂಠೀರವ ಸ್ಟುಡಿಯೋದಲ್ಲಿ ಹಾಕಿದ ಸೆಟ್‌ನಲ್ಲಿ ನಡೆಯಿತು.

ಈ ಸಂದರ್ಭದ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿಂಗ್ ಬಾಬು, ಕೋರ್ಟಿನಲ್ಲಿ ನಡೆಯುವ ಈ ವಾದ ಪ್ರತಿವಾದಗಳನ್ನು ಯಾವ ರೀತಿ ತೆರೆಮೇಲೆ ತರಬೇಕು ಎಂಬುದು ದೊಡ್ಡ ಸವಾಲಿನ ಕೆಲಸವಾಗಿತ್ತು. ತುಂಬಾ ಜನರ ಸಲಹೆ ಪಡೆದೆ. ಕಳೆದ 9 ತಿಂಗಳಿನಿಂದ ಇದೊಂದು ಸೀನ್ ಮೇಲೆ ನಾನು ಮತ್ತು ಕಥೆಗಾರ ವಿಜಯ್‌ಕುಮಾರ್ ಕೆಲಸ ಮಾಡುತ್ತಿದ್ದೇವೆ. ಅದೇ ಕಾರಣಕ್ಕೆ ಚಿತ್ರೀಕರಣವನ್ನು ಕೊನೆಯಲ್ಲಿ ಇಟ್ಟುಕೊಂಡೆವು. ಇದನ್ನು ಹೇಗೆ ಹೇಳಬೇಕು ಎಂದು ಯೋಚಿಸಿ, ಈಗ ಶೂಟ್ ಮಾಡುತ್ತಿದ್ದೇವೆ. ನಾವೇನೇ ಬರೆದಿಟ್ಟುಕೊಂಡರೂ ಪ್ರಕಾಶ್ ರೈ ಮತ್ತು ರವಿಶಂಕರ್ ಅವರ ಅಭಿನಯ, ದೃಶ್ಯದ ಮೌಲ್ಯ ಹೆಚ್ಚಿಸಿದೆ. ಇಬ್ಬರೂ ಅಪ್ಪಟ ಪ್ರತಿಭಾವಂತರು. ಪ್ರಕಾಶ್ ರೈ ಹಿಂದೆ "ಮುತ್ತಿನ ಹಾರ" ಚಿತ್ರದಲ್ಲಿ ನಟಿಸಿದ್ದರು. ಹೈದರಾಬಾದ್‌ನಿಂದ ನೇರವಾಗಿ ಚಿತ್ರೀಕರಣಕ್ಕೆ ಬಂದರು. ರವಿಶಂಕರ್ ಬಹಳ ಒಳ್ಳೆಯ ಪಾತ್ರಗಳನ್ನು ಮಾಡುತ್ತಿದ್ದಾರೆ. ಇಲ್ಲೂ ಒಂದೊಳ್ಳೆಯ ಪಾತ್ರವಿದೆ.10–15 ಕಂಬಳಗಳಿಗೆ ಹೋಗಿ, ಅಲ್ಲಿಯ ತಜ್ಞರು, ಮಾಲೀಕರು ಮತ್ತು ಜಾಕಿಗಳನ್ನು ಮಾತಾಡಿಸಿದ್ದೇವೆ. ಚಿತ್ರದಲ್ಲಿ ಕಂಬಳ ಓಡಿಸುವವರೇ ಹೀರೋ. ಅದರಲ್ಲಿ ಪಳಗಿತರಾದ ಶ್ರೀನಿವಾಸ್ ಗೌಡ ಅವರನ್ನು ಆಯ್ಕೆ ಮಾಡಿದೆವು. 800 ವರ್ಷಗಳ ಕ್ರೀಡೆ. ಪ್ರತಿಯೊಂದನ್ನೂ ಗಮನಿಸಿ, ಯಾವುದೇ ಚ್ಯುತಿ ಬರದಂತೆ ಮಾಡಿದ್ದೇವೆ. ಎಲ್ಲ ನೈಜ. ಯಾವುದು ಕೃತಕವಲ್ಲ. ಅದನ್ನು ನಮ್ಮ ಕಥೆಗೆ ಪೂರಕವಾಗಿ ಬಳಸಿಕೊಂಡಿದ್ದೇವೆ ಎಂದರು.

ರವಿಶಂಕರ್ ಮಾತನಾಡಿ, ನಾನು ಈ ಚಿತ್ರದಲ್ಲಿ ಖಳನಾಯಕ, ತುಳು ಭಾಷೆಯಲ್ಲಿ ನಟಿಸುವ ಆಸೆಯಿತ್ತು. ಅಲ್ಲದೆ ನಾನು ರಾಜೇಂದ್ರಸಿಂಗ್ ಬಾಬು ಅವರ "ಬಂಧನ", "ಮುತ್ತಿನ ಹಾರ" ಚಿತ್ರಗಳನ್ನು ಸಾಕಷ್ಟು ಸಲ ನೋಡಿದ್ದೀನಿ ಮತ್ತು ಶ್ರೇಷ್ಠ ನಟ ಪ್ರಕಾಶ್ ರೈ ಅವರೊಂದಿಗೆ ನಟಿಸುವ ಅವಕಾಶ ಸಿಕ್ಕಿರುವುದು ಈ ಎಲ್ಲಾ ಕಾರಣಕ್ಕೆ "ವೀರ ಕಂಬಳ" ನನಗೆ ವಿಶೇಷವೆಂದರು.

ಜೀವನವೇ ಒಂದು ರಂಗಿನ ರಾಟೆ



ಪ್ರತಿಯೊಬ್ಬರ ಜೀವನವೂ ರಾಟೆಯಂತೆ ಮೇಲಿಂದ ಕೆಳಗೆ, ಕೆಳಗಿಂದ ಮೇಲೆ ಸುತ್ತುತ್ತಲೇ ಇರುತ್ತದೆ ಎಂಬ ಸೂತ್ರದ ಮೇಲೆ ನಿರ್ಮಾಣವಾಗಿರುವ ಚಿತ್ರ 'ರಂಗಿನ ರಾಟೆ'. ಆರ್ಮುಗಂ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದ ಫಸ್ಟ್‌ಲುಕ್ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಕವಿತಾ ಅರುಣಕುಮಾರ್ ಚಿತ್ರದ ನಿರ್ಮಾಪಕಿ.

ನಿರ್ದೇಶಕ ಆರ್ಮುಗಂ ಮಾತನಾಡುತ್ತ, ಬಹಳ ದಿನಗಳ ನಂತರ ನನ್ನ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಮೊದಲ ಚಿತ್ರವಿದು. ಎಲ್ಲರ ಜೀವನವೇ ಒಂದು ಸುತ್ತಾಟ. ರಾಟೆ ತಿರುಗಿದ ಹಾಗೆ. ನಮ್ಮ ಕಥೆಗೆ ಈ ಶೀರ್ಷಿಕೆ ತುಂಬಾ ಹತ್ತಿರವಾಗಿದೆ. ಈಗಾಗಲೇ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ಮಾಡಿದ್ದೇವೆ. ರಾಜೀವ್ ರಾಥೋಡ್, ಯುವನಟಿ ಭವ್ಯ ಚಿತ್ರದ ನಾಯಕ, ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ದುನಿಯಾ ರಶ್ಮಿ ಹಾಗೂ ಸಂತೋಷ್ ಈ ನಾಲ್ಕು ಪಾತ್ರಗಳ ಸುತ್ತ ಚಿತ್ರದ ಕಥೆ ಸಾಗುತ್ತದೆ. ಸಂತೋಷ್ ಮಳವಳ್ಳಿ ಅವರ ಮೂಲಕ ನಿರ್ಮಾಪಕಿ ಕವಿತಾ ಅರುಣ್ ಕುಮಾರ್ ಅವರ ಪರಿಚಯವಾಯಿತು. ಕಥೆ ಕೇಳಿ ಇಷ್ಟಪಟ್ಟು ಚಿತ್ರ ನಿರ್ಮಾಣಕ್ಕೆ ಮುಂದಾದರು. ಸದ್ಯದಲ್ಲೇ ಚಿತ್ರದ ಮಾತಿನ ಜೋಡಣೆ ಆರಂಭವಾಗಲಿದೆ ಎಂದು ಮಾಹಿತಿ ನೀಡಿದರು.

ರಾಜೀವ್ ರಾಥೋಡ್ ಮಾತನಾಡುತ್ತ, 'ಯುವರಾಜ' ಚಿತ್ರದಿಂದ ನನ್ನ ಸಿನಿಜರ್ನಿ ಆರಂಭವಾಗಿದೆ. ಕನ್ನಡದ ಸಾಕಷ್ಟು ಚಿತ್ರಗಳಲ್ಲಿ ಅಭಿನಯಿಸಿದ್ದೇನೆ. ನಾಯಕನಾಗಿ ಇದು ಮೂರನೇ ಚಿತ್ರ. ನಿರ್ದೇಶಕರು ಕಥೆ ಹೇಳಿದ ಕೂಡಲೇ ಪಾತ್ರ ಇಷ್ಟವಾಗಿ ನಟಿಸಲು ಒಪ್ಪಿದೆ. ಒಂದು ಅನಿರೀಕ್ಷಿತ ಘಟನೆಯಲ್ಲಿ ಸಿಕ್ಕಿಹಾಕಿಕೊಂಡ ನಾನು ನಂತರ ಅದರಿಂದ ಹೇಗೆ ಪಾರಾಗಿ ಬರುತ್ತೇನೆ ಎಂಬುದನ್ನು ಈ ಸಿನಿಮಾದಲ್ಲಿ ಕುತೂಹಲಕರವಾಗಿ ಹೇಳಿದ್ದಾರೆ ಎಂದರು. ನನಗೆ ಸಿನಿಮಾ ಮಾಡಲು ಇಷ್ಟವಿರಲಿಲ್ಲ. ಸಂತೋಷ್ ಬಂದು ನಿರ್ದೇಶಕರನ್ನು ಪರಿಚಯಿಸಿದರು. ಕಥೆ ಕೇಳಿ ನಿರ್ಮಾಣಕ್ಕೆ ಮುಂದಾದೆ. ಮೊದಲ ಪ್ರಯತ್ನವಿದು ಎಂದು ನಿರ್ಮಾಪಕಿ ಕವಿತಾ ಅರುಣ್‌ಕುಮಾರ್ ಹೇಳಿದರು.

ಚಿತ್ರದ ನಾಯಕಿ ಭವ್ಯ ಮಾತನಾಡುತ್ತ ನನ್ನ ಮೊದಲ ಚಿತ್ರವಿದು. ಸಿನಿಮಾದಲ್ಲಿ ನಟಿಸುವ ಆಸೆ ಮೊದಲಿಂದಲೂ ಇತ್ತು. ಈ ಚಿತ್ರದಲ್ಲಿ ಕಥೆಯೇ ನಾಯಕ, ನಾಯಕಿ. ನಾವೆಲ್ಲ ಪಾತ್ರಧಾರಿಗಳು ಎಂದರು. ಚಿತ್ರಕ್ಕೆ ಹಾಡು ಬರೆದು ನಟನೆ ಮಾಡಿರುವ ಸಂತೋಷ್ ಮಳವಳ್ಳಿ, ಸಂಗೀತ ನಿರ್ದೇಶಕ ಚಂದ್ರು ಒಬ್ಬಯ್ಯ, ಛಾಯಾಗ್ರಾಹಕ ರವಿಸುವರ್ಣ ಹಾಗೂ ಸಂಕಲನಕಾರ ದಾಮೋದರ ನಾಯ್ಡು ಇವರೆಲ್ಲ ಚಿತ್ರದ ವಿಶೇಷತೆಗಳ ಕುರಿತಂತೆ ಮಾತನಾಡಿದರು.

ಇಂದು ಆರ್‌ಎಪಿಸಿಎಂಎಸ್ ಚುನಾವಣೆ ಫಲಿತಾಂಶ ಪ್ರಕಟ

● 2 ತಿಂಗಳ ಹಿಂದೆ ನಡೆದಿದ್ದ ಚುನಾವಣೆ ● ಹೈಕೋರ್ಟ್ ತಡೆಯಾಜ್ಞೆಯಿಂದ ಮತ ಎಣಿಕೆ ಸ್ಥಗಿತ

ಎಂ.ಕೆ.ಮೋಹನ್‌ರಾಜ್

ಮಂಡ್ಯ, ಜೂ.23– ಕಳೆದ 2 ತಿಂಗಳ ಹಿಂದೆ ನಡೆದಿದ್ದ ಮಂಡ್ಯ ಜಿಲ್ಲೆಯ ಪ್ರತಿಷ್ಠಿತ ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ನಿರ್ದೇಶಕರ ಸ್ಥಾನದ ಚುನಾವಣೆ ಮತ ಎಣಿಕೆಗೆ ಹೈಕೋರ್ಟ್ ಗ್ರೀನ್ ಸಿಗ್ನಲ್ ನೀಡಿದ್ದು, ನಾಳೆ (ಶುಕ್ರವಾರ) ಮತ ಎಣಿಕೆ ನಡೆಯಲಿದ್ದು, ಫಲಿತಾಂಶ ಹೊರ ಬೀಳಲಿದೆ.

ಏ.23ರಂದು ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಕ್ಕೆ ಮತದಾನ ನಡೆದಿತ್ತು. ಕೆಲವು ಸದಸ್ಯರಿಗೆ ಮತದಾನದ ಹಕ್ಕು ನೀಡದ ಪರಿಣಾಮ ಚುನಾವಣೆ ಹಾಗೂ ಮತ ಎಣಿಕೆ ನಡೆಸದಂತೆ ತಡೆಯಾಜ್ಞೆ ನೀಡುವಂತೆ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಅದರಂತೆ ಹೈಕೋರ್ಟ್ ಮತದಾನ ನಡೆಸಿ ಎಣಿಕೆ ಮಾಡದಂತೆ ತಡೆಯಾಜ್ಞೆ ನೀಡಿತ್ತು. ಇದೀಗ 2 ತಿಂಗಳ ಕಾಲ ಸುದೀರ್ಘ ವಿಚಾರಣೆ ನಂತರ ಮತ ಎಣಿಕೆಗೆ ಹೈಕೋರ್ಟ್ ಆದೇಶ ಹೊರಡಿಸಿದೆ.

ಮಂಡ್ಯ ತಾಲೂಕು ಫ್ಯಾಕ್ಸ್‌ನ 'ಎ' ತರಗತಿಯ ಸೊಸೈಟಿಗಳ ಕ್ಷೇತ್ರದಿಂದ 9 ಮಂದಿ ಹಾಗೂ ರೈತರು/ಕೃಷಿ ಕ್ಷೇತ್ರ 'ಬಿ' ತರಗತಿಯಿಂದ 21 ಮಂದಿ ಕಣದಲ್ಲಿದ್ದಾರೆ. 'ಎ' ತರಗತಿಯ ಸೊಸೈಟಿ ಕ್ಷೇತ್ರದಿಂದ 4 ಮಂದಿ ಹಾಗೂ ರೈತರು/ಕೃಷಿ ಕ್ಷೇತ್ರ 'ಬಿ' ತರಗತಿಯಿಂದ 8 ಮಂದಿ ಸೇರಿದಂತೆ ಒಟ್ಟು 12 ಮಂದಿ ನಿರ್ದೇಶಕ ಸ್ಥಾನಗಳ ಪೈಕಿ 11 ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಆದರೆ ಎಸ್‌ಟಿ ಮೀಸಲಾತಿಯಿಂದ ಯಾರೂ ಸ್ಪರ್ಧಿಸದ ಕಾರಣ ಒಂದು ಸ್ಥಾನ ಖಾಲಿ ಉಳಿದಿದೆ. ಸೊಸೈಟಿ ಕ್ಷೇತ್ರದ 42 ಮಂದಿ, 'ಬಿ' ತರಗತಿಯಿಂದ 1179 ಮಂದಿ ಮತದಾನ ಹಕ್ಕು ಹೊಂದಿದ್ದರು. ಇದರ ಜೊತೆಗೆ ಸುಪ್ರೀಂಕೋರ್ಟ್ 469 ಮಂದಿಗೆ ಮತದಾನಕ್ಕೆ ಅವಕಾಶ ನೀಡಿತ್ತು. ಅದರಂತೆ 1533 ಮಂದಿ ಮತದಾನ ಮಾಡಿದ್ದರು.

ಜಿಲ್ಲಾ ಖಜಾನೆಯಲ್ಲಿರುವ ಮತಪೆಟ್ಟಿಗೆಗಳು: ಚುನಾವಣೆಯ ಮತ ಎಣಿಕೆ ಹಾಗೂ ಫಲಿತಾಂಶ ಪ್ರಕಟಿಸದಂತೆ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದರಿಂದ ಮತದಾನ ನಡೆದ ಬಳಿಕ ಚುನಾವಣಾಧಿಕಾರಿಗಳು ಮತಪೆಟ್ಟಿಗೆಗಳನ್ನು ಅಭ್ಯರ್ಥಿಗಳ ಸಮ್ಮುಖದಲ್ಲಿ ಸೀಲ್ ಮಾಡಿ ಜಿಲ್ಲಾ ಖಜಾನೆಯಲ್ಲಿ ಇರಿಸಿದ್ದರು. ಇದೀಗ ಮತಎಣಿಕೆಗೆ ಇದ್ದ ತಡೆಯಾಜ್ಞೆ ತೆರವುಗೊಂಡಿದ್ದರಿಂದ ಜೂ.24ರಂದು ಬೆಳಗ್ಗೆ 10 ಗಂಟೆಯಿಂದ ಆರ್‌ಎಪಿಸಿಎಂಎಸ್ ಸಭಾಂಗಣದಲ್ಲಿ ಮತ ಎಣಿಕೆ ನಡೆಯಲಿದೆ.



ಸಾಂಪ್ರದಾಯಿಕ ಎದುರಾಳಿಗಳ ನಡುವೆ ಜಿದ್ದಾಜಿದ್ದಿ: ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ತೀವ್ರ ಜಿದ್ದಾಜಿದ್ದಿನ ಹೋರಾಟ ನಡೆದಿತ್ತು. ಕಾಂಗ್ರೆಸ್ ಆಡಳಿತ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ, ಜೆಡಿಎಸ್ ಅಧಿಕಾರದ ಗದ್ದುಗೆ ಹಿಡಿಯಲು ಇನ್ನಿಲ್ಲದ ಕಸರತ್ತು ನಡೆಸಿತ್ತು. ಕಾಂಗ್ರೆಸ್ ಹಾಗೂ ಜೆಡಿಎಸ್‌ನಿಂದ ಬೆಂಬಲಿತ ಎ ತರಗತಿಯಿಂದ ತಲಾ 4 ಮಂದಿ ಹಾಗೂ ಬಿ ತರಗತಿಯಿಂದ ತಲಾ ಏಳು ಮಂದಿ ಕಣದಲ್ಲಿದ್ದಾರೆ. ಉಳಿದಂತೆ ಪಕ್ಷೇತರ ಅಭ್ಯರ್ಥಿಗಳು ತಮ್ಮ ಅದೃಷ್ಟ ಪರೀಕ್ಷೆಗಿಳಿದಿದ್ದರು. ಜೂ.24ರಂದು ಅಭ್ಯರ್ಥಿಗಳ ಹಣೆಬರಹ ಹೊರ ಬೀಳಲಿದೆ.

ಹೈಕೋರ್ಟ್ ಮೆಟ್ಟಿಲೇರಿದ್ದ ಸದಸ್ಯರು

ನಿತ್ಯ ಸಚಿವ ಕೆ.ವಿ.ಶಂಕರಗೌಡ ಅವರಿಂದ ಸ್ಥಾಪಿತರಾಗಿರುವ ಇಡೀ ಏಷ್ಯಾದಲ್ಲಿಯೇ ಉತ್ತಮ ಸಹಕಾರ ಸಂಘ ಎಂಬ ಹೆಗ್ಗಳಿಕೆ ಪಡೆದಿರುವ ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದಲ್ಲಿ ಮತದಾನ ಹಕ್ಕು ಪಡೆಯುವ ಹಿನ್ನೆಲೆಯಲ್ಲಿ ಗೊಂದಲ ಉಂಟಾಗಿದ್ದರಿಂದ ಕೆಲವು ಸದಸ್ಯರು ಹೈಕೋರ್ಟ್ ಮೆಟ್ಟಿಲೇರಿದ್ದರು. ಇದರಿಂದ ಹೈಕೋರ್ಟ್ ತಡೆಯಾಜ್ಞೆ ನೀಡಿತ್ತು.

6315 ಮಂದಿ ಸದಸ್ಯರು: ಆರ್‌ಎಪಿಸಿಎಂಎಸ್‌ನಲ್ಲಿ ಒಟ್ಟು 6315 ಮಂದಿ ಸದಸ್ಯರಿದ್ದಾರೆ. ಇದರಲ್ಲಿ 923 ಸುಸ್ತಿದಾರರರಾಗಿದ್ದಾರೆ. 17 ಮಂದಿ ಒಂದು ವರ್ಷ ಪೂರೈಸಿದ್ದಾರೆ. ಇನ್ನುಳಿದಂತೆ 5047 ಮಂದಿ ಸದಸ್ಯರಿದ್ದು, ಸಂಘದಲ್ಲಿ ಕನಿಷ್ಠ ವ್ಯವಹಾರ ನಡೆಸಿರುವ ಕೇವಲ 1179 ಮಂದಿ ಮಾತ್ರ ಮತದಾನದ ಅವಕಾಶ ಪಡೆದಿದ್ದರು. ಇದರ ಜತೆಗೆ ಹೈಕೋರ್ಟ್ ಇನ್ನೂ 469 ಮಂದಿಗೆ ಮತ ಹಕ್ಕಿನ ಅವಕಾಶ ನೀಡಿತ್ತು.

ಬೇಬಿ ಬೆಟ್ಟದಲ್ಲಿ ಚಿರತೆ ಪ್ರತ್ಯಕ್ಷ

ಪಾಂಡವಪುರ, ಜೂ.23– ತಾಲೂಕಿನ ಬೇಬಿಬೆಟ್ಟದ ಶ್ರೀರಾಮಯೋಗೀಶ್ವರ ಮಠದ ಆವರಣದಲ್ಲಿ ಚಿರತೆ ಪ್ರತ್ಯಕ್ಷವಾಗಿ ಸ್ಥಳೀಯರಲ್ಲಿ ಆತಂಕ ಮೂಡಿಸಿದೆ.

ಬುಧವಾರ ಮುಂಜಾನೆ 2.30ರಲ್ಲಿ ಮಠದ ಆವರಣ ಪ್ರವೇಶಿಸಿರುವ ಚಿರತೆ ಚಲನವಲನ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಮಠದ ಆವರಣದಲ್ಲಿ ಸುತ್ತಾಡಿರುವ ಚಿರತೆ ಬಳಿಕ ನಾಯಿ ಮೇಲೆ ದಾಳಿ ನಡೆಸಿ ಕೊಂದು ಹಾಕಿದೆ. ವಿಚಾರ ತಿಳಿದ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಸೆರೆಗೆ ಕ್ರಮ ಕೈಗೊಂಡಿದ್ದಾರೆ.

ಬೇಬಿಬೆಟ್ಟ ಸುತ್ತಮುತ್ತ ಚಿರತೆಗಳ ಹಾವಳಿ ಹೆಚ್ಚಾಗಿದ್ದು, ಈ ಹಿಂದೆಯೂ ಚಿರತೆ ಕರು ಮೇಲೆ ದಾಳಿ ನಡೆಸಿ ಗಾಯಗೊಳಿಸಿತ್ತು. ಮಠದಲ್ಲಿ 15ಕ್ಕೂ ಹೆಚ್ಚು ಹಸುಗಳಿದ್ದು, ಅವುಗಳನ್ನು ಮೇಯಲು ಹೊರ ಬಿಡಲು ಭಯವಾಗುತ್ತದೆ. ಪ್ರಾಣಿಗಳು ಮನುಷ್ಯನ ಮೇಲೆ ಯಾವಾಗ ದಾಳಿ ನಡೆಸುತ್ತವೆ ಎಂಬುದು ತಿಳಿಯಲು ಸಾಧ್ಯವಿಲ್ಲ. ನಾವು ಕೂಡ ಭಕ್ತರ ಮನೆಗಳಲ್ಲಿ ಪೂಜೆ ಸೇರಿದಂತೆ ಇತರೆ ಧಾರ್ಮಿಕ ಕೈಂಕರ್ಯಗಳಿಗೆ ಹೊರ ಜಿಲ್ಲೆ, ತಾಲೂಕುಗಳಿಗೆ ತೆರಳಿ ತಡರಾತ್ರಿ ಮಠಕ್ಕೆ ಆಗಮಿಸುತ್ತೇವೆ. ಹೀಗಾಗಿ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಸೆರೆ ಹಿಡಿಯಲು ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಹೆಚ್ಚಿನ ಅನಾಹುತ ಸಂಭವಿಸುವ ಸಾಧ್ಯತೆ ಇದೆ ಎಂದು ಮಠದ ಪೀಠಾಧ್ಯಕ್ಷ ಶಿವಬಸವ ಸ್ವಾಮೀಜಿ ಆಗ್ರಹಿಸಿದರು.

ತರಬೇತಿ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ

ಪಾಂಡವಪುರ, ಜೂ.23– ತಾಲೂಕಿನ ವಿಶ್ವೇಶ್ವರ ನಗರ ಬಡಾವಣೆಯಲ್ಲಿ ಸ್ವಸಹಾಯ ಸಂಘಗಳ ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡುವ 19.50 ಲಕ್ಷ ರೂ. ವೆಚ್ಚದ ತರಬೇತಿ ಭವನ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಭೂಮಿ ಪೂಜೆ ನೆರವೇರಿಸಿದರು.



ಬಳಿಕ ಮಾತನಾಡಿದ ಅವರು, ತಾಲೂಕಿನ ಕೆನ್ನಾಳು ಗ್ರಾಪಂ ವ್ಯಾಪ್ತಿಯ ವಿಶ್ವೇಶ್ವರ ನಗರ ಬಡಾವಣೆಯಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆಯಡಿ 19.50 ಲಕ್ಷ ರೂ. ವೆಚ್ಚದ ಕೌಶಲ್ಯಾಭಿವೃದ್ಧಿ ತರಬೇತಿ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಲಾಗಿದೆ. ತ್ವರಿತವಾಗಿ ಭವನದ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ: ವಿಶ್ವೇಶ್ವರ ನಗರದ ಗಣಪತಿ ದೇವಸ್ಥಾನದಿಂದ ವಿಸಿ ನಾಲೆ ಸಂಪರ್ಕಿಸುವ ರಸ್ತೆ ಚರಂಡಿ ಹಾಗೂ ಬಡಾವಣೆಯ ಪ್ರಮುಖ ರಸ್ತೆಗಳನ್ನು 1 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಕೆನ್ನಾಳು ಗ್ರಾಪಂ ಅಧ್ಯಕ್ಷೆ ಶ್ವೇತ, ಉಪಾಧ್ಯಕ್ಷ ಕೆ.ಎನ್.ಮೋಹನ್‌ಕುಮಾರ್, ಸದಸ್ಯರಾದ ಭಾಸ್ಕರ್, ರಾಮಣ್ಣ ಜಯಲಕ್ಷ್ಮೀ, ನಂದೀಶ್, ದ್ರಾಕ್ಷಾಯಿಣಿ, ಸಿಂಧು, ಶೀಲಾ, ಚಿದಾನಂದ್, ರುದ್ರೇಶ್, ಜ್ಞಾನೇಶ್, ಕಾಂತರಾಜ್, ಪ್ರಕಾಶ್, ಇಂದ್ರಮ್ಮ, ಪಂಕಜ, ವಿ.ಪ್ರಕಾಶ್, ದೇವಿಕಾ, ರಜಿನಿ, ಶಶಿ, ಪಿಡಿಓ ಶ್ರೀನಿವಾಸ್, ಜಿಪಂ ಎನ್‌ಆರ್ ಎಲ್‌ಎಂ ನರಸಿಂಹ, ಮುಖಂಡರಾದ ಶಿವಲಿಂಗೇಗೌಡ, ವಿಜಿಕುಮಾರ್, ಹಲವರಿದ್ದರು.

ಕೆ.ಆರ್.ಪೇಟೆಯಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘದ ಸಭೆ

ಕೆ.ಆರ್.ಪೇಟೆ, ಜೂ.23(ಶ್ರೀನಿವಾಸ್)– ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘದ ಸಭೆ ನಡೆಯಿತು.



ಪ್ರಾಂಶುಪಾಲರಾದ ಪ್ರೊ.ಹೇಮಲತಾ ಮಾತನಾಡಿ, ಕಾಲೇಜಿನ ಅಭಿವೃದ್ಧಿಗೆ ಹಿರಿಯ ವಿದ್ಯಾರ್ಥಿಗಳ ಸಲಹೆ ಸಹಕಾರ ಅಗತ್ಯ. ಹಿರಿಯ ವಿದ್ಯಾರ್ಥಿಗಳು ಕಾಲೇಜಿನ ಬಗ್ಗೆ ಕಾಳಜಿ ವಹಿಸಬೇಕು. ಪ್ರತಿ 3 ತಿಂಗಳಿಗೊಮ್ಮೆ ಕಾಲೇಜಿನಲ್ಲಿ ಸಭೆ ನಡೆಸಿ ಕಾಲೇಜಿನ ಅಭಿವೃದ್ಧಿಗೆ ಸಲಹೆ ನೀಡಬೇಕು. ಕಾಲೇಜಿನಲ್ಲಿ ಸುಸಜ್ಜಿತ ಕಟ್ಟಡವಿದ್ದು, ನುರಿತ ಉಪನ್ಯಾಸಕ ತಂಡವಿದೆ. ವಿದ್ಯಾರ್ಥಿನಿಯರ ಸುರಕ್ಷತೆ ದೃಷ್ಟಿಯಿಂದ ಪ್ರತಿ ಕೊಠಡಿಗೂ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. 45 ಸಾವಿರ ಪುಸ್ತಕವಿರುವ ಬೃಹತ್ ಗ್ರಂಥಾಲಯವಿದೆ. ಕಾಲೇಜಿನ ಸುತ್ತಮುತ್ತ ಉತ್ತಮ ಹಸಿರು ಪರಿಸರ ಇದೆ. ಹಿರಿಯ ವಿದ್ಯಾರ್ಥಿಗಳು ನ್ಯಾಕ್ ತಂಡಕ್ಕೆ ಕಾಲೇಜಿನ ಬಗ್ಗೆ ವಾಸ್ತವಾಂಶ ತಿಳಿಸುವ ಮೂಲಕ ಕಾಲೇಜು ಎ ಗ್ರೇಡ್ ಪಡೆಯಲು ಸಹಕಾರ ನೀಡಬೇಕು. ಕಾಲೇಜಿನಲ್ಲಿ ಏನೇ ಕುಂದುಕೊರತೆ ಕಂಡು ಬಂದರೂ, ಕೂಡಲೇ ತಮ್ಮ ಗಮನಕ್ಕೆ ತಂದರೆ ಬಗೆಹರಿಸುವುದಾಗಿ ತಿಳಿಸಿದರು.

ಸಭೆಯಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘದ ಸಂಚಾಲಕ ಡಾ.ಸಿ.ರಮೇಶ್, ಪ್ರಾಧ್ಯಾಪಕರಾದ ಡಾ.ಉಮಾಶಂಕರ್, ಡಾ.ವೇಣು, ಡಾ.ಸಂಪತ್‌ಕುಮಾರ್, ಗ್ರಂಥಾಲಯ ವಿಭಾಗದ ಮುಖ್ಯಸ್ಥ ಅರುಣ್, ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಸಿ.ಬಿ.ಚೇತನ್ ಕುಮಾರ್, ಗೌರವಾಧ್ಯಕ್ಷ ಕರ್ನಾಟಕ ಪಬ್ಲಿಕ್ ಶಾಲೆ ಪ್ರಾಂಶುಪಾಲ ಡಿ.ಬಿ.ಸತ್ಯ, ಕಾರ್ಯದರ್ಶಿ ಸೋಮು, ಉಪಾಧ್ಯಕ್ಷರಾದ ಕೆ.ಎಸ್.ಹರಪ್ರಸಾದ್, ಕೆ.ಎಸ್.ಕುಮಾರ್, ಮಾಧ್ಯಮ ಕಾರ್ಯದರ್ಶಿ ಆರ್.ಶ್ರೀನಿವಾಸ್, ಹೇಮಚಂದ್ರ, ಹಿರಿಯ ವಿದ್ಯಾರ್ಥಿಗಳಾದ ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ಅವಿನಾಶ್, ಕರವೇ ಅಧ್ಯಕ್ಷ ಡಿ.ಎಸ್.ವೇಣು, ಕಾರ್ಯದರ್ಶಿ ಶ್ರೀನಿವಾಸ್ ಹಾಗೂ ಕಾಲೇಜಿನ ಹಿರಿಯ ವಿದ್ಯಾರ್ಥಿಗಳಿದ್ದರು.

ಮಾದಪ್ಪನ ಸನ್ನಿಧಿಯಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ 48 ಜೋಡಿಗಳು



ಹನೂರು, ಜೂ.23– ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಯಾತ್ರಸ್ಥಳ ಮಲೆಮಹದೇಶ್ವರ ಬೆಟ್ಟದ ಮಾದಪ್ಪನ ಸನ್ನಿಧಿಯ ರಂಗಮಂದಿರದ ಆವರಣದಲ್ಲಿ ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಗುರುವಾರ ಆಯೋಜಿಸಿದ್ದ ಉಚಿತ ಸಾಮೂಹಿಕ ವಿವಾಹದಲ್ಲಿ 48 ಜೋಡಿಗಳು ದಾಂಪತ್ಯಕ್ಕೆ ಕಾಲಿಟ್ಟರು.

ಬೆಳಗ್ಗೆ 8 ರಿಂದ 9.10 ಗಂಟೆಯೊಳಗೆ ಸಲ್ಲುವ ಶುಭ ಕಟಕ ಲಗ್ನದಲ್ಲಿ ಸಾಲೂರು ಬೃಹನ್ಮಠದ ಪೀಠಾಧಿಪತಿಗಳ ಆಶೀರ್ವಚನಗಳೊಂದಿಗೆ ಉಚಿತ ಸಾಮೂಹಿಕ ವಿವಾಹವು ಶಾಸ್ತ್ರೋಕ್ತವಾಗಿ ನಡೆಯಿತು. ವಧುವಿಗೆ ಚಿನ್ನದ ಮಾಂಗಲ್ಯ, ಕಾಲುಂಗುರ, ಸೀರೆ, ರವಿಕೆ ಹಾಗೂ ವರನಿಗೆ ಪಂಚೆ, ಷರ್ಟ್, ಟವಲ್ ಹಾಗೂ ಪೇಟವನ್ನು ನೀಡಲಾಗಿತ್ತು. ವಿವಾಹ ಮಹೋತ್ಸವದಲ್ಲಿ ಜೋಡಿಗಳು ತಮಿಳುನಾಡಿಗೆ ಸೇರಿದ್ದವರಾಗಿದ್ದರೆ ಇನ್ನೆರಡು ವಿಕಲಚೇತನ ಜೋಡಿಗಳಾಗಿದ್ದು ವಿಶೇಷವಾಗಿತ್ತು.

ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಶಾಸಕ ಆರ್.ನರೇಂದ್ರ ಮಾತನಾಡಿ, ಮಲೆಮಹದೇಶ್ವರ ಬೆಟ್ಟವು ಧಾರ್ಮಿಕ ಯಾತ್ರಾ ಸ್ಥಳವಾಗಿದ್ದು, ಲಕ್ಷಾಂತರ ಭಕ್ತ ಸಮೂಹವನ್ನು ಹೊಂದಿದೆ. ಇಲ್ಲಿನ ಮಾದಪ್ಪನ ಮಹಿಮೆ ರಾಜ್ಯಾದ್ಯಂತ ಪ್ರಸಿದ್ಧಿ ಪಡೆದಿದೆ. ಇಲ್ಲಿ ಪ್ರತಿ ವರ್ಷ ಉಚಿತ ಸಾಮೂಹಿಕ ವಿವಾಹವನ್ನು ಆಯೋಜಿಸುತ್ತಿರುವುದು ಆರ್ಥಿಕವಾಗಿ ಹಿಂದುಳಿದವರಿಗೆ ಅನುಕೂಲವಾಗಲಿದೆ. ಇಲ್ಲಿ ಮದುವೆಯಾದ ದಂಪತಿಗಳು ಇದುವರೆಗೂ ಅನ್ಯೋನ್ಯವಾಗಿ ಜೀವನ ನಡೆಸುತ್ತಿದ್ದಾರೆ. ಮದುವೆ ಎನ್ನುವುದು ಜೀವನದ ಪವಿತ್ರ ಬಂಧವಾಗಿದ್ದು, ದಂಪತಿಗಳು ಅನ್ಯೋನ್ಯವಾಗಿ ಜೀವನ ನಡೆಸಬೇಕು. ಪ್ರತಿಯೊಬ್ಬರ ಜೀವನದಲ್ಲಿ ಸಮಸ್ಯೆ ಇದ್ದೇ ಇರುತ್ತದೆ. ಆದರೆ ಸಮಸ್ಯೆಗಳನ್ನು ಎದುರಿಸಿ ಜೀವನ ನಡೆಸುವುದೇ ನಿಜವಾದ ಬದುಕು ಎಂದು ತಿಳಿಸಿದರಲ್ಲದೇ ವಿವಾಹವಾದ ದಂಪತಿಗಳಿಗೆ ಶುಭ ಹಾರೈಸಿದರು. ವಿವಾಹದ ಅಂಗವಾಗಿ ದಾಸೋಹ ಭವನದಲ್ಲಿ ವಧು ವರರು ಸೇರಿದಂತೆ ಆಗಮಿಸಿದ್ದ ಕುಟುಂಬಸ್ಥರು, ಸಂಬಂಧಿಕರು ಹಾಗೂ ಭಕ್ತರಿಗೆ ಸಿಹಿ ಊಟದ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಸಾಲೂರು ಬೃಹನ್ ಮಠದ ಅಧ್ಯಕ್ಷರಾದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿ, ಜಿಲ್ಲಾಧಿಕಾರಿ ಚಾರುಲತ ಸೋಮಲ್, ಪ್ರಾಧಿಕಾರದ ಕಾರ್ಯದರ್ಶಿ ಕಾತ್ಯಾಯಿನಿ ದೇವಿ ಉಪ ಕಾರ್ಯದರ್ಶಿ ಬಸವರಾಜು, ಲೆಕ್ಕಾಧಿಕಾರಿ ಪ್ರವೀಣ್ ಪಾಟೀಲ್, ದ್ವಿತೀಯ ದರ್ಜೆ ಸಹಾಯಕ ಮಹದೇವಸ್ವಾಮಿ ಸೇರಿದಂತೆ ಇನ್ನಿತರರು ಹಾಜರಿದ್ದರು.

ಹನೂರು ಬಳಿ ದ್ವಿಚಕ್ರ ವಾಹನಕ್ಕೆ ಲಾರಿ ಡಿಕ್ಕಿ: ಓರ್ವ ಸಾವು, ಇಬ್ಬರಿಗೆ ಗಾಯ

ಹನೂರು, ಜೂ.23– ದ್ವಿಚಕ್ರ ವಾಹನಕ್ಕೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಓರ್ವ ಮೃತಪಟ್ಟು, ಇಬ್ಬರು ತೀವ್ರವಾಗಿ ಗಾಯಗೊಂಡಿರುವ ಘಟನೆ ಪಟ್ಟಣದ ಹೊರವಲಯದಲ್ಲಿ ನಡೆದಿದೆ.

ತಾಲೂಕಿನ ದೊಮ್ಮನಗದ್ದೆ ಗ್ರಾಮದ ಪ್ರಶಾಂತ್ (27) ಮೃತ ದುರ್ದೈವಿ. ಇದೇ ಗ್ರಾಮದ ಶ್ರೀಧರ್ (18) ಹಾಗೂ ಸತೀಶ್(19) ಗಾಯಗೊಂಡಿದ್ದು, ಅವರುಗಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಕಾರ್ಯನಿಮಿತ್ತ ಮೂವರು ಸ್ನೇಹಿತರು ಹನೂರು ಪಟ್ಟಣಕ್ಕೆ ತೆರಳಿ ವಾಪಸ್ ದೊಮ್ಮನಗದ್ದೆ ಗ್ರಾಮಕ್ಕೆ ತಮ್ಮ ದ್ವಿಚಕ್ರ ವಾಹನದಲ್ಲಿ ಹಿಂತಿರುಗುತ್ತಿದ್ದಾಗ ರಾಮಾಪುರ ಮಾರ್ಗವಾಗಿ ಹನೂರು ಪಟ್ಟಣದತ್ತ ಬರುತ್ತಿದ್ದ ಲಾರಿ ಡಿಕ್ಕಿ ಹೊಡೆದಿದೆ. ಇದರಿಂದ ಸ್ಥಳದಲ್ಲಿಯೇ ಪ್ರಶಾಂತ್ ಮೃತಪಟ್ಟಿದ್ದಾರೆ. ಶ್ರೀಧರ್ ಹಾಗೂ ಸತೀಶ್ ಎಂಬವರು ಗಾಯಗೊಂಡಿದ್ದರು. ದಾರಿಹೋಕರು 108 ಆಂಬುಲೆನ್ಸ್‌ಗೆ ಕರೆ ಮಾಡಿದ ಪರಿಣಾಮ ಸ್ಥಳಕ್ಕೆ ಧಾವಿಸಿದ ತುರ್ತು ವೈದ್ಯಕೀಯ ಸಿಬ್ಬಂದಿ ಮೂರ್ತಿ ಹಾಗೂ ಚಾಲಕ ರಘು ಪ್ರಥಮ ಚಿಕಿತ್ಸೆ ನೀಡಿ ಕಾಮಗೆರೆ ಹೋಲಿ ಕ್ರಾಸ್ ಆಸ್ಪತ್ರೆಗೆ ದಾಖಲು ಮಾಡಿದರು.

ತಲೆಗೆ ತೀವ್ರ ಪೆಟ್ಟಾಗಿರುವ ಶ್ರೀಧರ್ ಅವರಿಗೆ ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇರುವುದರಿಂದ ಮೈಸೂರಿನ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಸಣ್ಣಪುಟ್ಟ ಗಾಯಗಳಿಂದ ನರಳುತ್ತಿದ್ದ ಸತೀಶ್ ಚೇತರಿಸಿಕೊಳ್ಳುತ್ತಿದ್ದಾರೆ. ಈ ಸಂಬಂಧ ರಾಮಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಚನಗಳಿಂದ ಆಧ್ಯಾತ್ಮಿಕ ಮೌಲ್ಯ, ಪ್ರಾಪಂಚಿಕ ಜ್ಞಾನದ ಅರಿವು

ಬಸವ ಜಯಂತಿಯಲ್ಲಿ ಸುತ್ತೂರು ಶ್ರೀಗಳ ಆಶೀರ್ವಚನ



ಹನೂರು, ಜೂ.23(ಸೋಮು)– ಆಧ್ಯಾತ್ಮಕ ಮೌಲ್ಯ ಹಾಗೂ ಪ್ರಾಪಂಚಿಕ ಜ್ಞಾನವನ್ನು ತಿಳಿಯುವಲ್ಲಿ ವಚನಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ತಿಳಿಸಿದರು. ಸಮೀಪದ ಆರ್.ಎಸ್ ದೊಡ್ಡಿಯ ಶ್ರೀ ಗೌರಿಶಂಕರ ಕಲ್ಯಾಣ ಮಂಟಪದಲ್ಲಿ ಮಾನಸ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಶ್ರೀ ಬಸವೇಶ್ವರರ 889 ಜಯಂತೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ನಂತರ ಆಶೀರ್ವಚನ ನೀಡಿ ಮಾತನಾಡಿದರು. ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿಯೇ ಜಾತಿ, ಮತ, ಲಿಂಗಭೇದಗಳ ಪದ್ಧತಿಯನ್ನು ಹೋಗಲಾಡಿಸಲು ಶ್ರಮಿಸಿದ ಮಹಾನುಪುರುಷ. ವಚನಗಳ ಮೂಲಕ ಸಮಾಜವನ್ನು ಸನ್ಮಾರ್ಗದತ್ತ ಕೊಂಡೊಯ್ಯಲು ಶ್ರಮಿಸಿದ ಸಾಮಾಜಿಕ ಕ್ರಾಂತಿಕಾರಿ. ಅವರ ವಚನಗಳು ಬಹುಮುಖ್ಯ ಪಾತ್ರವನ್ನು ವಹಿಸಿದ್ದು, ಆಧ್ಯಾತ್ಮಿಕ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿದೆ. ಅಲ್ಲದೇ ಮನುಷ್ಯನನ್ನು ಬೆಳಕಿನಿಂದ ಕತ್ತಲೆಯೆಡೆಗೆ ಕೊಂಡೊಯ್ಯುವುದರ ಮೂಲಕ ಉತ್ತಮ ಸುಸಂಸ್ಕೃತ ವ್ಯಕ್ತಿಯನ್ನಾಗಿ ರೂಪಿಸುತ್ತದೆ. ಆಗಾಗಿ ಪ್ರತಿಯೊಬ್ಬರೂ ವಚನಗಳನ್ನು ಓದುವುದನ್ನು ರೂಢಿಸಿಕೊಳ್ಳುವುದರ ಜತೆಗೆ ಬಸವಣ್ಣನವರ ತತ್ವಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ವಿಜಯನಗರ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೌಮ್ಯನಾಥ ಸ್ವಾಮೀಜಿ ಮಾತನಾಡಿದರು. ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಮಾತನಾಡಿ, ಹನೂರು ತಾಲೂಕು ಆಗಬೇಕೆನ್ನುವ ಉದ್ದೇಶದಿಂದ ಹಲವು ವರ್ಷಗಳ ಹಿಂದೆಯೇ ವಿಧಾನಸಭೆಯಲ್ಲಿ ಹೆಚ್ಚಿನ ಒತ್ತು ನೀಡಲಾಗಿದ್ದು, ಮುಖ್ಯಮಂತ್ರಿ ಜಗದೀಶ್‌ಶೆಟ್ಟರ ಅವಧಿಯಲ್ಲಿ ತಾಲೂಕು ರಚನೆ ಸಂಬಂಧ ಹಲವು ಸಮಿತಿಗಳನ್ನು ರಚಿಸಲಾಗಿತ್ತು. ಇದರನ್ವಯ ಹನೂರು ತಾಲೂಕು ರಚನೆಯಾಗಿದೆ ಎಂದರು.

ಇದೇ ವೇಳೆ ಕುಂದೂರು ಮಠದ ಶ್ರೀ ಡಾ. ಶರತ್‌ಚಂದ್ರ ಸ್ವಾಮೀಜಿ, ಮುಡಿಗುಂಡ ವಿರಕ್ತ ಮಠದ ಶ್ರೀಕಂಠ ಸ್ವಾಮೀಜಿ ಮಾತನಾಡಿದರು. ಬಳಿಕ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಕಾಯಕ ಶಿಲ್ಪಿಗಳನ್ನು ಸನ್ಮಾನಿಸಲಾಯಿತಲ್ಲದೇ ಮಾನಸ ಸೇವಾ ರಥಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಸಾಲೂರು ಬೃಹನ್ಮಠದ ಪೀಠಾಧಿಪತಿ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಶಾಸಕ ಎನ್.ಮಹೇಶ್, ಮಾಜಿ ಶಾಸಕರಾದ ಪರಿಮಳ ನಾಗಪ್ಪ ಜಿ.ಎನ್.ನಂಜುಂಡಸ್ವಾಮಿ, ಅಂತರರಾಷ್ಟ್ರೀಯ ಯೋಗಾಚಾರ್ಯ ಯೋಗಾತ್ಮ ಶ್ರೀ ಹರಿ, ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ನಂದೀಶ್, ಕೊಳ್ಳೇಗಾಲ ಮಹಾಸಭಾಧ್ಯಕ್ಷ ಮಹದೇವಪ್ರಸಾದ್ ಇನ್ನಿತರರಿದ್ದರು.

ಸಂತೇಮರಹಳ್ಳಿಯಲ್ಲಿ ಇಂದು ವಿದ್ಯುತ್ ಜನಸಂಪರ್ಕ ಸಭೆ

ಚಾಮರಾಜನಗರ, ಜೂ.23– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಸಂತೇಮರಹಳ್ಳಿ ಉಪ ವಿಭಾಗ ಕಚೇರಿಯಲ್ಲಿ ಜೂನ್ 24 ರಂದು ಬೆಳಗ್ಗೆ 11 ರಿಂದ 12 ಗಂಟೆಯವರೆಗೆ ಚಾಮರಾಜನಗರ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ವಿದ್ಯುತ್ ಜನಸಂಪರ್ಕ ಸಭೆ ನಡೆಯಲಿದೆ.



ಸಾರ್ವಜನಿಕರು ಸಭೆಗೆ ಹಾಜರಾಗಿ ವಿದ್ಯುತ್ ಸಮಸ್ಯೆಗಳಿದ್ದಲ್ಲಿ ತಿಳಿಸಬೇಕೆಂದು ಕಾರ್ಯ ಮತ್ತು ಪಾಲನಾ ಸಂತೇಮರಹಳ್ಳಿ ಉಪವಿಭಾಗ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ನಿಧನ

ಗುರುಮಲ್ಲಪ್ಪ

ಚಾಮರಾಜನಗರ, ಜೂ.23– ತಾಲೂಕಿನ ಉಗನೇದಹುಂಡಿ ಗ್ರಾಮದ ನ್ಯಾಯಬೆಲೆ ಅಂಗಡಿ ಮಾಲೀಕರಾದ ಗುರುಮಲ್ಲಪ್ಪ(67) ಗುರುವಾರ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಓರ್ವ ಮಗ, ಮಗಳು ಇದ್ದಾರೆ. ಜೂ.26 ಭಾನುವಾರ ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಉಗನೇದ ಹುಂಡಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಹೆದ್ದಾರಿ ರಸ್ತೆ ಸುರಕ್ಷತೆಗೆ ಒತ್ತು ನೀಡಿ

ಅಪಘಾತ ತಡೆಯಲು ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ನಿರ್ದೇಶನ

ಮಡಿಕೇರಿ, ಜೂ.23– ಜಿಲ್ಲೆಯ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿ ಕಡೆಗಳಲ್ಲಿ ಆಗಾಗ ಅಪಘಾತಗಳು ಸಂಭವಿಸುತ್ತಿದ್ದು, ಅಪಘಾತ ತಪ್ಪಿಸುವಲ್ಲಿ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರಗಳು ರಸ್ತೆ ಸುರಕ್ಷತೆ ಸಂಬಂಧಿಸಿದಂತೆ ಅಗತ್ಯ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಎಂಜಿನಿಯರ್‌ಗಳಿಗೆ ಜಿಲ್ಲಾಧಿಕಾರಿ ಬಿ.ಸಿ.ಸತೀಶ ನಿರ್ದೇಶನ ನೀಡಿದ್ದಾರೆ.

ನಗರದ ಹೊರವಲಯದಲ್ಲಿರುವ ಪ್ರಾದೇಶಿಕ ಸಾರಿಗೆ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕುಶಾಲನಗರದಿಂದ ಸಂಪಾಜೆವರೆಗಿನ ರಾಷ್ಟ್ರೀಯ ಹೆದ್ದಾರಿಯು(275) ನಗರದ ಚೈನ್‌ಗೇಟ್ ಬಳಿ ಇತ್ತೀಚೆಗೆ ಕಾರ್ಮಿಕರೊಬ್ಬರು ಬೈಕ್‌ನಲ್ಲಿ ಸಂಚರಿಸುತ್ತಿದ್ದಾಗ ಮೃತಪಟ್ಟಿದ್ದಾರೆ. ಹೀಗೆ ಹಲವು ಅಪಘಾತಗಳಿಂದ ಜೀವ ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ರಸ್ತೆ ಸುರಕ್ಷತೆ ಸಂಬಂಧ ಅಗತ್ಯ ಕ್ರಮವಹಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಎಂಜಿನಿಯರ್‌ಗೆ ಸೂಚಿಸಿದರು.

ಅಗತ್ಯವಿರುವೆಡೆ ಉಬ್ಬುಗಳ ನಿರ್ಮಾಣ, ಜೀಬ್ರಾ ಕ್ರಾಸ್ ಹಾಗೂ ರಸ್ತೆ ಸುರಕ್ಷತಾ ಸೂಚನಾ ಫಲಕ ಅಳವಡಿಸುವುದು. ಹೀಗೆ ಹಲವು ಮಾಹಿತಿಯನ್ನು ಬರೆಸಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಜಿಲ್ಲೆಯ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡುವುದು, ಮಾಹಿತಿಯ ಫಲಕ ಅಳವಡಿಸುವುದು, ಅಗತ್ಯವಿರುವೆಡೆ ಉಬ್ಬುಗಳ ನಿರ್ಮಾಣ ಮಾಡಿ, ಜೀಬ್ರಾ ಕ್ರಾಸ್ ಬರೆಸುವುದು, ಹೀಗೆ ಮಾಹಿತಿಯನ್ನು ಒದಗಿಸಿ ಅಪಘಾತ ಆಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.



ಜಿಲ್ಲೆಯಲ್ಲಿ ಸುಮಾರು 3,900 ಆಟೋಗಳು ಸಂಚರಿಸುತ್ತಿವೆ. ಆಟೋ ಚಾಲಕರು ಸರ್ಕಾರದ ನಿಯಮ ಪಾಲಿಸಬೇಕು. ಆಟೋ ಚಾಲಕರು ಸಮವಸ್ತ್ರದಲ್ಲಿ ಕೆಲಸ ನಿರ್ವಹಿಸಬೇಕು ಎಂದರು. ಇದಕ್ಕೆ ಧ್ವನಿಗೂಡಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ ಅವರು ಮಡಿಕೇರಿ ಸೇರಿದಂತೆ ಇತರೆಡೆಗಳಲ್ಲಿ ಅಪಘಾತ ವಲಯಗಳನ್ನು ಗುರುತಿಸಲಾಗಿದೆ. ಈ ಸಂಬಂಧ ಸಂಬಂಧಪಟ್ಟ ಇಲಾಖೆಯಿಂದ ಅಪಘಾತ ತಪ್ಪಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮವಹಿಸಬೇಕು. ಆ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಜೊತೆ ಕೈಜೋಡಿಸಬೇಕು ಎಂದರು. ಮಡಿಕೇರಿ ನಗರದಲ್ಲಿ ವಾಹನ ನಿಲುಗಡೆಗೆ ಎಲ್ಲೆಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂಬ ಬಗ್ಗೆ ಮಾಹಿತಿ ಪಟ್ಟಿ ಒದಗಿಸುವಂತೆ ಪೌರಾಯುಕ್ತರಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಹೊಸೂರು ರಮೇಶ್ ಜೋಯಪ್ಪ ಅವರು, ಕಾಲೇಜು ರಸ್ತೆಯಲ್ಲಿ ವಾಹನ ನಿಲುಗಡೆ ಸಂಬಂಧ ವೇಳೆ ನಿಗದಿ ಮಾಡಬೇಕು ಎಂದು ಸಲಹೆ ಮಾಡಿದರು.

ಪ್ರಾದೇಶಿಕ ಸಾರಿಗೆ ಅಧಿಕಾರಿ ಹೇಮಾವತಿ, ಜಿಪಂ ಮುಖ್ಯ ಯೋಜನಾಧಿಕಾರಿ ಪಿ.ಆರ್.ರಾಜಗೋಪಾಲ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ವೇದಮೂರ್ತಿ, ಪೌರಾಯುಕ್ತ ಎಸ್.ವಿ.ರಾಮದಾಸ್, ಲೋಕೋಪಯೋಗಿ ಇಲಾಖೆ ಎಇಇ ಎಚ್.ವಿ.ಶಿವರಾಮ್, ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗದ ಎಇಇ ನಾಗರಾಜು, ಸಹಾಯಕ ಎಂಜಿನಿಯರ್ ಎಸ್.ಮುರುಗೇಶ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ಜಿ.ಶ್ರೀನಿವಾಸ, ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ನಯನಾ ನಾಯ್ಕ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮೊಹಿಸಿನ್ ಪಾಷಾ, ಆರ್‌ಟಿಒ ಕಚೇರಿಯ ರೀಟಾ ಇತರರು ಇದ್ದರು.

ಕಾರು–ಬೈಕ್ ನಡುವೆ ಡಿಕ್ಕಿ: ಯುವಕರಿಬ್ಬರ ಸಾವು

ಗುಡ್ಡೆ ಹೊಸೂರು ಬಳಿ ದುರಂತ

ಕುಶಾಲನಗರ, ಜೂ.23– ಕಾರು ಮತ್ತು ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಯುವಕರಿಬ್ಬರು ಸಾವನ್ನಪ್ಪಿದ ಘಟನೆ ಗುಡ್ಡೆಹೊಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬುಧವಾರ ತಡರಾತ್ರಿ ನಡೆದಿದೆ.

ಗೋಣಿಕೊಪ್ಪದ ಕೈಕೇರಿಯ ಮಣಿಕಂಠ ಹಾಗೂ ಸುಮಿತ್ರ ದಂಪತಿಗಳ ಪುತ್ರ ದೀಕ್ಷಿತ್(24) ಅಪಘಾತದಲ್ಲಿ ಸ್ಥಳದಲ್ಲೇ ಸಾವನ್ನಪ್ಪಿದ್ದು, ಹಿಂಬದಿ ಸವಾರ ಬಸವನಹಳ್ಳಿ ನಿವಾಸಿ ರಂಜಿತ್ ಪೊನ್ನಪ್ಪಗೆ (26) ಗಂಭೀರ ಗಾಯಗಳಾಗಿದ್ದು, ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ರಂಜಿತ್ ಮಗನ ನಾಮಕರಣ ಕಾರ್ಯಕ್ರಮ ಮುಗಿಸಿ ಕಾರ್ಯನಿಮಿತ್ತ ಕುಶಾಲನಗರದತ್ತ ತೆರಳುವ ಸಂದರ್ಭ ಘಟನೆ ನಡೆದಿದೆ. ಮೃತ ದೀಕ್ಷಿತ್ ಅರಣ್ಯ ಇಲಾಖೆಯಲ್ಲಿ ತಾತ್ಕಾಲಿಕವಾಗಿ ಗಾರ್ಡ್ ಹುದ್ದೆ ನಿರ್ವಹಿಸುತ್ತಿದ್ದರು ಎನ್ನಲಾಗಿದೆ. ಕುಶಾಲನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾಲಿಬೆಟ್ಟದಲ್ಲಿ ಹುಲಿ ದಾಳಿಗೆ ಹಸು ಬಲಿ

ಸ್ಥಳಕ್ಕೆ ಅರಣ್ಯಾಧಿಕಾರಿಗಳು ಭೇಟಿ, ಗ್ರಾಮಸ್ಥರಲ್ಲಿ ಆತಂಕ

ಸಿದ್ದಾಪುರ, ಜೂ.23– ಪಾಲಿಬೆಟ್ಟ ಸುತ್ತಮುತ್ತ ಕಾಣಿಸಿಕೊಳ್ಳುತ್ತಿದ್ದ ಹುಲಿ ಇದೀಗ ದುಬಾರಿ ಕಾಫಿ ತೋಟದ ಮೇಲೆ ದಾಳಿ ನಡೆಸಿ ಹಸುವೊಂದನ್ನು ಬಲಿತೆಗೆದುಕೊಂಡಿದ್ದು, ಕಾರ್ಮಿಕರು, ಗ್ರಾಮಸ್ಥರಲ್ಲಿ ಆತಂಕವನ್ನುಂಟು ಮಾಡಿದೆ.



ಪಾಲಿಬೆಟ್ಟ ಪಟ್ಟಣದ ಅರ್ಧ ಕಿಲೋಮೀಟರ್ ದೂರದಲ್ಲಿರುವ ದುಬಾರಿ ಕಾಫಿ ತೋಟಕ್ಕೆ ನುಗ್ಗಿರುವ ಹುಲಿ ಹಸು ಮೇಲೆ ದಾಳಿ ನಡೆಸಿ ಅರ್ಧಭಾಗದಷ್ಟು ತಿಂದು ಪರಾರಿಯಾಗಿದೆ. ಕಾಫಿ ತೋಟಕ್ಕೆ ತೆರಳಿದ ಕಾರ್ಮಿಕರು ಹುಲಿ ದಾಳಿಯಿಂದ ಹಸು ಬಲಿಯಾಗಿರುವುದನ್ನು ಕಂಡು ಭಯಭೀತರಾಗಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಪಾಲಿಬೆಟ್ಟ ಸುತ್ತಮುತ್ತಲ ವ್ಯಾಪ್ತಿಯಲ್ಲಿ ಕಾಣಿಸಿಕೊಳ್ಳುತ್ತಿರುವ ಹುಲಿ ಹಲವು ಜಾನುವಾರುಗಳನ್ನು ಬಲಿತೆಗೆದುಕೊಂಡ ಘಟನೆಯೂ ನಡೆದಿದೆ.

ಸ್ಥಳಕ್ಕೆ ವಲಯ ಅರಣ್ಯಾಧಿಕಾರಿ ಕಳ್ಳಿರ ದೇವಯ್ಯ, ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಹುಲಿಯ ಚಲನವಲನ ಪತ್ತೆಹಚ್ಚಲು ಕ್ಯಾಮೆರಾ ಅಳವಡಿಸಲಾಗುವುದು ಎಂದು ತಿಳಿಸಿದ್ದಾರೆ.

ಹುಲಿಯ ಹೆಜ್ಜೆ ಗುರುತು ಹಾಗೂ ಚಲನವಲನ ಗಮನಿಸಲು ಆರ್‌ಆರ್‌ಟಿ ತಂಡ ತೋಟದಲ್ಲೇ ಬೀಡು ಬಿಟ್ಟಿದ್ದು ತೋಟದಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರಿಗೆ ತೋಟದ ಮಾಲೀಕರೇ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮೂರನೇ ಬಾರಿ ಕಾಣಿಸಿಕೊಳ್ಳುತ್ತಿರುವ ಹುಲಿಯನ್ನು ಸೆರೆ ಹಿಡಿಯಬೇಕೆಂದು ಸ್ಥಳದಲ್ಲಿ ಜಮಾಯಿಸಿದ ಕಾರ್ಮಿಕರು ಅರಣ್ಯ ಇಲಾಖೆಯವರನ್ನು ಒತ್ತಾಯಿಸಿದ್ದಾರೆ.

ನಿರಂತರ ಕಾಡುಪ್ರಾಣಿಗಳ ಹಾವಳಿಯಿಂದ ನೆಮ್ಮದಿಯಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಶಾಶ್ವತವಾಗಿ ಕಾಡಾನೆ ಹುಲಿ ಚಿರತೆ ಹಾವಳಿಯನ್ನು ತಪ್ಪಿಸಬೇಕೆಂದು ಗ್ರಾಮ ಪಂಚಾಯ್ತಿ ಸದಸ್ಯೆ ಲಕ್ಷ್ಮಿ ಮನವಿ ಮಾಡಿದ್ದಾರೆ. ಈ ಸಂದರ್ಭ ಉಪ ವಲಯ ಅರಣ್ಯಾಧಿಕಾರಿ ಸಂಜೀತ್ ಸೋಮಯ್ಯ, ಅರಣ್ಯ ರಕ್ಷಕ ಅರುಣಾ, ಗ್ರಾಪಂ ಸದಸ್ಯೆ ಲಕ್ಷ್ಮಿ, ಸ್ಥಳೀಯರಾದ ರವಿ, ರತ್ನವೇಲ್ ಮತ್ತಿತರರು ಹಾಜರಿದ್ದರು.

ಕಿಟಕಿ ಬಾಗಿಲುಗಳು ಅಲುಗಾಡಿದವು

ಭೂಕಂಪನದ ಬಗ್ಗೆ ಆತಂಕ ವ್ಯಕ್ತಪಡಿಸಿದ ನಿವಾಸಿಗಳು

ಸೋಮವಾರಪೇಟೆ, ಜೂ.23– ತಾಲೂಕಿನ ಬಹುತೇಕ ಕಡೆ ಗುರುವಾರ ಭೂಮಿ ಕಂಪಿಸಿದ ಅನುಭವವಾಗಿದ್ದು, ಜನರು ಭಯಭೀತಗೊಂಡಿದ್ದಾರೆ.

ಪಟ್ಟಣದ ರೇಂಜರ್ಸ್ ಬಡಾವಣೆ, ನೇಗಳ್ಳೆ, ಹಿರಿಕರ ಗ್ರಾಮ ಸೇರಿದಂತೆ ಹಲವೆಡೆ ಗುರುವಾರ ಬೆಳಗ್ಗಿನ ಜಾವ 4.38ಕ್ಕೆ ಭೂಮಿ 2ರಿಂದ 3 ಸೆಕೆಂಡ್ ಕಾಲ ಕಂಪಿಸಿತು ಎಂದು ಹಲವರು ತಮಗಾದ ಅನುಭವವನ್ನು ಹಂಚಿಕೊಂಡಿದ್ದಾರೆ. ರೇಂಜರ್ಸ್ ಬ್ಲಾಕ್ ನಿವಾಸಿ ಶರ್ಮಿಳಾ ರಮೇಶ್, ಮುಂಜಾನೆ 4-38ರ ಸಮಯದಲ್ಲಿ ಭೂಮಿ ಒಳಗಡೆಯಿಂದ ಶಬ್ಧವಾಯಿತು. ಕಿಟಕಿ ಬಾಗಿಲುಗಳು ಅಲುಗಾಡಿದವು ಎಂದು ತಿಳಿಸಿದರು.

ಇದು ಭೂಕಂಪ ಅಲ್ಲ. ಮಳೆಯ ಸಂದರ್ಭ ಭೂಮಿ ಸಡಿಲಗೊಂಡು ಆಗಿರುವುದರಿಂದ ಉಂಟಾಗುವ ಸಹಜ ಪ್ರಕ್ರಿಯೆ ಎಂದು ರಾಜ್ಯ ಕಂದಾಯ ಇಲಾಖೆ ಸ್ಪಷ್ಟನೆ ನೀಡಿದೆ.

ಹಾರಂಗಿ ಜಲಾಶಯದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮಹೇಂದ್ರ ಕುಮಾರ್ ಮಾತನಾಡಿ, ಜಲಾಶಯದ ಆವರಣದಲ್ಲಿರುವ ಸಿಸ್ಮೋಮೀಟರ್‌ನಲ್ಲಿ ಭೂ ಕಂಪನವಾಗಿರುವ ಬಗ್ಗೆ ದಾಖಲಾಗಿಲ್ಲ. ರಿಕ್ಟರ್ ಮಾಪಕದಲ್ಲಿ 2ಕ್ಕಿಂತಲೂ ಕಡಿಮೆ ಕಂಪನಗಳಾಗಿದ್ದಲ್ಲಿ ಅದು ದಾಖಲಾಗುವುದಿಲ್ಲ ಎಂದರು. 2013–14ರಲ್ಲಿ ಜೂನ್ ತಿಂಗಳ ಮಳೆಗಾಲದಲ್ಲಿ ಇಲ್ಲಿನ ರೇಂಜರ್ಸ್ ಬಡಾವಣೆ ಹಾಗೂ ಜನತಾ ಕಾಲೋನಿಯಲ್ಲಿ ಬೃಹತ್ ಶಬ್ದ ಉಂಟಾಗುತ್ತಿತ್ತು.



ನಾಂಗಾಲ ಗ್ರಾಮದಲ್ಲಿ ಗಗನ್‌ಗೆ ಕಾಳಿಂಗಸರ್ಪ ಸೆರೆ

ನಾಪೋಕ್ಲು, ಜೂ.23(ದುಗ್ಗಳ)– ಉರಗ ತಜ್ಞ ಪೊನ್ನೀರ ಗಗನ್ ಮಂಗಳವಾರ ನಾಂಗಾಲ ಗ್ರಾಮದ ಎಚ್.ಕೆ. ದೀಪು ಎಂಬವರ ಮನೆಯ ಬಳಿ ಸುಮಾರು 12 ಅಡಿ ಉದ್ದದ ಕಾಳಿಂಗಸರ್ಪವನ್ನು ಹಿಡಿದಿದ್ದಾರೆ.

ಇವರು ಇದುವರೆಗೂ ಸುಮಾರು 6700ಕ್ಕೂ ಅಧಿಕ ಹಾವುಗಳನ್ನು ಹಿಡಿದು ರಕ್ಷಿಸಿದ್ದಾರೆ. ಹಾವುಗಳು ಯಾರನ್ನು ಅನವಶ್ಯಕವಾಗಿ ಕಚ್ಚಿದ ಉದಾಹರಣೆ ಇಲ್ಲ. ಬದಲಾಗಿ ಅದಕ್ಕೆ ನೋವಾದಾಗ ತನ್ನ ಆತ್ಮರಕ್ಷಣೆಗಾಗಿ ಮಾತ್ರ ಅದು ಮನುಷ್ಯನನ್ನು ಕಚ್ಚುತ್ತದೆ. ಎಲ್ಲೇ ಹಾವು ಕಂಡರೂ ಅದನ್ನು ಕೊಲ್ಲಬೇಡಿ ಎನ್ನುವ ಗಗನ್ ತಮ್ಮನ್ನು 9945102695 ರ ಮೂಲಕ ಸಂಪರ್ಕಿಸಲು ಕೋರಿದ್ದಾರೆ.

ಒಂದನೇ ಪುಟದಿಂದ

ಮೀಸಲಾತಿ ಪ್ರಕಟ ಸಾಧ್ಯತೆ

2021ರ ಫೆಬ್ರವರಿ 24ರಂದು ನಡೆದ ಚುನಾವಣೆಯಲ್ಲಿ ಜೆಡಿಎಸ್‌ನ ರುಕ್ಮಿಣಿ ಮಾದೇಗೌಡ ಮೇಯರ್ ಆಗಿ ಮತ್ತು ಕಾಂಗ್ರೆಸ್‌ನ ಅನ್ವರ್ ಬೇಗ್ ಉಪಮೇಯರ್ ಆಗಿ ಆಯ್ಕೆಯಾಗಿದ್ದರು. ಚುನಾವಣಾ ಆಯೋಗಕ್ಕೆ ತಪ್ಪು ಮಾಹಿತಿ ನೀಡಿದ್ದ ಕಾರಣಕ್ಕೆ ರುಕ್ಮಿಣಿ ಮಾದೇಗೌಡರ ಪಾಲಿಕೆ ಸದಸ್ಯತ್ವ ರದ್ದಾದ್ದರಿಂದ ಅವರು ಮೇಯರ್ ಸ್ಥಾನ ಕಳೆದುಕೊಂಡಿದ್ದರು. ನಂತರ 2021ರ ಆಗಸ್ಟ್ ಮಾಹೆಯಲ್ಲಿ ನಡೆದ ಮೇಯರ್ ಚುನಾವಣೆಯಲ್ಲಿ ಬಿಜೆಪಿಯ ಸುನಂದ ಪಾಲನೇತ್ರ ಆಯ್ಕೆಯಾದರು. ಅದರಂತೆ ಈಗ ಅಧಿಕಾರಾವಧಿ ಅಂತ್ಯವಾದರೂ ಮೀಸಲಾತಿ ನಿಗದಿಯಾಗದ ಕಾರಣ ಅವರು ಪ್ರಭಾರ ಮೇಯರ್ ಆಗಿ ಕಳೆದ ನಾಲ್ಕು ತಿಂಗಳಿಂದ ಮುಂದುವರಿಯಲು ಅವಕಾಶ ಸಿಕ್ಕಿದೆ.

ಹೆಚ್ಚುವರಿ ಅಧಿಕಾರಾವಧಿ; ಪ್ರಧಾನಿಯೊಂದಿಗೆ ವೇದಿಕೆ ಹಂಚಿಕೊಳ್ಳುವ ಅವಕಾಶ ದೇವರ ವರ

ಮೈಸೂರು: ಅವಧಿ ಮುಗಿದರೂ ಇನ್ನು ಮೇಯರ್ ಸ್ಥಾನದಲ್ಲಿದ್ದು, ಭಾರತದ ಮೋದಿ ಅವರನ್ನು ಸ್ವಾಗತಿಸುವ, ಅವರೊಂದಿಗೆ ವೇದಿಕೆ ಹಂಚಿಕೊಳ್ಳುವ ಅವಕಾಶ ಸಿಕ್ಕಿದ್ದು, ನನಗೆ ದೇವರು ಕೊಟ್ಟ ವರ ಎಂದು ಪ್ರಭಾರ ಮೇಯರ್ ಸುನಂದ ಪಾಲನೇತ್ರ ಸಂತಸ ಹಂಚಿಕೊಂಡಿದ್ದಾರೆ. ಮೇಯರ್ ಆದವರಿಗೆ ತಮ್ಮ ಅವಧಿಯಲ್ಲಿ ಕನಿಷ್ಠ ಮುಖ್ಯಮಂತ್ರಿಗಳನ್ನು ಭೇಟಿ ಮಾಡುವ ಅವಕಾಶವೂ ಸಿಗುವುದಿಲ್ಲ. ಆದರೆ ನನಗೆ ಹೆಚ್ಚುವರಿ ಅವಧಿಗೆ ಮೇಯರ್ ಆಗಿ ಮುಂದುವರಿಯುವ, ಈ ಅವಧಿಯಲ್ಲಿ ಮೋದಿ ಭೇಟಿ ಮಾಡುವ ಅವಕಾಶ ಸಿಕ್ಕಿದ್ದು 30 ವರ್ಷಗಳ ಕಾಲ ಪಕ್ಷಕ್ಕಾಗಿ ದುಡಿದಿದ್ದಕ್ಕೆ ಆ ದೇವರೇ ಕೊಟ್ಟ ವರ ಎಂದು ಭಾವಿಸಿದ್ದೇನೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸುನಂದಾ ಪಾಲನೇತ್ರ ಧನ್ಯತೆ



ಪಕ್ಷಕ್ಕಾಗಿ ಸುದೀರ್ಘ ಕಾಲ ನನ್ನಂತೆ ದುಡಿದಿದ್ದರೆ ಬೇರೆಯವರು ಎಂಎಲ್‌ಎ, ಎಂಪಿ, ಮಿನಿಸ್ಟರ್ ಆಗುತ್ತಿದ್ದರು. ಆದರೆ ನಾನು ಯಾವುದೇ ಅಧಿಕಾರಕ್ಕೆ ಆಸೆ ಪಡದೆ ಸಾರ್ವಜನಿಕ ಸೇವೆ ಮಾಡಿದ್ದರ ಫಲವಾಗಿ ಕೊನೆಗೆ ಈ ಸ್ಥಾನ ಲಭಿಸಿದೆ. ಸರ್ಕಾರ ಈ ಕ್ಷಣದಲ್ಲಿ ಮೀಸಲಾತಿ ಪ್ರಕಟಿಸಿದರೂ, ಮೇಯರ್ ಸ್ಥಾನ ಬಿಟ್ಟು ಕೊಡುತ್ತೇನೆ. ಕುರ್ಚಿಯಲ್ಲಿ ಅಂಟಿಕೊಂಡು ಕೂರುವ ಜಾಯಮಾನ ನನ್ನದಲ್ಲ ಎಂದು ಸುನಂದ ಪಾಲನೇತ್ರ ನುಡಿದರು.

'ಮಹಾ' ಬಂಡಾಯ

ತಾಳಿದೆಯಾದರೂ ಮಾಜಿ ಸಿಎಂ ದೇವೇಂದ್ರ ಫಡ್ನವೀಸ್ ಅವರ ನಿವಾಸದಲ್ಲಿ ತಂತ್ರಗಾರಿಕೆ ನಡೆಯುತ್ತಿದೆ ಎಂದು ಹೇಳಲಾಗಿದೆ. ಮಹಾರಾಷ್ಟ್ರದಲ್ಲಿ ಶಿವಸೇನೆ ಮುಖ್ಯಮಂತ್ರಿಯೇ ಇರಬೇಕು. ಅದಕ್ಕಾಗಿ ತಾನು ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಡುವುದಾಗಿ ಉದ್ಧವ್ ಠಾಕ್ರೆ ತಿಳಿಸಿದ್ದಾರೆ. ಮತ್ತೊಂದೆಡೆ ಎನ್‌ಸಿಪಿ ಮುಖ್ಯಸ್ಥ ಶರತ್ ಪವಾರ್ ಅವರು ಏಕನಾಥ್ ಶಿಂಧೆ ಅವರಿಗೆ ಅಘಾಡಿ ಮೈತ್ರಿಕೂಟದಲ್ಲಿ ಮುಖ್ಯಮಂತ್ರಿ ಸ್ಥಾನ ನೀಡಲಾಗುವುದು ಎಂದು ಸಂದೇಶ ಕಳುಹಿಸಿದ್ದು ಕೂಡ ವ್ಯರ್ಥವಾಗಿದೆ.

ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಮತ್ತು ಶಿವಸೇನೆ ಮೈತ್ರಿಯಾಗಿ ಸ್ಪರ್ಧಿಸಿತ್ತು. ಫಲಿತಾಂಶ ಬಂದ ನಂತರ ಮುಖ್ಯಮಂತ್ರಿ ಪಟ್ಟಕ್ಕಾಗಿ ಬಿಜೆಪಿ ಪಟ್ಟು ಹಿಡಿದ ಕಾರಣ ಶಿವಸೇನೆಯ ಉದ್ಧವ್ ಠಾಕ್ರೆ ಎನ್‌ಸಿಪಿ ಮತ್ತು ಕಾಂಗ್ರೆಸ್ ಒಳಗೊಂಡಂತೆ ಅಘಾಡಿ ಮೈತ್ರಿಕೂಟದಲ್ಲಿ ಸೇರಿ ಮುಖ್ಯಮಂತ್ರಿಯಾದರು. ಬದಲಾದ ಇಂದಿನ ರಾಜಕಾರಣದಲ್ಲಿ ಶಿವಸೇನೆ ಬಂಡಾಯ ಶಾಸಕರು ಹಿಂದುತ್ವ ತತ್ವದ ಹೆಸರಿನಲ್ಲಿ ಬಿಜೆಪಿ ಜೊತೆ ಸೇರುವ ಬಗ್ಗೆ ಮಾತನಾಡುತ್ತಿದ್ದಾರೆಯಾದರೂ, ಶಿವಸೇನಾ ಮುಖ್ಯಮಂತ್ರಿಯೇ ಇರಬೇಕು ಎಂಬುದು ಹಲವು ಶಾಸಕರ ಅಭಿಪ್ರಾಯ ಎನ್ನಲಾಗಿದೆ. ಶಿವಸೇನೆ ಬಂಡಾಯ ಶಾಸಕರನ್ನು ಸೆಳೆದು ಸರ್ಕಾರ ರಚಿಸುವ ಚಿಂತನೆ ಬಿಜೆಪಿ ಇದೆಯಾದರೂ ಮುಖ್ಯಮಂತ್ರಿ ಸ್ಥಾನಕ್ಕೆ ಬಹುತೇಕ ಬಂಡಾಯ ಶಾಸಕರು ಒತ್ತಾಯಿಸುತ್ತಿರುವ ಕಾರಣ ಬಿಜೆಪಿ ಮೌನ ವಹಿಸಿದೆ ಎಂದು ಹೇಳಲಾಗಿದೆ.

10 ಸ್ಥಾನ ಗೆಲ್ಲಲೇಬೇಕು...

ಉದ್ಘಾಟಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಅನೀತಿ, ಮಿತಿ ಮೀರಿದ ಭ್ರಷ್ಟಾಚಾರ, ಅಗತ್ಯ ವಸ್ತುಗಳ ಬೆಲೆ ಏರಿಕೆ, ಪಠ್ಯಕ್ರಮದಲ್ಲಿ ಮಹನೀಯರಿಗೆ ಮಾಡಿದ ಅಪಮಾನ ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮೇಲೆ ಜನರು ಅಸಮಾಧಾನಗೊಂಡಿದ್ದಾರೆ. ಅಲ್ಲದೆ, ಈ ಹಿಂದೆ ಕಾಂಗ್ರೆಸ್ ಸರ್ಕಾರ ನೀಡಿದ ಯೋಜನೆಗಳು, ಕಾರ್ಯಕ್ರಮಗಳ ಬಗ್ಗೆ ವ್ಯಾಪಕ ಮೆಚ್ಚುಗೆ ಇದೆ. ಈ ಎಲ್ಲಾ ಅಂಶ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ವರದಾನವಾಗಿ ಪರಿಣಮಿಸಲಿದೆ. ಅದಕ್ಕಾಗಿ ಪಕ್ಷದ ಕಾರ್ಯಕರ್ತರು ಸಜ್ಜಾಗಬೇಕು ಎಂದರು.

ಮುಂಬರುವ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯ 11 ಕ್ಷೇತ್ರಗಳಲ್ಲಿ 10ರಲ್ಲಿ ಕಾಂಗ್ರೆಸ್ ಗೆಲ್ಲಲೇಬೇಕು. ಆದ್ದರಿಂದ ನಾವು ಜನರ ಬಳಿಗೆ ಹೋಗುವ ಕಾರ್ಯ ಮಾಡಬೇಕು. ಜನರಿಗೆ ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ಸರ್ಕಾರದ ವೈಫಲ್ಯವನ್ನು ತಿಳಿಸಬೇಕು. ಜತೆಗೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಆದ ಜನಪರ ಯೋಜನೆಗಳನ್ನು ತಿಳಿಸುವ ಕಾರ್ಯವನ್ನೂ ಮಾಡಬೇಕು. ಆ ಮೂಲಕ ಕಾಂಗ್ರೆಸ್ ಪರವಾದ ಅಭಿಪ್ರಾಯ ಮೂಡಿಸಬೇಕು. ಜನರ ಜಾಗೃತಗೊಳಿಸಿದರೆ 100ಕ್ಕೆ ನೂರು ಕಾಂಗ್ರೆಸ್ ಪಕ್ಷ 2023ರಲ್ಲಿ ಅಧಿಕಾರಕ್ಕೆ ಬಂದೇ ಬರುತ್ತದೆ. ರಾಜ್ಯದಲ್ಲಿ ಕಾಂಗ್ರೆಸ್ ಪರವಾದ ವಾತಾವರಣ ನಿರ್ಮಾಣವಾಗಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಕಾರ್ಯಕರ್ತರು ಸಂಘಟಿತರಾಗಿ ಪಕ್ಷ ಸಂಘಟನೆ ಮಾಡಿದರೆ ಗೆಲುವು ಸಾಧಿಸಬಹುದು ಎನ್ನುವುದಕ್ಕೆ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯೇ ಸಾಕ್ಷಿ. ಕಳೆದ ಬಾರಿ ಈ ಕ್ಷೇತ್ರದಲ್ಲಿ ಜೆಡಿಎಸ್ ಗೆಲುವು ಸಾಧಿಸಿತ್ತು. ಆದರೆ, ಈ ಬಾರಿ ಜೆಡಿಎಸ್ 3ನೇ ಸ್ಥಾನಕ್ಕೆ ಹೋಗಿದೆ. ಮೈಸೂರು ಭಾಗದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆ ಸಾಮಾನ್ಯವಾಗಿ ಹೋರಾಟ ನಡೆಯುತ್ತದೆ. ಅಂಥ ಜಾಗದಲ್ಲಿ ಜೆಡಿಎಸ್ ಮೂರನೇ ಸ್ಥಾನಕ್ಕೆ ಹೋಗಿದೆ. ಹಾಗಾಗಿ ಕಾಂಗ್ರೆಸ್‌ಗೆ ಉತ್ತಮ ವಾತಾವರಣ ನಿರ್ಮಾಣವಾಗಿದೆ. ಪಕ್ಷದ ಎಲ್ಲ ಮುಖಂಡರು, ಕಾರ್ಯಕರ್ತರು ಒಗ್ಗಟ್ಟಿನಿಂದ, ಪ್ರಾಮಾಣಿಕತೆಯಿಂದ ಪಕ್ಷದ ಗೆಲುವಿಗೆ ಶ್ರಮಿಸಿದರೆ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಇನ್ನಷ್ಟು ಗಟ್ಟಿಗೊಳಿಸಲು, ಸಂಘಟಿಸಲು ರಾಜಕೀಯ ಸಮಿತಿ, ಸಾಮಾಜಿಕ ಸಮಿತಿ, ರೈತ ಸಮಿತಿ ಸೇರಿದಂತೆ 7 ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳ ವರದಿಯನ್ನು ಕಿರುಹೊತ್ತಿಗೆ ಮೂಲಕ ಹೊರ ತರಲಾಗುವುದು. ಕಿರುಹೊತ್ತಿಗೆಯನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಕಾರ್ಯ ಮಾಡಲಾಗುವುದು. ಪಕ್ಷದ ಕಾರ್ಯಕರ್ತರು, ಮುಖಂಡರು ಪಕ್ಷ ಚಟುವಟಿಕೆಗೆ ಹೆಚ್ಚಿನ ಸಮಯವನ್ನು ನೀಡಬೇಕು ಎಂದರು.

ಕೆಲ ರಸ್ತೆಗಳು ಅಭಿವೃದ್ಧಿಗೊಂಡವು!

ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ವಿರುದ್ಧ ಇದುವರೆಗೆ ಎಫ್‌ಐಆರ್ ದಾಖಲಾಗಿಲ್ಲ. ಒಂದು ವೇಳೆ ಎಫ್‌ಐಆರ್ ಆಗಿದ್ದರೆ ಅದರ ಪ್ರತಿಯನ್ನು ನೀಡಬೇಕಾಗಿತ್ತಲ್ಲ? ಈ ಹಿಂದೆ ಇಡಿ ತನಿಖೆ ಮಾಡಿ ಏನು ಇಲ್ಲ ಎಂದು ವರದಿ ನೀಡಿದ್ದಾರೆ. ಆದರೆ, ಪುನಃ ಆ ಪ್ರಕರಣವನ್ನು ರೀ ಓಪನ್ ಮಾಡಿ ಸೋನಿಯಾಗಾಂಧಿ, ರಾಹುಲ್ ಗಾಂಧಿ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಕಾರ್ಯ ಮಾಡುತ್ತಿದ್ದಾರೆ. ಬಿಜೆಪಿ ಇಡಿಯನ್ನು ಎಲ್ಲರ ಮೇಲೆ ಛೂ ಬಿಡುತ್ತಿದ್ದಾರೆ. ಅದರಿಂದ ಅವರು ರಾಜಕೀಯವಾಗಿ ಬಲಿಷ್ಠರಾಗುತ್ತೇವೆ ಅಂದುಕೊಂಡಿದ್ದಾರೆ. ಆದರೆ, ದೇಶದ ಪ್ರಜಾಪ್ರಭುತ್ವಕ್ಕೆ ಹೊಡೆತ ಬೀಳುವ ಸಂದರ್ಭಗಳಲ್ಲಿ ಈ ದೇಶದ ಜನತೆ ಆ ಸರ್ಕಾರದ ವಿರುದ್ಧ ತೀರ್ಪು ನೀಡಿದ್ದಾರೆ ಎಂದು ಹೇಳಿದರು.

ನಗದು, ಚಿನ್ನಾಭರಣ ಕಳವು

4 ಗಂಟೆ ವೇಳೆಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಸ್ಥಳಕ್ಕೆ ಧಾವಿಸಿದ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಷಣ್ಮುಗ ವರ್ಮ ಹಾಗೂ ಸಿಬ್ಬಂದಿ, ಮಹಜರು ನಡೆಸಿ, ಆರೋಪಿಗಳ ಪತ್ತೆ ಕಾರ್ಯಾಚರಣೆ ಆರಂಭಿಸಿದ್ದಾರೆ. ಸುಳಿವಿನ ಜಾಡು ಹಿಡಿದು ಕಾರ್ಯೋನ್ಮುಖರಾದ ಪೊಲೀಸರು, ಬೆಂಗಳೂರಿಗೆ ಪಲಾಯನವಾಗುತ್ತಿದ್ದ ನಾಲ್ವರನ್ನೂ ಅದೇ ದಿನ ರಾತ್ರಿ 7 ಗಂಟೆ ವೇಳೆಗೆ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತರಿಂದ ದೋಚಿದ್ದ ನಗದು, ಬೆಳ್ಳಿ ಆಭರಣ ವಶಪಡಿಸಿಕೊಂಡಿರುವ ಪೊಲೀಸರು, ತೀವ್ರ ವಿಚಾರಣೆ ನಡೆಸಿದಾಗ ಕೆಲಸವಿಲ್ಲದ ಕಾರಣ ಖರ್ಚಿಗಾಗಿ ಈ ವೃತ್ತಿಗಿಳಿದಿರುವುದಾಗಿ ಖದೀಮರು ಬಾಯಿ ಬಿಟ್ಟಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಕುವೆಂಪನಗರ ಠಾಣೆ ಪೊಲೀಸರು, ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರ ಮಾರ್ಗದರ್ಶನದಲ್ಲಿ ಡಿಸಿಪಿ ಎಂ.ಎಸ್. ಗೀತಾ ಪ್ರಸನ್ನ ಅವರ ಮೇಲ್ವಿಚಾರಣೆಯೊಂದಿಗೆ ಕೆಆರ್ ಉಪ ವಿಭಾಗದ ಎಸಿಪಿ ಪೂರ್ಣಚಂದ್ರ ತೇಜಸ್ವಿ ಅವರ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ಇನ್ಸ್‌ಪೆಕ್ಟರ್ ಷಣ್ಮುಗ ವರ್ಮ, ಸಬ್‌ಇನ್ಸ್‌ಪೆಕ್ಟರ್‌ಗಳಾದ ರಾಧ, ಗೋಪಾಲಸ್ವಾಮಿ, ಎಎಸ್‌ಐ ಮುರಳೀಗೌಡ, ಸಿಬ್ಬಂದಿಗಳಾದ ಮಂಜುನಾಥ, ಪುಟ್ಟಪ್ಪ, ಹರ್ಷವರ್ಧನ್, ಹಜರತ್, ಯೋಗೇಶ್, ಕುಮಾರ್, ನಾಗೇಶ್ ಹಾಗೂ ಚೆನ್ನಪ್ಪ ಭಾಗವಹಿಸಿದ್ದರು.

ದೌರ್ಜನ್ಯ ತಡೆ ಕಾಯ್ದೆ ಅನ್ವಯ

ಮಂಗಳೂರಿನ ರಿತೇಶ್ ಪಯಾಸ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕ ಸದಸ್ಯ ಪೀಠ ಈ ಆದೇಶ ನೀಡಿದೆ. 2020ರಲ್ಲಿ ಈ ಪ್ರಕರಣ ನಡೆದಿತ್ತು. ನೆಲಮಹಡಿ ಸಾರ್ವಜನಿಕ ವೀಕ್ಷಣೆಯ ಸ್ಥಳವಲ್ಲ. ಹೀಗಾಗಿ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಸೆ. 3(1)(ಆರ್)(ಎಸ್)(ವಿಎ) ಅನ್ವಯವಾಗುವುದಿಲ್ಲ ಎಂದು ಹೇಳಿರುವ ಕೋರ್ಟ್ ಜಾತಿ ನಿಂದನೆ ಮಾಡಿದ್ದಾರೆಂದು ಆರೋಪಿ ರಿತೇಶ್ ಪಯಾಸ್ ವಿರುದ್ಧ ಹೂಡಿದ್ದ ಅಟ್ರಾಸಿಟಿ ಪ್ರಕರಣವನ್ನು ರದ್ದುಪಡಿಸಿದೆ. ರಿತೇಶ್ ಪಯಾಸ್ ಮತ್ತು ಜಯಕುಮಾರ್ ನಾಯರ್ ನಡುವೆ ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯವಿತ್ತು. ನಾಯರ್ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದ ಮೋಹನ್ ಎಂಬಾತ ತಮ್ಮನ್ನು ಜಾತಿನಿಂದನೆ ಮಾಡಿದ್ದಾರೆ ಎಂದು ದೂರು ನೀಡಿದ್ದರು.

ಮಹಾರಾಷ್ಟ್ರದಲ್ಲಿ ಬಿಜೆಪಿ ಮೇಲಾಟಕ್ಕೆ ವಿಪಕ್ಷ ನಾಯಕ ಸಿದ್ದರಾಮಯ್ಯ ಆಕ್ರೋಶ



- ಆಪರೇಷನ್ ಕಮಲದ ಮೂಲಕ ಬಿಜೆಪಿಯಿಂದ ಸಂವಿಧಾನ, ಪ್ರಜಾಪ್ರಭುತ್ವಕ್ಕೆ ದ್ರೋಹ
- ಪಕ್ಷಾಂತರ ನಿಷೇಧ ಕಾಯಿದೆಗೆ ತಿದ್ದುಪಡಿ ತರದಿದ್ದರೆ ಚುನಾಯಿತ ಸರ್ಕಾರಕ್ಕೆ ಉಳಿಗಾಲವಿಲ್ಲ

ಮೈಸೂರು,ಜೂ.23(ಎಂಟಿವೈ)– ಪ್ರಜಾಪ್ರಭುತ್ವದ ವ್ಯವಸ್ಥೆಗೆ ಮಾರಕವಾದ ಬೆಳವಣಿಗೆ ಮಹಾರಾಷ್ಟ್ರದಲ್ಲಿ ನಡೆಯುತ್ತಿದ್ದು, 40 ಶಾಸಕರನ್ನು ಆಪರೇಷನ್ ಕಮಲದ ಮೂಲಕ ಖರೀದಿಸಿ ಸಂವಿಧಾನ ಹಾಗೂ ಪ್ರಜಾಪ್ರಭುತ್ವಕ್ಕೆ ದ್ರೋಹ ಬಗೆಯಲಾಗುತ್ತಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಮೈಸೂರು–ಟಿ.ನರಸೀಪುರ ಮುಖ್ಯ ರಸ್ತೆಯ ವರಕೋಡು ಗೇಟ್ ಬಳಿ ಗುರುವಾರ ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ 'ನವ ಸಂಕಲ್ಪ ಚಿಂತನಾ ಶಿಬಿರ'ದಲ್ಲಿ ಪಾಲ್ಗೊಳ್ಳುವ ಮುನ್ನ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಆಪರೇಷನ್ ಕಮಲ ಎಂಬುವುದೇ ತಲೆ ತಗ್ಗಿಸುವ ವಿಚಾರ. ಈ ಪದ್ಧತಿಯ ಜನಕರು ಬಿಜೆಪಿಯವರು. ರಾಜ್ಯದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆಪರೇಷನ್ ಕಮಲ ಪ್ರಾರಂಭಿಸಿದರು. ಇದೀಗ ದೇಶವ್ಯಾಪಿ ನಡೆಯುತ್ತಿದೆ. ಇಂತಹ ಚಟುವಟಿಕೆಗೆ ಪ್ರಚೋದನೆ ನೀಡಬಾರದು. ಸ್ವಯಂ ಪ್ರೇರಿತರಾಗಿ ಪಕ್ಷ ತೊರೆಯುವುದರಲ್ಲಿ ತಪ್ಪೇನು ಇಲ್ಲ. ಆದರೆ, ಹಣ ನೀಡಿ ಶಾಸಕರನ್ನು ಖರೀದಿಸುವುದು ಪ್ರಜಾಪ್ರಭುತ್ವ ವಿರೋಧಿ ಬೆಳವಣಿಗೆ. ಗುಜರಾತ್, ಮಧ್ಯಪ್ರದೇಶ ಸೇರಿದಂತೆ ವಿವಿಧೆಡೆ ಆಪರೇಷನ್ ಕಮಲ ನಡೆದಿದೆ. ರಾಜಸ್ಥಾನದಲ್ಲಿ ಈಗಲೂ ಪ್ರಯತ್ನ ನಡೆಯುತ್ತಿದೆ. ಇಂತಹ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡಿದರೆ ಪ್ರಜಾಪ್ರಭುತ್ವ ಉಳಿಯುವುದಿಲ್ಲ ಎಂದು ವಿಷಾದಿಸಿದರು.

ಭ್ರಷ್ಟಾಚಾರದ ಹಣ ಬಳಕೆ: ಮಹಾರಾಷ್ಟ್ರದಲ್ಲಿ ಯಾವುದೇ ಪಕ್ಷಗಳಿಗೂ ಸ್ಪಷ್ಟ ಬಹುಮತ ಇಲ್ಲ. ಅಲ್ಲಿ ಬಿಜೆಪಿಗೆ ಜನರು ಆಶೀರ್ವಾದ ಮಾಡಿರಲಿಲ್ಲ. ಅಧಿಕಾರ ಹಿಡಿಯಲು 144 ಸ್ಥಾನ ಬೇಕಾಗಿತ್ತು. ಆದರೆ, ಬಿಜೆಪಿ ಪಡೆದಿದ್ದು 104 ಸ್ಥಾನ. ಈ 40 ಶಾಸಕರನ್ನು ಹಣ ನೀಡಿ ಖರೀದಿಸುತ್ತಿದ್ದಾರೆ. ಈ ಹಣ ಎಲ್ಲಿಂದ ಬಂತು ಅವರಿಗೆ 25ರಿಂದ 40 ಕೋಟಿ ರೂ. ವರೆಗೆ ಹಣ ನೀಡುತ್ತಿದ್ದಾರೆ. ಭ್ರಷ್ಟಾಚಾರ ನಡೆಸದೆ ಇಷ್ಟೊಂದು ಹಣ ಎಲ್ಲಿಂದ ತರಲು ಸಾಧ್ಯ. ಬಿಜೆಪಿಯಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿದ್ದು, ಆ ಹಣದಿಂದಲೇ ಆಪರೇಷನ್ ಕಮಲ ನಡೆಸುತ್ತಿದ್ದಾರೆ. ಜನರ ತೀರ್ಪಿಗೆ ವಿರುದ್ಧವಾಗಿ ಬಿಜೆಪಿ ನಡೆದುಕೊಂಡರೆ ಮುಂದಿನ ಚುನಾವಣೆಯಲ್ಲಿ ಜನರು ಬಿಜೆಪಿಗೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಎಚ್ಚರಿಸಿದರು.

ಕಾಯ್ದೆಗೆ ತಿದ್ದುಪಡಿ ಅಗತ್ಯ: ಪಕ್ಷಾಂತರ ನಿಷೇಧ ಕಾಯ್ದೆಗೆ ತಿದ್ದುಪಡಿ ತರಲೇಬೇಕು. ಇಲ್ಲವಾದಲ್ಲಿ ಯಾವುದೇ ಚುನಾಯಿತ ಸರ್ಕಾರ ಉಳಿಯಲು ಸಾಧ್ಯವಿಲ್ಲ. ಒಂದು ಪಕ್ಷದಿಂದ ಗೆದ್ದವರು ಮತ್ತೊಂದು ಪಕ್ಷಕ್ಕೆ ಹೋಗಲು ಅವಕಾಶ ನೀಡದ ರೀತಿಯಲ್ಲಿ ಕಾಯ್ದೆಗೆ ತಿದ್ದುಪಡಿ ತರಬೇಕು. ಒಂದು ವೇಳೆ ರಾಜೀನಾಮೆ ನೀಡಿದರೆ 10 ವರ್ಷ ಚುನಾವಣೆಗೆ ನಿಲ್ಲಲು ಅವಕಾಶ ನೀಡಬಾರದು ಎಂಬ ನಿಯಮ ಜಾರಿಗೊಳಿಸಿದರೆ ಜನಪ್ರತಿನಿಧಿಗಳ ಖರೀದಿಗೆ ಬ್ರೇಕ್ ಬೀಳಬಹುದು ಎಂದು ಅಭಿಪ್ರಾಯಪಟ್ಟರು.

ಸಾಮಾಜಿಕ ನ್ಯಾಯವಾಗದು: ರಾಷ್ಟ್ರಪತಿ ಚುನಾವಣೆಯ ಬಿಜೆಪಿ ಅಭ್ಯರ್ಥಿ ದ್ರೌಪದಿ ಮುರ್ಮು ಬಿಜೆಪಿ ಕಾರ್ಯಕರ್ತೆ. ರಾಷ್ಟ್ರಪತಿಗಳಾಗಿ ಕಾರ್ಯನಿರ್ವಹಿಸಿದ ರಾಜೇಂದ್ರ ಪ್ರಸಾದ್, ರಾಧಾಕೃಷ್ಣನ್ ರೀತಿಯಲ್ಲಿ ಬಿಜೆಪಿ ನೇಮಕ ಮಾಡಿದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಕೆಲಸ ಮಾಡಿದ್ದಾರಾ? ಬಿಜೆಪಿ ಇಂಥವರನ್ನು ನಾಮಕಾವಸ್ಥೆಗೆ ತಂದು ಕೂರಿಸುತ್ತಾರೆ. ರಾಷ್ಟ್ರಪತಿ ಹುದ್ದೆಗೆ ಬುಡಕಟ್ಟು ಸಮುದಾಯಕ್ಕೆ ಸೇರಿದ ಬಿಜೆಪಿ ಕಾರ್ಯಕರ್ತೆಯನ್ನು ಆಯ್ಕೆ ಮಾಡುವುದು ಸಾಮಾಜಿಕ ನ್ಯಾಯವಲ್ಲ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಚಾಲಕ ಹುದ್ದೆಗೆ ಬುಡಕಟ್ಟು ಸಮುದಾಯದ ಮಹಿಳೆಯನ್ನು ನೇಮಕ ಮಾಡಿದರೆ ಅದು ಸಾಮಾಜಿಕ ನ್ಯಾಯ. ಅರಣ್ಯವಾಸಿ ಬುಡಕಟ್ಟು ಸಮುದಾಯದವರಿಗೆ ಅರಣ್ಯ ಹಕ್ಕು ಕಾಯ್ದೆಯಡಿ ಭೂಮಿ ನೀಡುವ ಕಾರ್ಯವನ್ನು ಕಾಂಗ್ರೆಸ್ ಸರ್ಕಾರ ಮಾಡಿತು. ಆದರೆ, ಬಿಜೆಪಿ ಕಾಯ್ದೆಯಡಿ ಬುಡಕಟ್ಟು ಸಮುದಾಯದವರಿಗೆ ಹಕ್ಕುಗಳನ್ನು ನೀಡಲು ಹಿಂದೇಟು ಹಾಕುತ್ತಿದೆ. ದಲಿತರು, ಹಿಂದುಳಿದ ವರ್ಗ, ಶೋಷಿತರ ಪರವಾಗಿ ಬಿಜೆಪಿ ಎಂದಿಗೂ ನಿಂತಿಲ್ಲ ಎಂದರು.

ಅಗ್ನಿಪಥ ಯೋಜನೆ ಅವೈಜ್ಞಾನಿಕ: ಅಗ್ನಿಪಥ ಯೋಜನೆಯಡಿ ಸೇನೆ ಸೇರುವವರು ಒಟ್ಟು ನಾಲ್ಕು ವರ್ಷ ಸೇನೆಯಲ್ಲಿ ಸೇವೆ ಸಲ್ಲಿಸುತ್ತಾರೆ. 6 ತಿಂಗಳು ತರಬೇತಿ ಅವಧಿ ಇರುತ್ತದೆ. ಇಷ್ಟೊಂದು ಕಡಿಮೆ ಅವಧಿಯ ತರಬೇತಿ ಪಡೆದವರು ಅತ್ಯಾಧುನಿಕ ಆಯುಧಗಳನ್ನು ಬಳಸಲು ಸಾಧ್ಯವೇ? ಕನಿಷ್ಠ ಮೂರು ವರ್ಷ ತರಬೇತಿ ಬೇಕು. 4 ವರ್ಷ ಕಳೆದ ನಂತರ ಏನು ಮಾಡಬೇಕು? ಇವರು 100 ಜನರನ್ನು ತೆಗೆದುಕೊಂಡರೆ 75 ಜನರನ್ನು ಮನೆಗೆ ಕಳುಹಿಸುತ್ತಾರೆ. ಅವರನ್ನು ಮಾಜಿ ಸೈನಿಕ ಎಂದು ಸಹ ಕರೆಯುವಂತಿಲ್ಲ. ಪೆನ್ಷನ್, ಗ್ರಾಚುಟಿ ಇಲ್ಲ. ಯಾವುದೇ ನಿವೃತ್ತಿ ಸೌಲಭ್ಯಗಳು ಸಹ ಇಲ್ಲ. ಇದು ಯುವಜನರ ಭವಿಷ್ಯ ಹಾಳು ಮಾಡುವ ಯೋಜನೆಯಾಗಿದೆ. 46 ಸಾವಿರ ಜನರನ್ನು ನೇಮಕ ಮಾಡಿಕೊಳ್ಳುವುದಾಗಿ ಹೇಳಿದ್ದಾರೆ. ಎರಡು ವರ್ಷಗಳಿಂದ ಸೇನೆಯಲ್ಲಿ ನೇಮಕಾತಿ ನಡೆದಿಲ್ಲ. ಒಟ್ಟು 1.20 ಲಕ್ಷ ಹುದ್ದೆಗಳು ಖಾಲಿ ಇವೆ. ಕನಿಷ್ಠ ಸೇವಾವಧಿ 12ರಿಂದ 15 ವರ್ಷ ಇರಬೇಕು.

ಸ್ಥಳೀಯ ಚುನಾವಣೆಯಲ್ಲಿ ಹಿಂದುಳಿದ ವರ್ಗಕ್ಕೆ ಮೀಸಲಾತಿ ಬೇಕು: ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಚುನಾವಣೆಯಲ್ಲಿ ಹಿಂದುಳಿದ ವರ್ಗಕ್ಕೆ ಮೀಸಲಾತಿ ನೀಡದೆ ಚುನಾವಣೆ ಮಾಡಬಾರದು ಎಂದು ಸರ್ಕಾರಕ್ಕೆ ನಾನು ಸಲಹೆ ನೀಡಿದ್ದೇನೆ. ಸರ್ಕಾರ ಕೂಡ ನನ್ನ ಸಲಹೆಯನ್ನು ಒಪ್ಪಿಕೊಂಡಿದೆ ಎಂದು ಹೇಳಿದರು.

ಕರ್ನಾಟಕದ ಬ್ಯಾಂಕ್‌ಗಳೇ ಟಾರ್ಗೆಟ್


ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದು 8 ವರ್ಷ ಆಗಿದೆ. ಈ ಅವಧಿಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕಾರ್ಪೋರೇಷನ್ ಬ್ಯಾಂಕ್, ವಿಜಯ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್‌ಗಳನ್ನು ಬೇರೆ ಬ್ಯಾಂಕ್‌ಗಳೊಂದಿಗೆ ವಿಲೀನ ಮಾಡಿದ್ದಾರೆ. ಇವೆಲ್ಲವೂ ಕರ್ನಾಟಕದ ಬ್ಯಾಂಕ್‌ಗಳಾಗಿದ್ದು, ಇವುಗಳನ್ನು ವಿಲೀನ ಮಾಡುವ ಮೂಲಕ ಮೋದಿ ಕನ್ನಡಿಗರಿಗೆ ದ್ರೋಹ ಬಗೆದಿದ್ದಾರೆ. ಈ ನಾಲ್ಕು ಬ್ಯಾಂಕ್‌ಗಳ ಒಟ್ಟು ಆಸ್ತಿ ಮೌಲ್ಯ 317 ಲಕ್ಷ ಕೋಟಿ ರೂ.ಗಳಾಗಿದ್ದು, 75 ಸಾವಿರ ಜನರು ಕೆಲಸ ಮಾಡುತ್ತಿದ್ದರು. ಅದರಲ್ಲಿ ಕನ್ನಡಿಗರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಇದೀಗ ಹೊಸ ನೇಮಕಾತಿ ಮಾಡುವ ಸಂದರ್ಭ ಕನ್ನಡಿಗರಿಗೆ ಆದ್ಯತೆ ನೀಡುತ್ತಾರಾ? ಇದು ಕನ್ನಡಿಗರಿಗೆ ಮೋದಿ ಮಾಡಿದ ದ್ರೋಹವಲ್ಲವೇ ಎಂದು ಪ್ರಶ್ನಿಸಿದರು.

ಡಬಲ್ ಇಂಜಿನ್ ಸರ್ಕಾರದಿಂದ ರಾಜ್ಯಕ್ಕೇನು ಕೊಡುಗೆ

ಮೈಸೂರು, ಜೂ.23– ಕೋವಿಡ್ ಸಂದರ್ಭ ರಾಜ್ಯಕ್ಕೆ ಆಕ್ಸಿಜನ್ ನೀಡಲು ಸಾಧ್ಯವಾಗದೆ ಇರುವವರು ಇದೀಗ ರಾಜ್ಯಕ್ಕೆ ಬಂದು ಅಭಿವೃದ್ಧಿ ಕುರಿತು ಮಾತನಾಡುತ್ತಿದ್ದಾರೆ. ಆಕ್ಸಿಜನ್ ನೀಡಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್‌ಗೆ ಹೋಗಿದ್ದು ಇದೇ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ತರಾಟೆಗೆ ತೆಗೆದುಕೊಂಡರು. ಇದರಿಂದ ಹಲವಾರು ಜನರು ಜೀವ ಕಳೆದುಕೊಳ್ಳುವಂತಾಯಿತು. ಇದಕ್ಕೆಲ್ಲ ನರೇಂದ್ರ ಮೋದಿ ಹೊಣೆ. ಪ್ರವಾಹ ಕಾಣಿಸಿಕೊಂಡಾಗ ರಾಜ್ಯದ ಜನರ ಸಮಸ್ಯೆ ಆಲಿಸಲು ಮೋದಿ ಬಂದಿದ್ದಾರೆಯೇ? ಡಬಲ್ ಇಂಜಿನ್ ಸರ್ಕಾರ ರಾಜ್ಯಕ್ಕೆ ನೀಡಿದ ಕೊಡುಗೆ ಏನೆಂಬುದನ್ನು ಹೇಳಲಿ. ರಾಜ್ಯಕ್ಕೆ ಪ್ರಧಾನಿ ಆಗಮಿಸಿದರೂ ರಾಜ್ಯ ಸರ್ಕಾರ ಯಾವುದೇ ಮನವಿಯನ್ನು ಪ್ರಧಾನಿಗೆ ನೀಡಿಲ್ಲ. ಮೋದಿ ರಾಜ್ಯಕ್ಕೆ ಯಾವುದೇ ಕೆಲಸ ಕಾರ್ಯಗಳನ್ನು ಮಾಡಿಕೊಡುವುದಿಲ್ಲ ಎಂದು ಗೊತ್ತಿದ್ದೇ ರಾಜ್ಯ ಸರ್ಕಾರ ಅವರಿಗೆ ಮನವಿ ಪತ್ರ ನೀಡಲಿಲ್ಲ ಎಂದು ಟೀಕಿಸಿದರು.

ಜಯದೇವ ಆಸ್ಪತ್ರೆಯಲ್ಲಿ ತೆರೆದ ಹೃದಯ ಚಿಕಿತ್ಸೆ ಇಲ್ಲದೆಯೇ ಕವಾಟ ಅಳವಡಿಕೆ

ಮೈಸೂರು,ಜೂ.23(ಎಂಟಿವೈ)– ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಮೊಟ್ಟ ಮೊದಲ ಬಾರಿಗೆ ನಾಲ್ವರು ಹೃದ್ರೋಗಿಗಳಿಗೆ ತೆರೆದ ಹೃದಯ ಚಿಕಿತ್ಸೆ ಇಲ್ಲದೆ ಕವಾಟವನ್ನು ಯಶಸ್ವಿಯಾಗಿ ಅಳವಡಿಸಲಾಗಿದೆ(ಟಿಎವಿಐ) ಎಂದು ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದ್ದಾರೆ.



ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆಗೆ ಗುರುವಾರ ಭೇಟಿ ನೀಡಿ, ಕವಾಟ ಅಳವಡಿಕೆ ಶಸ್ತ್ರಚಿಕಿತ್ಸೆಯನ್ನು ಖುದ್ದಾಗಿ ಪರಿಶೀಲಿಸಿದರಲ್ಲದೆ, ಚಿಕಿತ್ಸೆಗೆ ಒಳಗಾದವರ ಆರೋಗ್ಯ ವಿಚಾರಿಸಿದರು. ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇದುವರೆಗೆ ಹೃದಯದ ಎಡಭಾಗದಲ್ಲಿರುವ ಅಯೋರ್ಟಿಕ್ ಕಿರಿದಾದ ಕವಾಟ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳಿಗೆ (ಅಯೋರ್ಟಿಕ್ ಸ್ಟೆನೋಸಿಸ್) ತೆರೆದ ಹೃದಯ ಶಸ್ತ್ರಚಿಕಿತ್ಸೆ ಮೂಲಕ ಕವಾಟ ಬದಲಾಯಿಸಲಾಗುತ್ತಿತ್ತು. ಆದರೆ ಇದೀಗ ಶಸ್ತ್ರಚಿಕಿತ್ಸೆ ಇಲ್ಲದೆಯೇ ಕವಾಟ ಅಳವಡಿಸುವ ನೂತನ ವಿಧಾನದ ಚಿಕಿತ್ಸಾ ಪದ್ಧತಿ ಜಾರಿಯಲ್ಲಿದೆ. ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ ಹೃದ್ರೋಗಿಗಳಿಗೆ ತೆರೆದ ಹೃದಯ ಚಿಕಿತ್ಸೆ ಇಲ್ಲದೇ ಆಂಜಿಯೋಗ್ರಾಂ ತಂತ್ರಜ್ಞಾನ ಅಳವಡಿಸಿ ಕಾಲಿನ ರಕ್ತನಾಳದ ಮೂಲಕ ಈ ಕೃತಕ ಕವಾಟವನ್ನು ಜೋಡಿಸಲಾಗಿದೆ ಎಂದರು.

ಇಂದು ಮೈಸೂರು ಜಯದೇವ ಆಸ್ಪತ್ರೆಯಲ್ಲಿ ನಾಲ್ವರು ಹೃದ್ರೋಗಿಗಳಿಗೆ ಶಸ್ತ್ರಚಿಕಿತ್ಸೆ ಇಲ್ಲದೆ ಯಶಸ್ವಿಯಾಗಿ ಕೃತಕ ಕವಾಟ ಅಳವಡಿಸಲಾಗಿದೆ. ಆಸ್ಪತ್ರೆಯ ಹೃದ್ರೋಗ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಸಿ. ಶ್ರೀನಿವಾಸ್, ಪ್ರಾಧ್ಯಾಪಕರಾದ ಡಾ.ಹೆಚ್.ಕೆ. ಶ್ರೀನಿವಾಸ್ ನೇತೃತ್ವದ ವೈದ್ಯರ ತಂಡ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದೆ. ಈ ಎಲ್ಲಾ ನಾಲ್ಕು ರೋಗಿಗಳು ಆರೋಗ್ಯದಿಂದ ಕೂಡಿದ್ದು, 2 ದಿನದಲ್ಲಿ ಆಸ್ಪತ್ರೆಯಿಂದ ಬಿಡುಗಡೆಯಾಗಲಿದ್ದಾರೆ ಎಂದರು.

ಈ ಶಸ್ತ್ರಚಿಕಿತ್ಸಾ ವೆಚ್ಚ 20 ಲಕ್ಷ ರೂ.ಗಳಾಗಲಿದೆ. ಆದರೆ ಶೇ.50 ರಿಯಾಯಿತಿ ದರದಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಓರ್ವ ಬಡರೋಗಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗಿದೆ. ಒಂದೇ ದಿನದಲ್ಲಿ ನಾಲ್ಕು ಜನರಿಗೆ ಕವಾಟ ಬದಲಾವಣೆ ಮಾಡಿರುವುದು ದಾಖಲೆಯಾಗಿದೆ. ಕವಾಟದ ಉತ್ಪಾದಕರಾದ ಮೆರಿಲ್ ಅವರಿಗೆ ಆಸ್ಪತ್ರೆ ಹಾಗೂ ಹೃದ್ರೋಗಿಗಳ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಇದೇ ವೇಳೆ ಆಸ್ಪತ್ರೆಯಲ್ಲಿ 4ನೇ ಆಪರೇಷನ್ ಥಿಯೇಟರ್‌ಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ವೈದ್ಯಕೀಯ ಅಧೀಕ್ಷಕ ಡಾ.ಸದಾನಂದ, ಡಾ. ಅನುಸೂಯ ಮಂಜುನಾಥ್, ಡಾ. ಹರ್ಷ ಬಸಪ್ಪ, ಡಾ.ಸಂತೋಷ್, ಡಾ. ರಾಜಿತ್, ಡಾ. ಜಯಪ್ರಕಾಶ್, ಡಾ.ವೀಣಾ ನಂಜಪ್ಪ, ಡಾ. ಭಾರತಿ, ಡಾ. ದಿನೇಶ್, ಡಾ. ಶ್ರೀನಿಧಿಹೆಗ್ಗಡೆ, ಡಾ. ರಶ್ಮಿ, ಡಾ. ದೇವರಾಜ್, ಆರ್.ಎಂ.ಓ, ಡಾ. ಪಶುಪತಿ, ನರ್ಸಿಂಗ್ ಅಧೀಕ್ಷಕ ಹರೀಶ್ ಕುಮಾರ್, ಪಿ.ಆರ್.ಓ, ವಾಣಿಮೋಹನ್, ಗುರುಮೂರ್ತಿ, ಯೋಗಲಕ್ಷ್ಮಿ, ಇಂಜಿನಿಯರ್ ಸ್ವರೂಪ್, ವಿಜಯ್, ಅನುಜ ಹಾಜರಿದ್ದರು.

ಪತಿ ನಾಪತ್ತೆಯಾಗಿ 23 ವರ್ಷವಾಯ್ತು, ನನಗೆ ಪಿಂಚಣಿ ಕೊಡಿ!

ಮಹಿಳೆ ದೂರು

ಮೈಸೂರು, ಜೂ.23– ತನ್ನ ಪತಿ ನಾಪತ್ತೆಯಾಗಿ 23 ವರ್ಷ ಕಳೆದಿದ್ದು, ಆತ ಮೃತಪಟ್ಟಿದ್ದಾನೆ ಎಂದು ಭಾವಿಸಿ ತನಗೆ ವಿಧವಾ ವೇತನ ನೀಡಬೇಕೆಂದು ಮಹಿಳೆಯೋರ್ವರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಮೈಸೂರಿನ ಕನಕಗಿರಿ ನಿವಾಸಿ ವಿನೋದಮ್ಮ ಎಂಬುವರು ವಿಧವಾ ವೇತನಕ್ಕೆ ಮನವಿ ಸಲ್ಲಿಸಿದ್ದು, ಯಾವುದೇ ಸರ್ಕಾರಿ ನೌಕರ ನಾಪತ್ತೆಯಾಗಿ 7 ವರ್ಷ ಪತ್ತೆಯಾಗದಿದ್ದರೆ ಆತ ಮೃತಪಟ್ಟಿದ್ದಾನೆ ಎಂದು ಭಾವಿಸಿ ಆತನ ಕುಟುಂಬಕ್ಕೆ ಪಿಂಚಣಿ ನೀಡುವ ವ್ಯವಸ್ಥೆ ಇದೆ. ಖಾಸಗಿ ವ್ಯಕ್ತಿ ನಾಪತ್ತೆಯಾದರೂ, ಅದೇ ನಿಯಮ ಅನ್ವಯಿಸುತ್ತದೆ. ನನ್ನ ಪತಿ ನಾಪತ್ತೆಯಾಗಿ 23 ವರ್ಷ ಆಗಿದೆ. ಈ ಸಂಬಂಧ ಪೊಲೀಸರಿಗೆ ದೂರು ಕೂಡ ನೀಡಿದ್ದೇನೆ. ಆತ ಇನ್ನೂ ಪತ್ತೆಯಾಗಿಲ್ಲ. ನನಗೆ 57 ವರ್ಷ ವಯಸ್ಸಾಗಿದ್ದು, ಜೀವನ ಕಷ್ಟವಾಗಿದೆ. ಹೀಗಾಗಿ ನನ್ನ ಪತಿ ಮೃತಪಟ್ಟಿದ್ದಾನೆ ಎಂದು ಭಾವಿಸಿ ವಿಧವಾ ವೇತನ ಕೊಡಿಸಬೇಕು ಎಂದು ಅವರು ಜಿಲ್ಲಾಧಿಕಾರಿಗಳಿಗೆ ನೀಡಿರುವ ಮನವಿಯಲ್ಲಿ ಕೋರಿದ್ದಾರೆ.

ನಾವು ಯೋಗವನ್ನು ಮೋದಿಯಿಂದ ಕಲಿಯುವ ಅಗತ್ಯವಿಲ್ಲ

ಯೋಗ ಒಂದೇ ದೇಶದ ಅಭಿವೃದ್ಧಿಯೇ?

ಪ್ರಧಾನಿ ಮೋದಿ ವರ್ತನೆಗೆ ರೈತ ಸಂಘದ ಬಡಗಲಪುರ ನಾಗೇಂದ್ರ ಖಂಡನೆ

ಮೈಸೂರು, ಜೂ.23(ಆರ್‌ಕೆಬಿ)– ದೇಶದ ಆಡಳಿತದ ಚುಕ್ಕಾಣಿ ಹಿಡಿದಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ದೇಶದ ಅಭಿವೃದ್ಧಿ ಬಗ್ಗೆ ತಲೆಕೆಡಿಸಿಕೊಳ್ಳದೆ ಯೋಗವೇ ಅಭಿವೃದ್ಧಿ ಪಥ ಎಂಬಂತೆ ಯೋಗ ಮಾಡುತ್ತಾ ಕಾಲ ಕಳೆಯುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಇಂದಿಲ್ಲಿ ಖಂಡಿಸಿದರು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಕುವೆಂಪು ಅವರ ಕರ್ಮಭೂಮಿ, ಅವರ ವೈಚಾರಿಕ ವಿಚಾರವನ್ನು ಪಠ್ಯದಿಂದ ತಿರುಚಿ ರಾಜ್ಯ ಸರ್ಕಾರ ಅವರನ್ನು ಅಪಮಾನಿಸಿದೆ. ಅದೇ ರೀತಿ ಡಾ.ಬಿ.ಆರ್.ಅಂಬೇಡ್ಕರ್, ಬಸವಣ್ಣನವರ ವಿಚಾರಗಳನ್ನು ಬುಡಮೇಲು ಮಾಡಿದ್ದಾರೆ. ಆದರೆ ಯೋಗ ಸಣ್ಣ ವಿಚಾರ. ಅದನ್ನೇ ಬಹು ದೊಡ್ಡದು ಎಂಬಂತೆ ಬೊಬ್ಬೆ ಹೊಡೆಯುತ್ತಿದ್ದಾರೆ. ನಾವು ಯೋಗವನ್ನು ಮೋದಿಯಿಂದ ಕಲಿಯುವ ಅಗತ್ಯವಿಲ್ಲ. ಅದನ್ನು ಪ್ರತಿದಿನ ನಮ್ಮ ಗ್ರಾಮೀಣ ಜನರು, ರೈತರು ಒಂದಲ್ಲ ಒಂದು ರೀತಿಯಲ್ಲಿ ವ್ಯಾಯಾಮದಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ಆಡಳಿತದ ಚುಕ್ಕಾಣಿ ಹಿಡಿದ ಮೋದಿ ದೇಶದ ಜನರಿಗೆ ಏನನ್ನು ಕೊಡಬೇಕೋ ಅದನ್ನು ಕೊಡುತ್ತಿಲ್ಲ ಎಂದು ಟೀಕಿಸಿದರು.

ಕಬ್ಬು ನಿಯಂತ್ರಣ ಮಂಡಳಿ ಸಭೆ ನಡೆಸುತ್ತಿಲ್ಲ. ಕಬ್ಬಿಗೆ ವೈಜ್ಞಾನಿಕ ದರ ನಿಗದಿಪಡಿಸಿಲ್ಲ. ಬಿಜೆಪಿ, ಕಾಂಗ್ರೆಸ್, ಜನತಾದಳ ನಾಯಕರು ಕಬ್ಬಿನ ಕಾರ್ಖಾನೆಗಳ ಮಾಲೀಕರಾಗಿದ್ದು, ಕಾರ್ಖಾನೆಗಳಿಂದ ರೈತರಿಗಾಗುತ್ತಿರುವ ಮೋಸಕ್ಕೆ ಯಾವುದೇ ಕ್ರಮ ಇಲ್ಲ. ನಿಗದಿತ ಅವಧಿಯೊಳಗೆ ಹಣ ನೀಡುತ್ತಿಲ್ಲ. ರಾಜ್ಯ ಕಬ್ಬು ಬೆಳೆಗಾರರ ಸಮಸ್ಯೆಗಳ ಬಗ್ಗೆ ಸ್ವಲ್ಪವೂ ಗಮನ ನೀಡುತ್ತಿಲ್ಲ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರಿದ್ದಾಗ ರಾಜ್ಯದಲ್ಲಿ ಕರ ನಿರಾಕರಣೆ ಚಳವಳಿ ಉತ್ತುಂಗಕ್ಕೇರಿತ್ತು. ಹಿಂದಿನ ಸರ್ಕಾರಗಳಿಂದ ಮಾತುಕತೆ ಆಗಿತ್ತು. ಹಳೆ ಕಂದಾಯ ಕಟ್ಟುವುದು ಬೇಡ. ಮೀಟರ್ ಹಾಕುತ್ತೇವೆ ಕಟ್ಟಿಕೊಂಡು ಹೋಗಿ ಎಂದಿದ್ದರು. ಅದಕ್ಕೆ ರೈತರೂ ಒಪ್ಪಿದ್ದರು. ಆದರೆ ಈಗಿನ ಸರ್ಕಾರ ಹಳೆ ಬಾಕಿ ವಸೂಲಿಗೆ ಮುಂದಾಗಿದೆ. ಹಣ ಕಟ್ಟದಿದ್ದರೆ ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತಿದ್ದಾರೆ ಎಂದು ಸರ್ಕಾರದ ರೈತ ವಿರೋಧಿ ಧೋರಣೆಯನ್ನು ಖಂಡಿಸಿದರು.

ಜು.11ರಂದು ಸಿಎಂ ಮನೆಗೆ ಸಾವಿರಾರು ರೈತರು ಮುತ್ತಿಗೆ: ಸರ್ಕಾರದ ಈ ಬಲಾತ್ಕಾರ ವಸೂಲಿ ವಿರೋಧಿಸಿ ಜು.11ರಂದು ಸಾವಿರಾರು ರೈತರು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಹಾಕಲು ರೈತಸಂಘ ಕರೆ ನೀಡಿದೆ. ಅದರ ಪೂರ್ವಭಾವಿಯಾಗಿ ಜು.2ರಂದು ದಾವಣಗೆರೆಯಲ್ಲಿ ಕಾರ್ಯಕಾರಿಣಿ ಸಭೆ ಏರ್ಪಡಿಸಿದ್ದೇವೆ. ಅಲ್ಲಿ ಸರ್ಕಾರದ ರೈತ ವಿರೋಧಿ ಧೋರಣೆ ಮತ್ತು ರೈತರು ಹಮ್ಮಿಕೊಳ್ಳುವ ಹೋರಾಟದ ಬಗ್ಗೆ ಚರ್ಚಿಸಲಾಗುವುದು ಎಂದು ಹೇಳಿದರು.

ನರಗುಂದದಲ್ಲಿ ಬೃಹತ್ ಸಮಾವೇಶ: ನರಗುಂದ–ನವಲಗುಂದ ರೈತರ ಹೋರಾಟ 40 ವರ್ಷ ಕಳೆದಿದ್ದು, ಇದರ ಅಂಗವಾಗಿ ನರಗುಂದದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಂಡಿದ್ದು, ಅಲ್ಲಿ ರೈತರು ಸಂಘಟಿತ ಹೋರಾಟ ಮಾಡುವ ಕುರಿತು ನಿರ್ಣಯ ಕೈಗೊಳ್ಳಲಿದ್ದೇವೆ ಎಂದರು.

ನಕಲಿ ಬೀಜ, ರಸಗೊಬ್ಬರದ ವಿರುದ್ಧ ಹೋರಾಟ: ನಕಲಿ ಬೀಜ, ರಸಗೊಬ್ಬರ, ಕೀಟನಾಶಕ ಮಾರಾಟ ವ್ಯಾಪಕವಾಗಿ ನಡೆಯುತ್ತಿದೆ. ಹಾವೇರಿ ಜಿಲ್ಲೆಯಲ್ಲಿ ಕೃಷಿ ಮಂತ್ರಿಯ ಭಾಗದಲ್ಲಿಯೇ ಇದು ಹೆಚ್ಚಾಗಿದೆ. ಈ ಬಗ್ಗೆ ರೈತ ಸಂಘ ಜೂ.25ರಂದು ಕೃಷಿ ಮಂತ್ರಿಯನ್ನು ಭೇಟಿಯಾಗಲಿದೆ. ನಕಲಿ ಬೀಜ, ರಸಗೊಬ್ಬರ, ಕೀಟನಾಶಕಗಳ ಬಗ್ಗೆ ಹೋರಾಟ ಮಾಡಲಿದ್ದೇವೆ ಎಂದರು.

ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಸೋಲಿನ ಅವಲೋಕನ: ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ರೈತಸಂಘ, ದಸಂಸ ಮತ್ತು ಇತರೆ ಪ್ರಗತಿಪರ ಸಂಘಟನೆಗಳು ಮನೆ ಮನೆಗೆ ಹೋಗಿ ವಿಚಾರ ಇಟ್ಟುಕೊಂಡು ಪ್ರಚಾರ ಮಾಡಿದ್ದರೂ ನಮ್ಮ ಅಭ್ಯರ್ಥಿ ಪ್ರಸನ್ನ ಎನ್.ಗೌಡ ಸೋತಿದ್ದಾರೆ. ಪ್ರಚಾರದ ವೇಳೆ ಜನರಿಂದ ಉತ್ತಮ ಸ್ಪಂದನೆ ಸಿಕ್ಕಿತ್ತು. ಆದರೆ ಅದು ಮತವಾಗಿ ಪರಿವರ್ತನೆ ಆಗದಿರುವ ಬಗ್ಗೆ ಅವಲೋಕನ ಮಾಡುತ್ತಿದ್ದೇವೆ ಎಂದರು.

ಈ ಸೋಲಿನಿಂದ ನಾವು ಹತಾಶರಾಗಿಲ್ಲ. ಜು.1ರಂದು ಮೈಸೂರಿನಲ್ಲಿ ದಕ್ಷಿಣ ಪದವೀಧರ ಕ್ಷೇತ್ರ ವ್ಯಾಪ್ತಿಯ ನಾಲ್ಕು ಜಿಲ್ಲೆಗಳ ರೈತರು ಮತ್ತು ಸಂಘಟನೆಗಳ ಜಿಲ್ಲಾ ಮತ್ತು ತಾಲೂಕು ಘಟಕಗಳ ಪದಾಧಿಕಾರಿಗಳ ಸಭೆ ಕರೆಯಲಾಗಿದೆ. ಅಲ್ಲಿ ಸೋಲಿನ ಬಗ್ಗೆ ಅವಲೋಕನ ಮಾಡಲಿದ್ದೇವೆ. ಮುಂದಿನ ರಾಜಕೀಯವನ್ನು ಹೇಗೆ ಗಟ್ಟಿಗೊಳಿಸಬೇಕು ಎಂಬುದನ್ನು ಸಭೆಯಲ್ಲಿ ಚರ್ಚಿಸಲಿದ್ದೇವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರೈತಸಂಘದ ರಾಜ್ಯ ಮುಖಂಡ ಅಶ್ವತ್ಥ್ ನಾರಾಯಣ ರಾಜೇ ಅರಸ್, ಮಂಡ್ಯ ಜಿಲ್ಲಾಧ್ಯಕ್ಷ ಕೆಂಪುಗೌಡ, ಮೈಸೂರು ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಮುಖಂಡ ಪ್ರಸನ್ನ ಎನ್.ಗೌಡ ಇನ್ನಿತರರು ಉಪಸ್ಥಿತರಿದ್ದರು.

'ಅಗ್ನಿಪಥ್' ವಿರೋಧಿಸಿ ಇಂದು ರೈತರ ಪ್ರತಿಭಟನೆ

ಅಗ್ನಿಪಥ್ ಅವೈಜ್ಞಾನಿಕ ಯೋಜನೆ. ದೇಶ ಕಾಯಲು ಸದೃಢ ಸೇನೆ ಬೇಕು. ಆದರೆ ಅಲ್ಲಿಯೂ ಗುತ್ತಿಗೆ ಕಾರ್ಮಿಕರ ರೀತಿಯಲ್ಲಿ ಯೋಧರ ನೇಮಕ ಮಾಡಿದರೆ ದೇಶದ ಭದ್ರತೆ ಕತೆ ಏನು? ಎಂದು ಬಡಗಲಪುರ ನಾಗೇಂದ್ರ ಪ್ರಶ್ನಿಸಿದರು.

ಅಗ್ನಿಪಥ್ ವಿರೋಧಿಸಿ ಜೂ.24ರಂದು ಸಂಯುಕ್ತ ಕಿಸಾನ್ ಮೋರ್ಚಾ ನೀಡಿರುವ ದೇಶವ್ಯಾಪಿ ಪ್ರತಿಭಟನೆ ಕರೆಗೆ ರಾಜ್ಯದಲ್ಲೂ ಉತ್ತಮ ಬೆಂಬಲ ದೊರೆಯಲಿದೆ. ಅಗ್ನಿಪಥ್ ವಿರೋಧಿಸಿ ರಾಜ್ಯದ ಎಲ್ಲಾ ಜಿಲ್ಲೆ ಮತ್ತು ತಾಲೂಕು ಕಚೇರಿಗಳ ಬಳಿ ರೈತರು ಪ್ರತಿಭಟನೆ ನಡೆಸಲಿದ್ದಾರೆ. ಮೈಸೂರಿನಲ್ಲಿಯೂ ಜಿಲ್ಲಾಧಿಕಾರಿ ಕಚೇರಿ ಎದುರು ರೈತರು ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ನೀಡಲಿದ್ದಾರೆ ಎಂದು ತಿಳಿಸಿದರು.

ಮೈಸೂರು ಮಿತ್ರ ಶುಕ್ರವಾರ 24 ಜೂನ್ 2022

ಜಲಜೀವನ್ ಮಿಷನ್ ಯೋಜನೆ ಅನುಷ್ಠಾನಕ್ಕೆ ಸಹಕರಿಸಿ

ಅತ್ತಹಳ್ಳಿ ಗ್ರಾಮಸ್ಥರಿಗೆ ಶಾಸಕ ಅಶ್ವಿನ್‌ಕುಮಾರ್ ಸಲಹೆ



ತಿ.ನರಸೀಪುರ, ಜೂ.23(ಎಸ್‌ಕೆ)– ರಾಷ್ಟ್ರೀಯ ಜಲ ಜೀವನ್ ಮಿಷನ್ ಯೋಜನೆಯಡಿ ಸರ್ಕಾರ ಪ್ರತಿ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರು ಪೂರೈಸುವ ಕಾಮಗಾರಿ ಕೈಗೆತ್ತಿಕೊಂಡಿದ್ದು, ಗ್ರಾಮಸ್ಥರು ಯೋಜನೆ ಅನುಷ್ಠಾನಕ್ಕೆ ಸಹಕಾರ ನೀಡಬೇಕು ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಮನವಿ ಮಾಡಿದರು.

ತಾಲೂಕಿನ ಅತ್ತಹಳ್ಳಿ ಗ್ರಾಮದಲ್ಲಿ ಪಿಆರ್‌ಇಡಿ ಇಲಾಖೆ ಅನುದಾನದಡಿ ಸಿಸಿ ಚರಂಡಿ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ ವೇಳೆ ಗ್ರಾಮದಲ್ಲಿ ಜೆಜೆಎಂ ಯೋಜನೆಗೆ ಕೆಲವರು ಸಹಕಾರ ನೀಡುತ್ತಿಲ್ಲವೆಂಬ ವಿಷಯ ಪ್ರಸ್ತಾಪವಾದ ಹಿನ್ನೆಲೆಯಲ್ಲಿ ಗ್ರಾಮಸ್ಥರ ಮನವೊಲಿಸಿ ಮಾತನಾಡಿದ ಅವರು, ಸರ್ಕಾರ ಪ್ರತಿ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ನೀಡಬೇಕೆಂಬ ಸದುದ್ದೇಶದೊಂದಿಗೆ ಜೆಜೆಎಂ ಯೋಜನೆಯಡಿ ಕಾಮಗಾರಿ ಆರಂಭಿಸಿದೆ. ಆದರೆ ಕೆಲವರು ಈ ಯೋಜನೆಯಿಂದ ಜನರಿಗೆ ಹಾಣಕಾಸಿನ ಹೊರೆಯಾಗಲಿದೆ ಎಂಬ ಊಹಾಪೋಹಕ್ಕೆ ಕಿವಿಗೊಟ್ಟು ಕಾಮಗಾರಿಯೇ ಬೇಡ ಎನ್ನುತ್ತಿರುವುದು ಸರಿಯಲ್ಲ. ಯೋಜನೆ ಅನುಷ್ಠಾನದಿಂದ ಗ್ರಾಮಸ್ಥರಿಗೆ ಶುದ್ಧ ಕಾವೇರಿ ನೀರು ದೊರಕುತ್ತದೆ. ಇದಕ್ಕಾಗಿ ಫಲಾನುಭವಿಗಳು ಸರ್ಕಾರಕ್ಕೆ ಯಾವುದೇ ಶುಲ್ಕ ಪಾವತಿಸಬೇಕಾಗಿಲ್ಲ. ಹಾಗಾಗಿ, ಊಹಾಪೋಹಗಳಿಗೆ ಕಿವಿಗೊಡದೇ ಸರ್ಕಾರದ ಯೋಜನೆಯ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಪಂಚಾಯಿತಿಯಿಂದ ಗ್ರಾಮದಲ್ಲಿ ಕುಡಿಯಲು ಬೋರ್‌ವೆಲ್ ನೀರನ್ನು ಪೂರೈಸುತ್ತಿದ್ದಾರೆ. ಜಲ ಜೀವನ್ ಮಿಷನ್ ಯೋಜನೆ ಜಾರಿಯಾಗುತ್ತಿದ್ದಂತೆ ಪಂಚಾಯಿತಿಗೆ ಯಾವುದೇ ಅನುದಾನ ದೊರಕುವುದಿಲ್ಲ. ಹಾಗಾಗಿ ಬೋರ್‌ವೆಲ್ ದುರಸ್ತಿ ಸೇರಿದಂತೆ ಇನ್ನಿತರ ವೆಚ್ಚಕ್ಕೆ ಪಂಚಾಯಿತಿಗೆ ಅಧಿಕಾರ ಇರುವುದಿಲ್ಲವಾದ್ದರಿಂದ ಎಲ್ಲರೂ ಜೆಜೆಎಂ ಯೋಜನೆ ಅನುಷ್ಠಾನಕ್ಕೆ ಅಡ್ಡಿಪಡಿಸದೇ ಕಾಮಗಾರಿ ಮಾಡಲು ಅಧಿಕಾರಿಗಳಿಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಅತ್ತಹಳ್ಳಿ ಗ್ರಾಪಂ ಅಧ್ಯಕ್ಷೆ ಜಯಲಕ್ಷ್ಮಮ್ಮ, ಉಪಾಧ್ಯಕ್ಷೆ ನಾಗರತ್ನಮ್ಮ, ಸದಸ್ಯರಾದ ವಿಶ್ವನಾಥ್, ವೀಣಾ, ಸಿ.ಲಿಂಗಣ್ಣ, ಹೋಬಳಿ ಘಟಕದ ಅಧ್ಯಕ್ಷ ಕುಮಾರಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ವೆಂಕಟೇಶ್, ಜಿಪಂ ಮಾಜಿ ಸದಸ್ಯ ಜೈಪಾಲ್‌ಭರಣಿ, ಗ್ರಾಪಂ ಮಾಜಿ ಸದಸ್ಯ ಮಹೇಶ್, ಮಾಜಿ ಛೇರ್ಮನ್ ಪುಟ್ಟಮಾದೇಗೌಡ, ಮುಖಂಡರಾದ ಕೆ.ಸತೀಶ್, ಗಿರಿ, ಮಧುಸೂದನ್, ರವಿ, ಸಂತೋಷ್, ಎ.ಎನ್.ಮಹೇಶ್, ನಾರಾಯಣ್, ಎಂ.ಗೋಪಿಕೃಷ್ಣ, ಸೋಸಲೆ ರಾಜೇಶ್, ಜಿಪಂ ಸಹಾಯಕ ಇಂಜಿನಿಯರ್ ರಾಜ್‌ನಾಯಕ, ಪಿಆರ್‌ಡಿ ಇಲಾಖೆ ಜೆಇ ದಿಲೀಪ್‌ಕುಮಾರ್, ನರೇಗಾ ಯೋಜನಾಧಿಕಾರಿ ಮಹಾದೇವಯ್ಯ, ರಾಷ್ಟ್ರೀಯ ಕುಡಿಯುವ ನೀರು ಸರಬರಾಜು ರಶ್ಮಿ, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ ಹಾಜರಿದ್ದರು.

ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ

ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಯೇ ನನ್ನ ಗುರಿಯಾಗಿದೆ ಎಂದು ಶಾಸಕ ಎಂ.ಅಶ್ವಿನ್‌ಕುಮಾರ್ ಹೇಳಿದರು.

ತಾಲೂಕಿನ ಬನ್ನೂರು ಹೋಬಳಿ ವ್ಯಾಪ್ತಿಯ ದೊಡ್ಡಮುಲಗೂಡು, ಬಿ.ಸೀಹಳ್ಳಿ, ಸೇನಾಪತಹಳ್ಳಿ, ಕೇತುಪುರ, ಕುಂತನಹಳ್ಳಿ ಗ್ರಾಮಗಳಲ್ಲಿ ಪಿಆರ್‌ಇಡಿ ಇಲಾಖೆಯಿಂದ 1.60ಕೋಟಿ ರೂ. ವೆಚ್ಚದಡಿ ಕಾಂಕ್ರೀಟ್ ರಸ್ತೆ ಚರಂಡಿ ಹಾಗೂ ನೂತನ ಅಂಗನವಾಡಿ ಕಟ್ಟಡ ನಿರ್ಮಾಣ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗುಣಮಟ್ಟದಲ್ಲಿ ಯಾವುದೇ ರಾಜಿಯಾಗುವುದಿಲ್ಲ. ಗುಣಮಟ್ಟದ ಕಾಮಗಾರಿಯನ್ನು ಗುತ್ತಿಗೆದಾರರು ಮಾಡಬೇಕು ಎಂದು ತಿಳಿಸಿದರು.

ಸಾಕಷ್ಟು ಅನುದಾನವನ್ನು ಸರ್ಕಾರದಿಂದ ತಂದಿರುವುದರಿಂದ ಗ್ರಾಮೀಣ ಪ್ರದೇಶದ ರಸ್ತೆಗಳು ಕಾಂಕ್ರೀಟ್ ಮತ್ತು ಡಾಂಬರೀಕರಣವಾಗುತ್ತಿದೆ. ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ನೇರವಾಗಿ ಸಂಪರ್ಕಿಸಿ ಪರಿಹರಿಸಿಕೊಳ್ಳಬೇಕು. ಗ್ರಾಮಗಳಲ್ಲಿ ಮೂಲ ಸೌಲಭ್ಯಗಳು ದೊರೆಯಬೇಕು. ಗ್ರಾಮಗಳು ಅಭಿವೃದ್ಧಿಯಿಂದ ದೇಶ ಅಭಿವೃದ್ಧಿ ಸಾಧ್ಯವಾಗಲಿದೆ ಎಂದರು.

ಲಂಚ ಪಡೆಯುವಾಗ ಎಸಿಬಿ ಬಲೆಗೆ ಬಿದ್ದ ಬಿಇಓ

• ನಿವೃತ್ತಿ ವೇತನಕ್ಕೆ ಸಂಬಂಧಿಸಿದ ದಾಖಲೆ ನೀಡಲು ಲಂಚದ ಬೇಡಿಕೆ • ಬಿಇಓ ಚಂದ್ರಕಾಂತ್, ಕಚೇರಿ ಅಧೀಕ್ಷಕ ಶಂಕರ್ ಬಂಧನ, ಎಸ್‌ಡಿಎ ರವಿಕುಮಾರ್‌ಗಾಗಿ ಹುಡುಕಾಟ



ಚಂದ್ರಕಾಂತ್ ಶಂಕರ್ ರವಿಕುಮಾರ್

ಹೆಚ್.ಡಿ.ಕೋಟೆ, ಜೂ.23(ಮಂಜು)– ನಿವೃತ್ತಿ ವೇತನಕ್ಕೆ ಸಂಬಂಧಿಸಿದಂತೆ ಅಗತ್ಯ ದಾಖಲೆಯನ್ನು ನೀಡಲು ಲಂಚಕ್ಕೆ ಬೇಡಿಕೆ ಇಟ್ಟಿದ್ದ ಕ್ಷೇತ್ರಾ ಶಿಕ್ಷಣಾಧಿಕಾರಿ ಸೇರಿದಂತೆ ಮೂವರು ಗುರುವಾರ ಎಸಿಬಿ ಬಲೆಗೆ ಬಿದ್ದಿದ್ದಾರೆ.

ಹೆಚ್.ಡಿ.ಕೋಟೆಯ ಕ್ಷೇತ್ರಾಶಿಕ್ಷಣಾಧಿಕಾರಿ ಚಂದ್ರಕಾಂತ್, ಕಚೇರಿ ಅಧೀಕ್ಷಕ ಶಂಕರ್ ಅವರನ್ನು ಎಸಿಬಿ ಅಧಿಕಾರಿಗಳು ಬಂಧಿಸಿದ್ದು, ತಲೆ ಮರೆಸಿಕೊಂಡಿರುವ ಎಸ್‌ಡಿಎ ರವಿ ಕುಮಾರ್ ಬಂಧನಕ್ಕೆ ಬಲೆ ಬೀಸಿದ್ದಾರೆ.

ಏನಿದು ಘಟನೆ?: ನಂಜನಗೂಡು ತಾಲೂಕಿನ ರಾಂಪುರದ ಸಿದ್ದರಾಜು ಅವರು ಹೆಚ್.ಡಿ.ಕೋಟೆ ತಾಲೂಕಿನ ಚಂಗೌಡನ ಹಳ್ಳಿ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ, ಮೇ 31ರಂದು ನಿವೃತ್ತಿ ಹೊಂದಿದ್ದರು. ಬಳಿಕ, ತಮ್ಮ ನಿವೃತ್ತಿ ವೇತನ ಪಡೆಯಲು ಹೆಚ್.ಡಿ.ಕೋಟೆ ತಾಲೂಕಿನ ಕ್ಷೇತ್ರಾಶಿಕ್ಷಣಾಧಿಕಾರಿಗಳ ಕಚೇರಿಗೆ ತೆರಳಿ, ನಿವೃತ್ತಿ ವೇತನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಬೆಂಗಳೂರಿನ ಮಹಾಲೆಕ್ಕಾಧಿಕಾರಿ ಕಚೇರಿಗೆ ಕಳುಹಿಸಲು ಕಚೇರಿಯ ಎಸ್‌ಡಿಎ ರವಿಕುಮಾರ್ ಅವರಿಗೆ ಜೂ. 16ರಂದು ಅರ್ಜಿ ಸಲ್ಲಿಸಿದ್ದಾರೆ.

ಆದರೆ, ನಿವೃತ್ತಿ ವೇತನ ಸಂಬಂಧಿಸಿದ ದಾಖಲೆಯನ್ನು ಬೆಂಗಳೂರಿಗೆ ಕಳುಹಿಸಲು ಕ್ಷೇತ್ರಾಶಿಕ್ಷಣಾಧಿಕಾರಿ ಚಂದ್ರಕಾಂತ್, ಕಚೇರಿ ಅಧೀಕ್ಷಕ ಶಂಕರ್ ಹಾಗೂ ನನಗೆ 9 ಸಾವಿರ ಲಂಚ ನೀಡಬೇಕು ಎಂದು ಜೂ.19ರಂದು ಬೇಡಿಕೆ ಇಟ್ಟಿದ್ದಾರೆ. ಇದರಿಂದ ಮನನೊಂದ ನಿವೃತ್ತ ಶಿಕ್ಷಕ ಸಿದ್ದರಾಜು ಮೈಸೂರಿನ ಭ್ರಷ್ಟಾಚಾರ ನಿಗ್ರಹ ದಳದ(ಎಸಿಬಿ) ಅಧಿಕಾರಿಗಳಿಗೆ ದೂರು ನೀಡಿದ್ದಾರೆ.

ದೂರಿನ್ವಯ ಕಾರ್ಯಾಚರಣೆಗೆ ಇಳಿದ ಅಧಿಕಾರಿಗಳು, ಕಚೇರಿಯಲ್ಲಿ ಕ್ಷೇತ್ರಾ ಶಿಕ್ಷಣಾಧಿಕಾರಿ ಚಂದ್ರಕಾಂತ್ 5 ಸಾವಿರ ಹಾಗೂ ಕಚೇರಿ ಅಧೀಕ್ಷಕ ಶಂಕರ್ 2 ಸಾವಿರ ಲಂಚ ಪಡೆಯುವಾಗ ಹಣದ ಸಮೇತ ಇಬ್ಬರನ್ನು ಬಂಧಿಸಿದ್ದಾರೆ. ಬಳಿಕ, ಇವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ದೂರುದಾರ ಸಿದ್ದರಾಜು ಅವರ ದೂರಿನಾಧರದಡಿ ಎಸ್‌ಡಿಎ ರವಿಕುಮಾರ್ ಮೇಲೂ ಪ್ರಕರಣ ದಾಖಲಿಸಿಕೊಂಡಿದ್ದು, ತಲೆಮರೆಸಿಕೊಂಡಿರುವ ಆತನ ಬಂಧನಕ್ಕೂ ಬಲೆ ಬೀಸಿದ್ದಾರೆ.

ಕಾರ್ಯಾಚರಣೆಯಲ್ಲಿ ಎಸಿಬಿ ಡಿವೈಎಸ್‌ಪಿ ತಮ್ಮಯ್ಯ, ಇನ್‌ಸ್ಪೆಕ್ಟರ್ ಚಿತ್ತರಂಜನ್, ಸಿಬ್ಬಂದಿಗಳಾದ ಮೋಹನ್, ಕೃಷ್ಣ, ಚೇತನ್, ಗುರುಪ್ರಸಾದ್, ಮಂಜು, ಪುಷ್ಪಲತಾ, ಯೋಗೇಶ್ ಪಾಲ್ಗೊಂಡಿದ್ದರು.

ಯುವಕನ ನಂಬಿ ಹೋದ ಗೃಹಿಣಿ ಈಗ ಅತಂತ್ರ!

ನಂಜನಗೂಡು, ಜೂ.23(ಸುದರ್ಶನ್)– ಕಳೆದ 10 ದಿನಗಳ ಹಿಂದೆ ನಾಪತ್ತೆಯಾಗಿದ್ದ ಗೃಹಿಣಿ, ಗ್ರಾಮದ ಹೊರವಲಯದಲ್ಲಿ ಇಂದು ಬೆಳಗ್ಗೆ ಪತ್ತೆಯಾಗಿದ್ದು, ತನ್ನನ್ನು ಕರೆದೊಯ್ದಿದ್ದ ಯುವಕನೊಂದಿಗೆ ಮದುವೆಯಾಗುತ್ತೇನೆ ಎಂದು ಪಟ್ಟು ಹಿಡಿದಿರುವುದು ತಾಲೂಕಿನ ಕೆಲ್ಲೂಪುರ ಗ್ರಾಮದಿಂದ ವರದಿಯಾಗಿದೆ.

ವಿವರ: ಕೆಲ್ಲೂಪುರ ಗ್ರಾಮದ ಸುವರ್ಣ(35), ಹಾಡ್ಯ ಗ್ರಾಮದ ನಂದೀಶ್ ಎಂಬಾತನೊಂದಿಗೆ 12 ವರ್ಷದ ಹಿಂದೆ ವಿವಾಹವಾಗಿದ್ದು, ಈ ದಂಪತಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ. ತಾಯಿಯ ಅನಾರೋಗ್ಯ ಕಾರಣದಿಂದ ಕಳೆದ 6 ತಿಂಗಳಿಂದ ತವರು ಮನೆಯಲ್ಲಿ ನೆಲೆಸಿದ್ದ ಈಕೆಗೆ ಅದೇ ಗ್ರಾಮದ ನಾಗೇಂದ್ರ ಅಲಿಯಾಸ್ ಸಂತೋಷ್(21) ಎಂಬಾತನ ಪರಿಚಯವಾಗಿದ್ದು, ಜೂ.12ರಂದು ತಡರಾತ್ರಿ ಆತನೊಂದಿಗೆ ಹೋಗಿದ್ದಾಳೆ.

ಈ ಸಂಬಂಧ ಗೃಹಿಣಿಯ ತಂದೆ ಸಿದ್ದಯ್ಯ ಜೂ.17ರಂದು ಹುಲ್ಲಹಳ್ಳಿ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು. ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರಿಂದ ಗಾಬರಿಗೊಂಡ ನಾಗೇಂದ್ರ ಆ ಮಹಿಳೆ ಪರಿಶಿಷ್ಟ ಜಾತಿಗೆ ಸೇರಿದವಳಾಗಿರುವುದರಿಂದ ತನ್ನ ವಿರುದ್ಧ ಎಸ್ಸಿ, ಎಸ್ಟಿ ದೌರ್ಜನ್ಯ ಪ್ರಕರಣ ದಾಖಲಾಗಬಹುದು ಎಂದು ಹೆದರಿ ಆಕೆಯನ್ನು ಗ್ರಾಮದ ಹೊರವಲಯದಲ್ಲಿ ಬಿಟ್ಟು, ಪೊಲೀಸ್ ಠಾಣೆಯಲ್ಲಿ ಹೇಳಿಕೆ ನೀಡುವಂತೆ ತಿಳಿಸಿದ್ದಲ್ಲದೇ ಪರಿಸ್ಥಿತಿ ತಿಳಿಯಾದ ನಂತರ ಗ್ರಾಮಕ್ಕೆ ಮರಳಿ ಮದುವೆ ಮಾಡಿಕೊಳ್ಳುವುದಾಗಿ ಹೇಳಿದ್ದನಂತೆ.

ಗೃಹಿಣಿ ತಾನೂ ಗ್ರಾಮದಲ್ಲಿರುವ ಬಗ್ಗೆ ಮಾಹಿತಿ ರವಾನಿಸಿದ ಮೇರೆಗೆ ಮನೆಯವರು ಆಕೆಯನ್ನು ಠಾಣೆಗೆ ಕರೆತಂದು ಪ್ರಿಯಕರ ನಾಗೇಂದ್ರನ ವಿರುದ್ಧ ದೂರು ದಾಖಲಿಸುವಂತೆ ಸೂಚಿಸಿದ್ದಾರೆ. ಆದರೆ ಗೃಹಿಣಿಯಂತೂ ತಾನೂ ಮನಸಾರೆ ನಾಗೇಂದ್ರನ ಜೊತೆ ತೆರಳಿದ್ದು, ಕೇಸ್ ಆಗುತ್ತದೆ ಎಂಬ ಕಾರಣಕ್ಕಾಗಿ ಆತ ತನ್ನನ್ನು ಬಿಟ್ಟು ಹೋಗಿದ್ದಾನೆ. ವಾಪಸ್ ಬಂದು ಮದುವೆಯಾಗುತ್ತಾನೆ. ನಾನು ಅವನನ್ನು ನಂಬಿದ್ದೇನೆ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದಾಳೆ. ಈ ಹಿನ್ನೆಲೆಯಲ್ಲಿ ಪೊಲೀಸರು ಆಕೆಯ ಹೇಳಿಕೆ ದಾಖಲಿಸಿಕೊಂಡು ನಾಪತ್ತೆ ಪ್ರಕರಣವನ್ನು ಅಂತ್ಯಗೊಳಿಸಿದ್ದಾರೆ. ಗೃಹಿಣಿ ಮನೆಯವರು ಆಕೆಯನ್ನು ಕರೆದುಕೊಂಡು ಹೋಗಲು ನಿರಾಕರಿಸಿದ್ದಾರೆ. ಅಲ್ಲದೇ ಆಕೆಯೂ ಕೂಡ ಮನೆಗೆ ಹೋಗಲು ನಿರಾಕರಿಸಿದ್ದರಿಂದ ಗೃಹಿಣಿಗೆ ಮೈಸೂರಿನ ವಿಜಯ ನಗರದಲ್ಲಿರುವ ಮಹಿಳಾ ವಸತಿ ನಿಲಯದಲ್ಲಿ ಆಶ್ರಯ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಬನ್ನೂರಿನ ಜೈ ಭೀಮ್‌ನಗರದಲ್ಲಿ ಬುದ್ಧಪೂರ್ಣಿಮೆ ಆಚರಿಸಲಾಯಿತು. ಈ ವೇಳೆ ಮುಖಂಡ ಬಿ.ಡಿ.ಶಿವಕುಮಾರ್ ಸೇರಿದಂತೆ ಗ್ರಾಮದ ಯುವಕರು ಮತ್ತು ಮುಖಂಡರು ಉಪಸ್ಥಿತರಿದ್ದರು.

ಹೆಡಿಯಾಲ ಪಿಯು ಕಾಲೇಜಿಗೆ ಶೇ.70ರಷ್ಟು ಫಲಿತಾಂಶ



ಮಲ್ಕುಂಡಿ, ಜೂ.23 (ಚನ್ನಪ್ಪ)– ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಶೇ. 70ರಷ್ಟು ಫಲಿತಾಂಶ ಬಂದಿದೆ.

ಕಾಲೇಜಿನಿಂದ ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಗಳ ಪೈಕಿ 46 ಮಂದಿ ಉತ್ತೀರ್ಣರಾಗಿದ್ದಾರೆ. ಇವರಲ್ಲಿ ನಾಲ್ವರು ಅತ್ಯುನ್ನತ ಶ್ರೇಣಿ, 19 ಮಂದಿ ಉನ್ನತ ಶ್ರೇಣಿ, 11 ಮಂದಿ ದ್ವಿತಿಯ ಶ್ರೇಣಿ ಹಾಗೂ 12 ಮಂದಿ ತೃತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕಾಲೇಜಿನ ಮೇಘಾ 515, ಮಹೇಶ್ವರಿ 561, ಎಂ.ಪ್ರಫುಲೆ 536, ಬಿ.ಎಸ್.ಅಪೂರ್ವ 510 ಅಂಕ ಪಡೆದು ಅತ್ಯುನ್ನತ ಶ್ರೇಣಿ ಪಡೆದಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ನಂಜನಗೂಡು, ಜೂ.23(ಸುದರ್ಶನ್)– ತಾಲೂಕಿನ ಸುತ್ತೂರು, ಚಂದ್ರವಾಡಿ, ದೇವನೂರು ಹುರಾ ವಿದ್ಯುತ್ ವಿತರಣಾ ಉಪಕೇಂದ್ರಗಳಲ್ಲಿ 1ನೇ ತ್ರೈಮಾಸಿಕ ನಿರ್ವಹಣಾ ಕಾರ್ಯವನ್ನು ಜೂ.24ರಂದು ಹಮ್ಮಿಕೊಳ್ಳಲಾಗಿರುವುದರಿಂದ ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಗರ್ಲೆ, ಬಿಳಿಗೆರೆ, ಮಲ್ಲೂಪುರ, ಸುತ್ತೂರು ಗ್ರಾಪಂ ಹಾಗೂ ಚಂದ್ರವಾಡಿಯ ಹರದನಹಳ್ಳಿ, ದುಗ್ಗಳ್ಳಿ, ನೆಲ್ಲಿತಾಳಪುರ, ಕುರಿಹುಂಡಿ, ದೇವನೂರಿನ ಗಟ್ಟವಾಡಿ, ಕಾರ್ಯ, ಅಳಗಂಚಿ, ಚುಂಚನಹಳ್ಳಿ, ಹೆಡತಲೆ, ಗಟ್ಟವಾಡಿಪುರ, ಕೋಣನೂರು, ನೇರಳೆ, ಕವಲಂದೆ, ಹುರಾ ವ್ಯಾಪ್ತಿಯ ಹೆಡಿಯಾಲ, ಹುರಾ, ಹಾಡ್ಯ, ಹಲ್ಲರೆ, ದೇವರಾಯಶೆಟ್ಟಿಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನಂಜನಗೂಡು ವಿಭಾಗದ ಚೆಸ್ಕಾಂ ಸಹಾಯಕ ಇಂಜಿನಿಯರ್ ದೇವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಂಪಲಾಪುರ ಸಮೀಪದ ಆರ್.ತುಂಗ ಹೊಸಕೊಪ್ಪಲು ಹಾಲಿನ ಡೇರಿಗೆ ಅಧ್ಯಕ್ಷರಾಗಿ ರಘು ಹಾಗೂ ಉಪಾಧ್ಯಕ್ಷರಾಗಿ ಗುರುಮೂರ್ತಿ ಆಯ್ಕೆಯಾದರು. ಈ ವೇಳೆ ನಿರ್ದೇಶಕರಾದ ಮೋಟೇಗೌಡ, ನಿಂಗೇಗೌಡ, ಬಸವೇಗೌಡ, ಶಿವಮ್ಮ, ರಾಜಮಣಿ, ಮಾದೇಗೌಡ, ಮಹದೇವನಾಯ್ಕ, ಪಿರಿಯಾಪಟ್ಟಣ ಎಪಿಎಂಸಿ ಮಾಜಿ ಅಧ್ಯಕ್ಷ ಆರ್.ಟಿ.ರೇವಣ್ಣ, ಗ್ರಾಪಂ ಸದಸ್ಯರಾದ ಹರೀಶ್, ಪರಮೇಶ್, ಬೋರೇಗೌಡ, ಎನ್.ಹರೀಶ್, ಬೀರೇಶ್, ವಿರೂಪಾಕ್ಷ, ನಿಂಗರಾಜ್, ರಾಮನಾಯ್ಕ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಬೈಲುಕುಪ್ಪೆ, ಜೂ.23– ಮನೆ ಬೀಗ ಮುರಿದು ಟಿವಿ ಹಾಗೂ ಚಿನ್ನಾಭರಣ ದೋಚಿದ ಘಟನೆ ಬೈಲುಕುಪ್ಪೆ ಗ್ರಾಮದಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಕೀರ್ತಿ ಎಂಬುವವರು ಕುಟುಂಬ ಸಮೇತ ಜೂ.12ರಂದು ಸಂಜೆ ಧರ್ಮಸ್ಥಳಕ್ಕೆ ಹೋಗಿದ್ದರು. ಜೂ.20ರಂದು ರಾತ್ರಿ ಹಿಂತಿರುಗಿದಾಗ ಮನೆಯ ಬೀಗ ಒಡೆದಿರುವುದು ಕಂಡು ಬಂದಿದೆ. ಖದೀಮರು ಮನೆಯಲ್ಲಿದ್ದ ಎಲ್‌ಇಡಿ ಟಿವಿ ಮತ್ತು 16 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿದ್ದಾರೆ. ಈ ಸಂಬಂಧ ಬೈಲುಕುಪ್ಪೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಶೋಷಣೆಗೆ ಒಳಗಾದವರಿಗೆ ಪರಿಹಾರ ನೀಡುವ ಕೆಲಸವಾಗಲಿ



ಸರಗೂರು, ಜೂ.23(ನಾಗೇಶ್)– ಮಾನವ ಹಕ್ಕು ಹಾಗೂ ಅವುಗಳ ಅನುಷ್ಠಾನದ ಬಗ್ಗೆ ತಿಳಿಯುವ ಜೊತೆಗೆ ಶೋಷಣೆಗೆ ಒಳಗಾದವರಿಗೆ ಪರಿಹಾರ ನೀಡುವ ಕೆಲಸವಾಗಬೇಕು ಎಂದು ಸಮಾಜ ಸೇವಕ ಬಾಬುನಾಯಕ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿಗಳ ತಾಲೂಕು ಘಟಕ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಾತಿ, ಮತ, ಧರ್ಮ, ಲಿಂಗ, ವರ್ಣ, ಶ್ರೀಮಂತ, ಬಡವ, ಭಾಷೆಯ ಹೆಸರಿನಲ್ಲಿ ಜಗತ್ತಿನಾದ್ಯಂತ ಒಂದಲ್ಲಾ ಒಂದು ರೀತಿ ಕೆಲವರ ಮೇಲೆ ಶೋಷಣೆ ನಡೆಯುತ್ತಿದ್ದು, ಇಂತಹವರಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಸಂಘವು ಸ್ಪಂದಿಸಬೇಕು ಎಂದು ಸಲಹೆ ನೀಡಿದರು.

ಸಮಾನತೆ ಹಕ್ಕು, ಸ್ವಾತಂತ್ರ್ಯಹಕ್ಕು, ಶೋಷಣೆ ವಿರುದ್ದ ಹಕ್ಕು ಪಡೆದುಕೊಳ್ಳಬೇಕಾದ ನಿಯಮಗಳನ್ನು ರಾಜ್ಯ ಉಪಾಧ್ಯಕ್ಷರು ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿ ಹಾಗೂ ಕಾರ್ಯದರ್ಶಿ ಉಮೇಶ್ ಸಂಘದ ಸದಸ್ಯರಿಗೆ ತಿಳಿಸಿದರು.

ವಕೀಲ ಬಿ.ಪಿ.ವಿಜಯರಾಜು ಮಾತನಾಡಿದರು. ಕಾರ್ಯಕ್ರಮದಲ್ಲಿ ಪಪಂ ಅಧ್ಯಕ್ಷೆ ರಾಧಿಕಾ, ಚಾಮರಾಜನಗರ ರಾಷ್ಟ್ರೀಯ ಮಾನವ ಹಕ್ಕುಗಳ ಸಮತಿ ಜಿಲ್ಲಾಧ್ಯಕ್ಷರು ನಾಗೇಂದ್ರ, ಸರಗೂರು ತಾಲೂಕು ಅಧ್ಯಕ್ಷ ಕುಮಾರ್, ಗೌರವಾಧ್ಯಕ್ಷ ಎನ್.ಕೆ.ಲಕ್ಷ್ಮೀಕಾಂತ್, ಉಪಾಧ್ಯಕ್ಷ ಎಂ.ರಾಜು, ಕಾನೂನು ಸಲಹೆಗಾರ ಕೆ.ಪಿ.ಪುರುಷೋತ್ತಮ, ಸುಪ್ರೀತ್ ಕುಮಾರ್, ಕಾರ್ಯಾಧ್ಯಕ್ಷೆ ಜಿ.ಅನು, ಜಂಟಿ ಕಾರ್ಯದರ್ಶಿ ಚಿರಂಜೀವಿ, ಖಜಾಂಚಿ ರವಿಕುಮಾರ್, ಸಂಘಟನಾ ಕಾರ್ಯದರ್ಶಿ ಪ್ರಕಾಶ್, ಮುಖಂಡರಾದ ಜಯಪ್ರಕಾಶ್, ಬಸವಣ್ಣ, ವಿಶ್ವ, ವಿವೇಕಾನಂದ ಪಾಟೀಲ್, ಮನೋಜ್ ಇದ್ದರು.

ರಾಷ್ಟ್ರೀಯ ಮಲೇರಿಯಾ ವಿರೋಧಿ ಮಾಸಾಚರಣೆ



ಹಂಪಾಪುರ, ಜೂ.23(ರಾಜೇಶ್)– ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಳ್ಳಿ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಗುರುವಾರ ಹಂಪಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಮಲೇರಿಯಾ ವಿರೋಧಿ ಮಾಸಾಚರಣೆ ಅಂಗವಾಗಿ ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗ ಗಳ ನಿಯಂತ್ರಣ ಕಾರ್ಯಕ್ರಮ ನಡೆಯಿತು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಚಿದಂಬರ್ ಮಾತನಾಡಿ, ಇಲಾಖೆಯ ಸಿಬ್ಬಂದಿ ಹಾಗೂ ಸಾರ್ವಜನಿಕ ಸಹಕಾರದಿಂದ ಜಿಲ್ಲೆಯಲ್ಲಿ ಮಲೇರಿಯಾ ರೋಗ ಶೂನ್ಯ ಹಂತದಲ್ಲಿದೆ. ಇದು ಹೀಗೆಯೇ ಮುಂದುವರೆಯಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ತಾಲೂಕು ಆರೋಗ್ಯಾಧಿಕಾರಿ ಡಾ.ರವಿ ಕುಮಾರ್ ಮಾತನಾಡಿ, ಮಲೇರಿಯಾ ಅನಾಫಿಲಿಸ್ ಸೊಳ್ಳೆಗಳಿಂದ ಹರಡುವ ಸಾಂಕ್ರಾಮಿಕ ರೋಗ. ದೇಶದಲ್ಲಿ ವಾರ್ಷಿಕ 15 ಲಕ್ಷ ಮಲೇರಿಯಾ ಪ್ರಕರಣಗಳು ವರದಿಯಾಗುತ್ತಿವೆ. ಚಳಿ, ಜ್ವರ, ತಲೆನೋವು, ಮೈ-ಕೈ ನೋವು ಮುಂತಾದ ಲಕ್ಷಣಗಳು ಕಂಡು ಬಂದರೆ ಕೂಡಲೇ ಸರ್ಕಾರಿ ಆಸ್ಪತ್ರೆಗೆ ತೋರಿಸಬೇಕು ಎಂದು ಸಲಹೆ ನೀಡಿದರು.

ಗ್ರಾಪಂ ಅಧ್ಯಕ್ಷೆ ಅಲಮೇಲಮ್ಮ ಕಾರ್ಯಕ್ರಮ ಉದ್ಘಾಟಿಸಿದರು. ಈ ವೇಳೆ ಹಂಪಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ನಿರೀಕ್ಷಣಾಧಿಕಾರಿ ರಾಮಚಂದ್ರ ನಾಯಕ, ಸಿಬ್ಬಂದಿ ಸುಮಾ, ಪ್ರಾಂಶುಪಾಲರಾದ ಇಂದ್ರಾಣಿ, ಉಪ ಪ್ರಾಂಶುಪಾಲರಾದ ಎನ್.ಗೀತಾ, ಉಪನ್ಯಾಸಕರು ಹಾಗೂ ಗ್ರಾಪಂ ಸದಸ್ಯರು, ವಿದ್ಯಾರ್ಥಿಗಳು ಇದ್ದರು.

ದೈಹಿಕ, ಮಾನಸಿಕ ಆರೋಗ್ಯಕ್ಕೆ ಯೋಗ ಅಗತ್ಯ




ಕೆ.ಆರ್.ನಗರ, ಜೂ.23(ಕೆಟಿಆರ್)–ಯೋಗಾಭ್ಯಾಸದಿಂದ ದೈಹಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದು ಪುರಸಭಾ ಅಧ್ಯಕ್ಷ ಕೋಳಿಪ್ರಕಾಶ್ ತಿಳಿಸಿದರು.

ಪಟ್ಟಣದ ಪುರಸಭಾ ಬಯಲು ರಂಗ ಮಂದಿರದಲ್ಲಿ ಪತಂಜಲಿ ಯೋಗಾಶ್ರಮ ಟ್ರಸ್ಟ್ ಮತ್ತು ಪುರಸಭೆಯ ವತಿಯಿಂದ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿನಿತ್ಯ ಒಂದಲ್ಲಾ ಒಂದು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದೇವೆ. ಅದರಿಂದ ಹೊರಬರಲು ಯೋಗಾಭ್ಯಾಸದಿಂದ ಮಾತ್ರ ಸಾಧ್ಯ ಎಂದರು. ವೈದ್ಯರಾದ ರಜನೀಕಾಂತ್ ಮಾತನಾಡಿ, ಯೋಗಾಸನ ದೈಹಿಕ ಮತ್ತು ಮಾನಸಿಕವಾಗಿ ನಿಯಂತ್ರಣ ಸಾಧನವಾಗಿದ್ದು, ಮನಸ್ಸನ್ನು ನಿಯಂತ್ರಿಸುವುದೇ ನಿಜವಾದ ಯೋಗಾಸನ ಎಂದರು. ಹೊಳೆನರಸೀಪುರ ವೈದ್ಯಾಧಿಕಾರಿ ನಟರಾಜ್, ಉಪನ್ಯಾಸಕ ಹೆಚ್.ಡಿ.ರಾಘವೇಂದ್ರ ಪತಂಜಲಿ ಯೋಗಾಶ್ರಮ ಟ್ರಸ್ಟ್‌ನ ಅಧ್ಯಕ್ಷ ಪಿ.ಆರ್.ವಿಶ್ವನಾಥ ಶೆಟ್ಟಿ ಯೋಗಾಸನದ ಬಗ್ಗೆ ಮಾತನಾಡಿದರು.

ಪುರಸಭಾ ಮಾಜಿ ಅಧ್ಯಕ್ಷ ರಾಜಶ್ರೀಕಾಂತ್, ಪುರಸಭಾ ಸದಸ್ಯರಾದ ತೋಂಟದಾರ್ಯ, ಮಂಜುಳಾ ಚಿಕ್ಕ ವೀರಪ್ಪ ಮಾಜಿ ಸದಸ್ಯ ವಿನಯ್, ಮುಖಂಡರಾದ ಪುಟ್ಟು, ಮಹದೇವ್, ಪ್ರಧಾನ ಕಾರ್ಯದರ್ಶಿ ಪ್ರಸಾದ್, ಕಾರ್ಯದರ್ಶಿ ಜಗದೀಶ್, ಖಜಾಂಜಿ ಛತ್ರಪ್ಪ ನಿರ್ದೇಶಕರು ಕೆ.ಎ.ರಮೇಶ್, ಮಹದೇವ್, ಚೈತನ್ಯ, ಯೋಗಪಟು ಗಳಾದ ರೇವಣ್ಣ, ಯೋಗವಣಿ, ಚೀರ್ನಹಳ್ಳಿ ಆನಂದ್ ಇತರರಿದ್ದರು.

ಆಗಸ್ಟ್ ಮೊದಲ ವಾರದಿಂದ ಚುಂಚನಕಟ್ಟೆಯ ಶ್ರೀರಾಮ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವಿಕೆ ಪ್ರಾರಂಭ: ಸಾ.ರಾ.ಮಹೇಶ್



ಭೇರ್ಯ, ಜೂ.23(ಮಹೇಶ್)– ಚುಂಚನಕಟ್ಟೆಯ ಶ್ರೀರಾಮ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆ ಪಡೆದಿರುವ ನಿರಾಣಿ ಶುಗರ್ಸ್‌ನವರು ಆಗಸ್ಟ್ ಮೊದಲ ವಾರದಿಂದ ಕಬ್ಬು ಅರೆಯುವಿಕೆ ಪ್ರಾರಂಭಿಸಲಿದ್ದಾರೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಮಿರ್ಲೆ ಹೋಬಳಿಯ ಹನುಮನಹಳ್ಳಿ ಗ್ರಾಮದಲ್ಲಿ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ತೊರೆದು ಜೆಡಿಎಸ್‌ಗೆ ಬಂದವರಿಗೆ ಪಕ್ಷದ ಶಾಲು ಹಾಕಿ ಸ್ವಾಗತಿಸಿ ಮಾತನಾಡಿದ ಅವರು, ರೈತರ ಜೀವ ನಾಡಿ ಶ್ರೀರಾಮ ಸಕ್ಕರೆ ಕಾರ್ಖಾನೆ ಹಲವು ವರ್ಷಗಳ ಹಿಂದೆ ಹಲವು ಕಾರಣಗಳಿಂದ ನಿಂತು ಹೋಗಿತ್ತು. ಕಾರ್ಖಾನೆ ಪ್ರಾರಂಭಕ್ಕೆ ಹಗಲಿರುಳು ಶ್ರಮಿಸಿದ್ದೇನೆ. ಕೆಲವರು ಏನೇ ಹೇಳಿದರೂ ನನ್ನ ಕ್ಷೇತ್ರದ ರೈತರನ್ನು ಉಳಿಸುವ ಜವಾಬ್ದಾರಿ ನನ್ನ ಮೇಲೆ ಇದೆ. ಕಬ್ಬು ಬೆಳೆಗಾರರನ್ನು ಉಳಿಸುವ ಸಂಬಂಧ ಮತ್ತೆ ನಿರಾಣಿ ಶುಗರ್ಸ್‌ನವರಿಗೆ ಗುತ್ತಿಗೆ ಕೊಡಿಸಿ ಪುನಾರಂಭ ಮಾಡಿಸಲಾಗಿದೆ. ಜೂನ್ ಮತ್ತು ಜುಲೈನಲ್ಲಿ ಕಬ್ಬನ್ನು ನಿರಾಣಿ ಶುಗರ್ಸ್‌ನವರೆ ಗುತ್ತಿಗೆ ಪಡೆದಿರುವ ಪಾಂಡುಪುರ ಕಾರ್ಖಾನೆಗೆ ಸಾಗಿಸಲು ಕ್ರಮ ಕೈಗೊಳ್ಳಲಾಗಿದೆ. ಆದ್ದರಿಂದ ಕಬ್ಬು ಬೆಳೆಗಾರರು ಜೂನ್ ಮತ್ತು ಜುಲೈ ತಿಂಗಳಲ್ಲಿ ಕಟಾವು ಮಾಡುವ ಕಬ್ಬನ್ನು ಪಾಂಡವಪುರ ನಿರಾಣಿ ಶುಗರ್ಸ್‌ನವರಿಗೆ ಸಾಗಾಣಿಕೆ ಮಾಡಬೇಕು ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ವೀರಶೈವ ಸಮಾಜ ಅಭಿ, ಚಂದ್ರಶೇಖರ್, ನಿಂಗರಾಜು, ಜಲೇಂದ್ರ, ಸೋಮಣ್ಣ, ಕುಮಾರ್, ಅಂಕಿತ್, ಪುನೀತ್, ಮಹೇಶ್, ಅನಿಲ್‌ರಾಜ್, ಶಶಿ, ರಾಜ, ಸುರೇಶ್ ಅವರು ಕಾಂಗ್ರೆಸ್ ತೊರೆದು ಜೆಡಿಎಸ್ ಪಕ್ಷ ಸೇರಿದರು. ಕಾರ್ಯಕ್ರಮದಲ್ಲಿ ರಾಜ್ಯ ಜೆಡಿಎಸ್ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಅಧ್ಯಕ್ಷ ಮೆಡಿಕಲ್ ರಾಜಣ್ಣ ಉಪಾಧ್ಯಕ್ಷ ತುಕರಾಂ, ಸಾ.ರಾ.ಯುವ ಸೇನೆಯ ರಾಜ್ಯಾಧ್ಯಕ್ಷ ಮೇಲೂರು ಗೌತಮ, ತಾಲೂಕು ಅಧ್ಯಕ್ಷ ಬಂಡೆ ಕುಮಾರ್, ಮುಖಂಡರಾದ ಮೋಹನ್, ಅಪ್ಪಾಜಿ ಇದ್ದರು.

ಅರ್ಜಿ ಆಹ್ವಾನ

ತಿ.ನರಸೀಪುರ, ಜೂ23(ಎಸ್‌ಕೆ)– ಎಸ್‌ಎಸ್ ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆ ಯಲ್ಲಿ ಶೇ. 85ರಷ್ಟು ಅಂಕಗೊಂದಿಗೆ ತೇಗರ್ಡೆಯಾಗಿರುವ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ನಾಯಕ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಪ್ರತಿಭಾನ್ವಿತ ವಿದ್ಯಾರ್ಥಿಗಳು ಅಂಕಪಟ್ಟಿ ನಕಲು, ಪೂರ್ಣ ವಿಳಾಸ, ದೂರವಾಣಿ ಮತ್ತು ಒಂದು ಭಾವಚಿತ್ರವನ್ನು ಜಿಲ್ಲಾ ಅಧ್ಯಕ್ಷರು, ಕರ್ನಾಟಕ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟ (ರಿ), ನಂ.283. ಭೈರವೇಶ್ವರ ದೇವಸ್ಥಾನದ ರಸ್ತೆ, ನಾಯಕರ ಬೀದಿ, ಹಿನ್‌ಕಲ್, ಮೈಸೂರು– 570030ಕ್ಕೆ ಜೂ. 30ರೊಳಗೆ ತಲುಪಿಸಲು ಕೋರಲಾಗಿದೆ. ಮಾಹಿತಿಗೆ ಅಧ್ಯಕ್ಷರು ತಾಯೂರು ಪ್ರಕಾಶ್ ಮೊ: 9448034316, 88678 16790 ಸಂಪರ್ಕಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	777 ಚಾರ್ಲಿ (ಕ): ಬೆ.10.05ಕ್ಕೆ, ಮ.3.50ಕ್ಕೆ, ರಾ.7ಕ್ಕೆ, ರಾ.10.10ಕ್ಕೆ, ತುರ್ತು ನಿರ್ಗಮನ (ಕ): ಮ.1.10ಕ್ಕೆ.
ಸ್ಕ್ರೀನ್ 2	ಜುಗ್‌ಜುಗ್ ಜೀಯೋ (ಹಿಂ): ಬೆ.10.10ಕ್ಕೆ, ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ, ವಿಕ್ರಂ (ತ): ಮ.1ಕ್ಕೆ.
ಸ್ಕ್ರೀನ್ 3	ಬಡ್ಡೀಸ್ (ಕ): ಬೆ.10.30ಕ್ಕೆ, ತ್ರಿವಿಕ್ರಮ (ಕ): ಮ.1.20ಕ್ಕೆ, ಚೋರ್‌ಬಜಾರ್ (ತೆ): ಸಂ.4.30ಕ್ಕೆ, ಸಮ್ಮತಮೆ (ತೆ): ರಾ.7.10ಕ್ಕೆ, ದಿ ಬ್ಲಾಕ್ ಫೋನ್ (ಇಂ): ರಾ.9.55ಕ್ಕೆ.
ಸ್ಕ್ರೀನ್ 4	ಹರಿಕಥೆ ಅಲ್ಲ ಗಿರಿಕಥೆ (ಕ): ಬೆ.10.30ಕ್ಕೆ, ರಾ.7.20ಕ್ಕೆ, ಮಾಯೋನ್ (ತ): ಮ.1.15ಕ್ಕೆ, ಮಾಮನಿತನ್ (ತ): ಸಂ.4.05ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	777 ಚಾರ್ಲಿ (ಕ): ಬೆ.9.40ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಹರಿಕಥೆ ಅಲ್ಲ ಗಿರಿಕಥೆ (ಕ): ಮ.1ಕ್ಕೆ.
ಸ್ಕ್ರೀನ್ 2	ಜುಗ್‌ಜುಗ್ ಜೀಯೊ (ಹಿಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಹರಿಕಥೆ ಅಲ್ಲ ಗಿರಿಕಥೆ (ಕ): ಬೆ.9.55ಕ್ಕೆ, ಸಂ.6.50ಕ್ಕೆ, 777 ಚಾರ್ಲಿ (ಕ): ಮ.12.35ಕ್ಕೆ, ರಾ.9.30ಕ್ಕೆ, ತುರ್ತು ನಿರ್ಗಮನ (ಕ): ಮ.3.55ಕ್ಕೆ.
ಸ್ಕ್ರೀನ್ 4	ತುರ್ತು ನಿರ್ಗಮನ (ಕ): ಬೆ.10.25ಕ್ಕೆ, ಬಡ್ಡೀಸ್ (ಕ): ಮ.1.15ಕ್ಕೆ, ತ್ರಿವಿಕ್ರಮ (ಕ): ಸಂ.4.10ಕ್ಕೆ, ಮಾಮನಿತನ್ (ತ): ರಾ.7.15ಕ್ಕೆ, ಸಮ್ಮತಮೆ (ತೆ): ರಾ.9.50ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ತುರ್ತು ನಿರ್ಗಮನ (ಕ): ಬೆ.10.30ಕ್ಕೆ, ಬಡ್ಡೀಸ್ (ಕ): ಮ.1.15ಕ್ಕೆ, ಚೋರ್ ಬಜಾರ್ (ತೆ): ಸಂ.4ಕ್ಕೆ, ಪಟ್ಟಾಂಪೂಚಿ (ತ): ಸಂ.6.45ಕ್ಕೆ, ಪ್ರಕಾಶನ್ ಪರಕ್ಕಟ್ಟೆ (ಮ): ರಾ.9.30ಕ್ಕೆ.
ಸ್ಕ್ರೀನ್ 2	ಹರಿಕಥೆ ಅಲ್ಲ ಗಿರಿಕಥೆ (ಕ): ಬೆ.10.45ಕ್ಕೆ, ಮ.1.15ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, 777 ಚಾರ್ಲಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	777 ಚಾರ್ಲಿ (ಕ): ಬೆ.10.15ಕ್ಕೆ, ಮ.1.25ಕ್ಕೆ, ಸಂ.4.35ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ತ್ರಿವಿಕ್ರಮ (ಕ): ಬೆ.10.35ಕ್ಕೆ, ಸಂ.4.10ಕ್ಕೆ, ಪಟ್ಟಾಂಪೂಚಿ (ತ): ಮ.1.30ಕ್ಕೆ, ಮಾಮನಿತನ್ (ತ): ರಾ.7.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357088

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2(ಕ): ಸಂ.5.35ಕ್ಕೆ, ರಾಚ್ ಸೌಂಡ್ಸ್ ಅಂಡ್ ಲೈಟ್ಸ್ (ತು): ಸಂ.6.05ಕ್ಕೆ, ಮೆಟಡೊರ್ (ಕ): ಬೆ.11.45ಕ್ಕೆ, ಟಾಪ್ ಗನ್ (ಇಂ): ಮ.2.45ಕ್ಕೆ, ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಬೂಲ್‌ಬುಲಯ್ಯ 2(ಹಿಂ): ಮ.12.30ಕ್ಕೆ, ಸಂ.6.40ಕ್ಕೆ, ಮೇಜರ್ (ಹಿಂ): ಮ.1.05ಕ್ಕೆ, ರಾ.7.15ಕ್ಕೆ, ರಾ.9.20ಕ್ಕೆ, ವಿಕ್ರಮ್ (ತ): ಬೆ.8.30ಕ್ಕೆ, ಬೆ.9.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.35ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9ಕ್ಕೆ, ರಾ.10.30ಕ್ಕೆ, ಮೇಜರ್ (ತೆ): ಬೆ.9.25ಕ್ಕೆ, ಸಂ.4.10ಕ್ಕೆ, ರಾ.10.20ಕ್ಕೆ, F3 (ತೆ): ಮ.3.35ಕ್ಕೆ, ಸರ್ಕಾರು ವಾರಿ ಪಾಠ (ತೆ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಬಡ್ಡೀಸ್ (ಕ) 2 ಪ್ರದರ್ಶನ, ವಿಕ್ರಮ್ (ತ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜುಗ್ ಜುಗ್ ಜೀಯೋ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಹರಿಕಥೆ ಅಲ್ಲ ಗಿರಿಕಥೆ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಚಾರ್ಲಿ–777 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಮಾ ಮನಿಧನ್ (ತ)	4 ಪ್ರದರ್ಶನಗಳು
ಸಂಗಂ	
ಹರಿಕಥೆಯಲ್ಲ ಗಿರಿಕಥೆ (ಕ)	4 ಪ್ರದರ್ಶನಗಳು
ಲಿಡೋ	
ತುರ್ತು ನಿರ್ಗಮನ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ತ್ರಿವಿಕ್ರಮ (ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಜುಗ್ ಜುಗ್ ಜೀಯೋ (ಹಿ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ತ್ರಿವಿಕ್ರಮ (ಕ)	4 ಪ್ರದರ್ಶನಗಳು